


ಅಖಿಲ ಭಾರತ ಪತ್ರಿಕೆ
ಆಗಸ್ಟ್ 2021

# ಶ್ರೀ ಅರವಿಂದರು: ಜೀವನದ ರೂಪು-ರೇಷೆ

ಬೆಲೆ : 15/-



ಜೀವ–ಜೀವನದ ಆ ಗುಹ್ಯ–ಗೂಢದುದ್ಗಮದ ತಾಣದೊಳಗೆ
ಇದು ನಿಯತಿ ಸಹಜ ಇದು ಋತದ ಓಜ ಚೈತನ್ಯದಾತ್ಮದೊಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 2  ಪುಟ 311)**

Photo: Imaging Savitri

**ಅಖಿಲ ಭಾರತ ಪತ್ರಿಕೆ**

**ಆಗಸ್ಟ್ 2021**

ಸಂಪುಟ: 31 ಸಂಚಿಕೆ: 08


## ಪರಿವಿಡಿ

# ಶ್ರೀ ಅರವಿಂದರು: ಜೀವನದ ರೂಪು–ರೇಷೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶ್ರೀ ಅರವಿಂದರು: ಜೀವನದ ಸಂಕ್ಷಿಪ್ತ ರೂಪು–ರೇಷೆ** 7
ಅನು: ಪುಟ್ಟು ಕುಲಕರ್ಣಿ

**ಆರ್ಯ** 19
ಅನು: ಡಾ॥ ಬಿ.ಆರ್.ಭೀಡ್

**ಶ್ರೀಮಾತೆ ಮತ್ತು ಶ್ರೀ ಅರವಿಂದರು** 28
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ ತತ್ತ್ವಬೋಧನೆ** 33
ಅನು: ಡಾ॥ ಮಹಾದೇವ ಸಕ್ರಿ

**ಅವತಾರ** 39
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ ಜೀವಯಾನ** 44
ಅನು: ನಾಗಜ್ಯೋತಿ ಮಾನ್ವಿ

**ಶ್ರೀ ಅರವಿಂದರ ಕವನಗಳು** 55
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ವೇದ ರಹಸ್ಯ'** 58
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 65
ಅನು: ಜಾನ್ವಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 70
– ಡಾ॥ ಶಂ.ಬಾ. ಜೋಶಿ



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಮಾನವನನ್ನು ದಿವ್ಯಮಾನವನನ್ನಾಗಿ ರೂಪಾಂತರಗೊಳಿಸುವಲ್ಲಿ ಮತ್ತು ನಮ್ಮ ಮನುಕುಲದ ಜೀವನವನ್ನು ದಿವ್ಯ–ಜೀವನವನ್ನಾಗಿಸುವಲ್ಲಿ ಶ್ರೀ ಅರವಿಂದರ ಜೀವನವು ಒಂದು ಉದಾಹರಣೆಯಾಗಿದೆ. ಅವರು ವಿಶ್ವದಂತೆಯೇ ಸರ್ವವ್ಯಾಪಿಯಾಗಿದ್ದಾರೆ. ಹೀಗಾಗಿ ಅವರ ಜೀವನದ ಎಲ್ಲಾ ಆಯಾಮಗಳನ್ನೂ ನಾವು ಕಾಣುವದು ತುಂಬಾ ದೊಡ್ಡ ಸವಾಲಿನದೇ ಆಗಿದೆ. ಇಲ್ಲಿ, ಅವರ ವೈಶ್ವಿಕ ಸ್ವರೂಪದ ಕೆಲವೊಂದು ಅಂಶಗಳನ್ನು ಮಾತ್ರ, ನೇರವಾಗಿ ಅವರದೇ ಅಭಿವ್ಯಕ್ತಿಗಳ ಮೂಲಕ ಅರಿತುಕೊಳ್ಳುವ ಪ್ರಯತ್ನವಿದೆ. (ಎಐಮ್)

*

## ಸಂಪಾದಕೀಯ

ವಿಶ್ವದ ವಿಕಾಸದ ಪಥದಲ್ಲಿ 150 ವರ್ಷ ನಗಣ್ಯವಾಗಿರಬಹುದು. ಆದರೆ ಸೀಮಿತ ಅವಧಿಯ ಬದುಕನ್ನು ಮಾತ್ರ ಪಡೆದುಕೊಂಡು ಬಂದಿರುವ ಮನುಕುಲಕ್ಕೆ ಈ 150 ವರ್ಷಗಳು ಎಂದರೆ ತುಂಬ ಮಹತ್ವದ್ದಾಗಿವೆ. ವಿಕಾಸದ ಪಥದಲ್ಲಿ – ಅದು ಅತ್ಯಂತ ನಿಧಾನ ಗತಿಯಲ್ಲಿದೆ ಎಂದು ಪರಿಭಾವಿಸಿಕೊಂಡಿರುವ ಮನುಕುಲದ ಚಿಂತನಗಳಲ್ಲಿ – ವಿಚಲನೆಯು ನಿಸರ್ಗ ಸಹಜವೋ ಅಥವಾ ಮಾನವ ಕೃತವೋ ಎನ್ನುವದು ಜಿಜ್ಞಾಸೆಯ ವಿಷಯವಾಗಿದೆ. ಇದು ಮಾನವನ ಚಿಂತನಾ ಕ್ರಮದಲ್ಲಿ ಉದ್ಭವಿಸಿದ ಸ್ವರೂಪವೋ ಅಥವಾ ಇದೂ ನಿಯತಿಯಂತೆಯೇ ಆಗುತ್ತಿದೆಯೋ ಎನ್ನುವ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಅರಸುವದು ಸವಾಲಿನದೇ ಆಗಿದೆ. ಮಾನವ ಕುಲವನ್ನು ವಿನಾಶದತ್ತ ಒಯ್ಯುತಿರುವ ಘಟನೆಗಳು ಮಾನವನಿಂದಲೇ ನಿರ್ಮಿತಿಗೊಂಡದ್ದು ಎನ್ನುವದನ್ನು ಸಾಬೀತು ಪಡಿಸಲೆಂದೇ, ವಿಶ್ವಶಕ್ತಿಯೂ ಸಹಿತ 'ಮಾನವನ ಸ್ವರೂಪದಲ್ಲಿಯೇ" ಅವತರಿಸಿ, ಈ ಪತನವನ್ನು ಮತ್ತೆ ನೇರಗೊಳಿಸುತ್ತಿರುವ ಪರಂಪರೆಯನ್ನು ನಾವು ಅರಿತಿದ್ದೇವೆ.

ಅರವತ್ತು ವರ್ಷಗಳ ಸಂವತ್ಸರದ ಎರಡು ಚಕ್ರಗಳನ್ನು – ಅಂದರೆ 120 ವರ್ಷಗಳನ್ನು – ಒಂದು 'ಪೂರ್ಣಾಯುಷ್ಯ' ಎನ್ನಲಾಗುತ್ತಿತ್ತು. ಆದರೆ ಯುಗ ಪರಿವರ್ತನೆಯ ಪಥಧಲ್ಲಿ ಅದು ಮುಂದೆ 'ಶತಾಯುಷ್ಯ'ಕ್ಕೆ ಅವತರಣಗೊಂಡಿತು. ಮತ್ತೂ ಮುಂದೆ ಬಂದಂತೆ ಇದು ಬೇರೆ ಬೇರೆ ಹೆಸರಿನಲ್ಲಿ ನಿರೂಪಿತಗೊಂಡು,

ಅವಧಿಯನ್ನು ಕಡಿಮೆಗೊಳಿಸಿಕೊಳ್ಳುತ್ತ ಸಾಗಿದಂತೆ ಕಾಣುತ್ತದೆ. ಹೀಗಾಗಿ ಇಲ್ಲಿ ಶ್ರೀಅರವಿಂದರ '150ನೇ ಜನ್ಮ ದಿನಾಚರಣೆಯ' ಹಿನ್ನೆಲೆಯಲ್ಲಿ, ಅವರನ್ನು 'ಚಿರಂಜೀವಿ' ಎಂದು ಗೌರವಿಸಲಾಗುತ್ತಿದೆ. ಅದೇ ರೀತಿ 'ಅವತಾರ'ದ ಪರಿಕಲ್ಪನೆಯಲ್ಲಿಯೂ ಅವರ 'ವೈಶ್ವಿಕ ವ್ಯಕ್ತಿತ್ವ'ವು ಅವರನ್ನು ವಿಭೂತಿ ಪುರುಷರನ್ನಾಗಿಸಿದೆ.


ಅವತಾರದ ಹಿನ್ನೆಲೆ, ವೇದಗಳಿಗೆ ಭಾಷ್ಯ ನಿರೂಪಣೆ, ಆಧುನಿಕ ಮಾನವ ಕುಲದ ಮೇಲೆ ಇರುವ ವೈಜ್ಞಾನಿಕ ಪ್ರಭಾವ, ಊರ್ಧ್ವಗಾಮಿಯಾಗಿ ವಿಕಾಸಗೊಳ್ಳಬೇಕೆಂಬ ಮಾನವನ ಚಿಂತನದ ತುಡಿತಗಳು – ಆಕಾಶಯಾನ, ಚಂದ್ರನನ್ನು ತಲುಪಿದ್ದು, ಮಂಗಳನ ಅಂಗಳಕ್ಕೂ ಪ್ರವೇಶ ಪಡೆದದ್ದು, ಅನೂಹ್ಯ ಬ್ರಹ್ಮಾಂಡದಲ್ಲಿ ಘಟಿಸುತ್ತಿರುವ ನಕ್ಷತ್ರಗಳ ರಚನೆ–ವಿಕಾಸ–ಸ್ಫೋಟ–ಕಪ್ಪು ರಂಧ್ರ ಇತ್ಯಾದಿ ಎಲ್ಲವೂ ಮನುಕುಲವು ವೇಗೋತ್ಕರ್ಷದಲ್ಲಿ ಆರೋಹಣಗೊಳ್ಳುತ್ತಿರುವಲ್ಲಿ ಅತ್ಯಾವಶ್ಯವಾಗಿರುವ 'ಚಿತ್ತದ ಸ್ವರೂಪ'ವನ್ನು ಶ್ರೀ ಅರವಿಂದರು ತಮ್ಮ ಕೃತಿಗಳಲ್ಲಿ ದೃಷ್ಟಾರರಾಗಿ ಅಭಿವ್ಯಕ್ತಿಸಿದ್ದಾರೆ. ಮಾನವನು ಅತಿಮಾನವನಾದಾಗಲೇ ದಿವ್ಯ ಜೀವನ ಸಾಧ್ಯ; ಅದಕ್ಕಾಗಿ ಈಗಾಗಲೇ ನಿರೂಪಿತವಾಗಿರುವ ವೇದದ 'ಜ್ಞಾನಕಾಂಡ'ದಲ್ಲಿರುವ ಆ ವಿಶ್ವ ರಹಸ್ಯಗಳನ್ನು ಅರಿತು, ಎಲ್ಲರಿಗೂ ತಿಳಿಯುವಂತೆ ಅವರ ಅಭಿವ್ಯಕ್ತಿಗಳು ಇಂದು ವಿಶ್ವಾದ್ಯಂತ ಮನ್ನಣೆ ಗಳಿಸಿವೆ.

ಈ ಎಲ್ಲ ವಿವರಗಳನ್ನು, ಈ "ಶ್ರೀ ಅರವಿಂದರು – 150ನೇ ವರ್ಷ"ದಲ್ಲಿ, ಕನ್ನಡ ಭಾಷೆಯಲ್ಲಿಯೂ ಅನುಸ್ಪಂದಿಸುವ ಪ್ರಯತ್ನಗಳು ಈ ಸಂಚಿಕೆಯಿಂದ ಪ್ರಾರಂಭಗೊಳ್ಳುತ್ತಿವೆ. 'ಸಾವಿತ್ರಿ' ಮತ್ತು 'ದಿವ್ಯ ಜೀವನ' ದ ಕನ್ನಡ ಅವತರಣಿಕೆಗಳು ಈಗಾಗಲೇ ಜನಸಮುದಾಯಕ್ಕೆ ಪರಿಚಯವಾಗಿವೆ. ಆದರೆ ಅವರ ವಿದ್ವತ್ ಕೃತಿಗಳಾದ 'ವೇದ ರಹಸ್ಯ' ಅದೇ ರೀತಿ ಭಗವದ್ಗೀತೆಯನ್ನೂ ಸಹಿತ 'ಪೂರ್ಣ ಯೋಗ'ದ ಸ್ವರೂಪದಲ್ಲಿ ನಿರೂಪಿಸಿರುವ 'ಗೀತಾ ಪ್ರಬಂಧ'ಗಳನ್ನು, ಈ ಮೂಲಕ ಕನ್ನಡ ಭಾಷಾ ಸ್ವರೂಪದಲ್ಲಿ ಪರಿಚಯಿಸಲು ಈ ಸಂಚಿಕೆಯಿಂದ ಪ್ರಾರಂಭಿಸಲಾಗಿದೆ. ಅವರು 12 ವರ್ಷದ ಬಾಲಕರಾಗಿದ್ದಾಗಲೇ ಬರೆದ ಕವನ, ಹಾಗೂ ಪ್ರಾರಂಭದ ಅವಧಿಯಲ್ಲಿ, ಬಡೋದೆಯಲ್ಲಿದ್ದಾಗ ರಚಿಸಿರುವ ಕವನಗಳೂ ಸಹಿತ ಇಲ್ಲಿವೆ. ಶ್ರೀಅರವಿಂದರನ್ನು ಅಧ್ಯಯನ ಮಾಡುವಲ್ಲಿ, ಅದೂ ಆಯಾ ಪ್ರದೇಶದ ಭಾಷಾ ಹಿನ್ನೆಲೆಯಲ್ಲಿ ಸುಲಭವಾಗಿ ಸಂವಹನಗೊಳಿಸುವ ಪ್ರಯತ್ನವನ್ನು ಯೋಜಿಸಲಾಗಿದೆ.

ವಿಶ್ವದ ಚಿಂತನಾ ವಲಯಕ್ಕೆ ಶ್ರೀ ಅರವಿಂದರು ಓರ್ವ ‘ವಿಶ್ವಕವಿ’. ಭಾರತೀಯ ಪರಂಪರಾ ಮನೋವಿಶ್ವಾಸಕ್ಕೆ ಅವರೊಬ್ಬ ವೇದಕ್ಕೆ ನವೀನ ಭಾಷ್ಯವನ್ನು ಸೃಷ್ಟಿಸಿದ ‘ದೃಷ್ಟಾರ’. ಸಾಮಾಜಿಕವಾಗಿ ರೂಪಣೆಗೊಳ್ಳುವ ವಿಚಲನೆಯನ್ನು ತಡೆಯಲು ಬರುವ ‘ಅವತಾರಿ’ ಎನ್ನುವ ದೃಢ ವಿಶ್ವಾಸವೂ ನಮಗಿದೆ. ಮಾನವನ ಅಭಿವ್ಯಕ್ತಿಯ ಮೂಲಕ ಭಾಷಾ ಸ್ವರೂಪದಲ್ಲಿ ದಾಖಲಾಗುತ್ತಿರುವ ‘ಧ್ವನಿಯ ಮೂಲವು ಆಕಾಶ’ದಲ್ಲಿದೆ ಎಂದು ಪುರಾವಿಸಿ, ‘ಧ್ವನ್ಯಾಲೋಕದ ಸೀಮಾತೀತ ವಿಸ್ತಾರ’ವನ್ನು ತೋರಿಸಿರುವ “ವೈಶ್ವಿಕ ಲಾಕ್ಷಣಿಕ”ರೆಂದು ಜಿಜ್ಞಾಸು ವಲಯ ಗೌರವಿಸುತ್ತಿದೆ. ಭೌತಿಕ ಬದುಕಿನಲ್ಲಿಯೇ “ಚಿತ್ತದ ಚೈತನ್ಯವನ್ನು” ಜಾಗರಿಸಿಕೊಂಡು ‘ಅಮರತ್ವ’ವನ್ನು ಪಡೆದುಕೊಳ್ಳಲು ಮಾರ್ಗದರ್ಶನ ಮಾಡಿರುವ “ನವೀನ ಯುಗಪ್ರವರ್ತಕ”, ಇವೆಲ್ಲವನ್ನು ಹೊಂದಿಯೂ ಅವರ ಕವಿ ಹೃದಯ ‘ಸಾವಿತ್ರಿ’ಯಲ್ಲಿ ‘ಆತ್ಮದ ಕಾವ್ಯ’ದ ಸ್ವರೂಪ ಹೇಗೆ ಇರಬಲ್ಲುದು ಎನ್ನುವದನ್ನು ನಿರೂಪಿಸಿದ ‘ಯುಗದ ಕವಿ’. ಇಂತಹ ಹಲವಾರು ಆಯಾಮಗಳನ್ನು ನಾವು ಶ್ರೀ ಅರವಿಂದರ ‘ಜೀವ–ಯಾನ’ದಲ್ಲಿ ಕಾಣುತ್ತೇವೆ. ‘ಉತ್ತರ ಯೋಗಿ’ ಎನ್ನುವ ಅವರ ನಾಮಧ್ಯೇಯವೂ ಸಹಿತ, ಉತ್ತರವನ್ನು ಅಂದರೆ ಔನ್ನತ್ಯವನ್ನು ತೋರುತ್ತಿರುವ ಅಪರೂಪದ ಯೋಗಿಯ ಸ್ವರೂಪದಲ್ಲಿಯೇ ಇದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಅವರ ಪಾತ್ರ ಪ್ರಮುಖವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಗಮನಾರ್ಹ ತಿರುವು ಮೂಡಿದ್ದು ಶ್ರೀ ಅರವಿಂದರಿಂದಲೇ ಎನ್ನುವದು ಇತಿಹಾಸ. ಭಾರತೀಯ ಸಂಸ್ಕೃತಿಯ ಲವಶೇಷವೂ ತಾಗಬಾರದೆಂದು ಇಂಗ್ಲೀಷ ವಾತಾವರಣದಲ್ಲಿಯೇ ಬೆಳೆಯಲ್ಪಟ್ಟಿದ್ದರೂ ಸಹಿತ, ನಿಯತಿಯ ಲಿಖಿತದಂತೆ ಭಾರತೀಯ ಅಸ್ಮಿತೆಯ ನವನವೋನ್ಮೇಷಶಾಲಿ ವ್ಯಕ್ತಿತ್ವವಾಗಿ–ಶಕ್ತಿಯಾಗಿ ಪರಿವರ್ತನಗೊಂಡದ್ದು, ಯೋಗಸಾಧನೆಯಲ್ಲಿ ಸ್ವಯೋ ಸಾಕ್ಷಾತ್ಕಾರದ ಕೆಲವೇ ಕೆಲವು ಉದಾಹರಣೆಗಳಲ್ಲಿ ಶ್ರೀ ಅರವಿಂದರೂ ಒಬ್ಬರು. ಭಾರತೀಯ ಜ್ಞಾನಪರಂಪರೆಯ ವೈವಿಧ್ಯತೆಯಲ್ಲಿ ಇರುವ ಪರಮ ಏಕತೆಯನ್ನು ‘ಪೂರ್ಣ ಯೋಗವಾಗಿಸಿದ’ ಅಪರೂಪದ ವಿಶ್ವಯೋಗಿ ಶ್ರೀ ಅರವಿಂದರು.

ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಪಥದಲ್ಲಿಯೇ ತಮ್ಮ ಜೀವನವನ್ನು ವಿಕಾಸಗೊಳಿಸಿಕೊಂಡಿರುವ ಹಲವಾರು ಚೇತನ ಸ್ವರೂಪರನ್ನೂ ನಾವು ಈ ಸಮಯದಲ್ಲಿ ಗೌರವದಿಂದಲೇ ಸ್ಮರಿಸಿಕೊಳ್ಳಬೇಕಾಗಿದೆ. [ಪಿಪಿಕೆ]



**ಘನಶಾಂತದುತ್ತುಂಗ ಶೃಂಗದೆಡೆಗೆ**

**ಶ್ರೀ ಅರವಿಂದರು 1982–83 ರಲ್ಲಿ**

ಅನಂತಾನಂತ ಅರ್ಣವದ ಮೇಲೆ ನಿಶ್ಶಬ್ದ–ಘನದ ಶೃಂಗ
ಹಿರಣ್ಯಗರ್ಭನಿವ, ಆ ಶಿಖರಗಳು ಅವಗೆ ಕಾರ್ಯ–ರಂಗ
ಅವಲೋಕಗೊಂಡ ಜ್ವಾಲೆಯಸ್ತ್ರಗಳ ಧರಿಸುತಲ್ಲಿ ಸನ್ನದ್ಧ,

ಲೋಕಲೋಕದಲಿ ಅವನ ಮಹತಿಯನು ಜೊತೆಗಿದೋ ರೂಪ ಸಿದ್ಧ
ಮುಕ್ತಗೊಳಿಸಿಸುತಲಿ, ರಾಗಾನುರಾಗ, ವಿಕಸನಕೆ ಸತತ ಬದ್ಧ,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/649** **– ಶ್ರೀ ಅರವಿಂದರು**

## ಶ್ರೀ ಅರವಿಂದರ ಪ್ರಥಮ ಕವನ "ಪ್ರಕಾಶ"

**– ಅನುವಾದ: ಪುಟ್ಟು ಕುಲಕರ್ಣಿ**

ಆದಿಮದ–ಘನದ ತಮದ ಬಸಿರೊಳಗೆ ಧೃತಗತಿಯ ಉಲಿತದಿಂದ
ಆವರ್ತಗೊಂಡ ಆ ಸೂರ್ಯನಾಗ, ಘನಕಪ್ಪು, ಬರಿದೊ ಸ್ಪಂದ,
ನನ್ನದೇ ಸ್ವರ್ಣಕೇಶದೆಳೆ–ಮಾಲೆ–ಮೇಲಂಗಿ ನೇಯ್ವವರೆಗೆ
ಆವರಿತ–ಜ್ವಲನ ಪರಿಶುದ್ಧ ತೋಷದಾ ವಕ್ಷಕೀಗ ಹೀಗೆ,
ಜೊತೆಗಿದೋ ಉದಿಸಿ ಅದರದೇ ವಾಯುವಾಧಾರ–ಸ್ಥಾಣುಗಳಿಗೆ
ಗಗನಮಂಡಲದ ಶಿಬಿರ–ಡೇರೆಯದು ಸುವಿಶಾಲಗೊಳುವವರೆಗೆ,
ತಾರೆಗಳ ಬಳಗ ಸುತ್ತಲೂ ಸತತ ಸಂದೀಪ್ತಿಗೊಳಿಸಿ ಇರಿಸಿ
ಹೋಲಿಕೆಯೆ ಇರದ ಆ ನೀಲ–ವರ್ಣವನು ಹೀಗೆ ಲಿಖಿತಗೊಳಿಸಿ.

ನಂದನದ ಲತೆಯ–ಕುಂಜಗಳ–ಪುಷ್ಪಗಳನೀಗ ರಂಗುಗೊಳಿಸಿ
ಅವುಗಳಾ ಜೀವ–ಜೀವಾಳದುಸಿರ ಹಸಿರ–ನಾ ಲೇಪವಿರಿಸಿ,
ನಂದನದ ನಿತ್ಯ ಅಕ್ಷತದ–ರಾಣಿಯಾ ಪಾವನದ ದೃಷ್ಟಿಗಳಲಿ
ನನ್ನ ವರ್ಣಮಯ ರಂಗು–ರಂಗುಗಳು ತಾವೀಗ ಸೃಷ್ಟಿಗಳಲಿ;
ವಿಶ್ವಾಸಪೂರ್ಣ ಈ ಹೃದಯದೊಳಗೆ ಸೈತಾನ–ಕಲೆಯು ಬರಲು
ಜೊತೆಗಿದೋ ಇಂತು ನಶ್ವರದ–ತಂತು–ತಂತ್ರಕತಿವೇಗವಿಡಲು,
ಪ್ರಪ್ರಥಮವಾಗಿ ತಾನುಕ್ಕಿ ಬಂದ ಕಣ್ಣೀರನಾಳದೊಳಗೆ
ರಜೋವಲಯವದು, ಕುಸಿದೆ ನಾನಿಂತು, ನಡುಗಿ ಕಂಪಿಸುವ ಧರೆಗೆ.

ಶಾಪಕ್ಕೆ ಸಿಲುಕಿದಾ ಲೋಕದೆದೆಗೆ ವಿಸ್ಫೋಟದಲೆಯ ಭರತ
ಅಪ್ಪಳಿಸಿತೀಗ ಕಡುಕೋಪದೊಳಗೆ ವಿಸ್ತಾರ ಕಾರ್ಯ–ಘಾತ,
ಖತಿಗೊಂಡು ಮೃತದ ಬದುಕಿನಲಿ ಇದ್ದವರ ಮಧ್ಯದಿಂದ ಕೆಲರು
ತಾವೆದ್ದು ಬಂದು ಯತ್ನಿಸುತಲಿಂದು, ಜೊತೆ ಸತ್ಯ–ಜ್ಯೋತಿ–ಕದಿರು,
ಅದ್ಭುತಾದ್ಭುತದ ದಿವ್ಯ–ಕಾಂತಿಗಳ ಅಕ್ಷತದ ಸರಣಿಯೊಡನೆ,
ಅವುಗಳಾ ಉಗ್ರ ಆತಂಕಪೂರ್ಣ ಧಾರೆಯಲು ಮಿಂದು ನಾನು,
ಚಂಡಮಾರುತದ ಕಪ್ಪು–ಸುರುಳಿಯುರುಳಿನಲಿ ನಾ ಬರೆದು ಇಂತು
ದೇವನಾ ಪರಮ ಶಾಂತಿಯನುಬಂಧದೊಡನೀಗ ಸ್ಪಂದವಿಂತು

---

**ಟಿಪ್ಪಣಿ:** ಇದು ಶ್ರೀ ಅರವಿಂದರು ರಚಿಸಿದ 'ಪ್ರಥಮ' ಕವನದ ಮೊದಲ ಮೂರು ನುಡಿಗಳು. ಒಟ್ಟೂ 8–8 ಸಾಲಿನ 8 ನುಡಿಗಳಿವೆ. ಅವರು ತಮ್ಮ 12 ನೇ ವಯಸ್ಸಿನಲ್ಲಿ ರಚಿಸಿರುವ ಕವನ.

# ಶ್ರೀ ಅರವಿಂದರು: ಜೀವನದ ಸಂಕ್ಷಿಪ್ತ ರೂಪು–ರೇಷೆ

**– ಅನುವಾದ: ಪುಟ್ಟು ಕುಲಕರ್ಣಿ**

## ಬಾಲ್ಯ ಮತ್ತು ಪ್ರಾರಂಭದ ವರ್ಷಗಳು

ಶ್ರೀ ಅರವಿಂದರ ಜನ್ಮ ಸ್ಥಳ ಕಲಕತ್ತಾ; ಜನ್ಮ ದಿನಾಂಕ ಅಗಸ್ಟ 15, 1872. ಅವರ ಏಳನೇ ವರ್ಷದ ಅವಧಿಯಲ್ಲಿ ಅವರನ್ನು ಅವರ ಇಬ್ಬರು ಹಿರಿಯ ಸಹೋದರರ ಸಂಗಡ ಶಿಕ್ಷಣವನ್ನು ಪಡೆದುಕೊಳ್ಳುವ ಸಲುವಾಗಿ ಇಂಗ್ಲಂಡಿಗೆ ಕಳಿಸಲಾಗುತ್ತದೆ. ಅಲ್ಲಿಂದ ಮುಂದೆ 14 ವರ್ಷಗಳ ಕಾಲ ಅವರು ಇಂಗ್ಲಂಡ ವಾಸವನ್ನೇ ಮಾಡಬೇಕಾಯಿತು. ಮೊದಲು ಮ್ಯಾಂಚೆಸ್ಟರನ ಒಂದು ಆಂಗ್ಲ ಕುಟುಂಬದ ವಾತಾವರಣದಲ್ಲಿ ಅವರ ಕೌಮಾರಾವಸ್ಥೆ ರೂಪುಗೊಂಡಿತು.

ಇಂಗ್ಲಂಡಿನ 'ಸೇಂಟ್ ಪಾಲ್ ಸ್ಕೂಲ್'ನಲ್ಲಿ 1884 ರಿಂದ 1890 ರವರೆಗೆ ಶಿಕ್ಷಣವನ್ನು ಪಡೆದರು. ಮುಂದೆ 1890 ರಲ್ಲಿ ಕೆಂಬ್ರಿಜ್ಜಿನ 'ಕಿಂಗ್ಸ ಕಾಲೇಜಿ'ಗೆ ಸೀನಿಯರ್ ಕ್ಲಾಸಿಕಲ್ ಸ್ಕಾಲರಶಿಪ್ ಪಡೆದು ಪ್ರವೇಶ ಪಡೆದುಕೊಂಡರು. ಈ ಕಾಲೇಜಿನಲ್ಲಿ ಅವರು ಎರಡು ವರ್ಷ ಶಿಕ್ಷಣವನ್ನು ಪಡೆದುಕೊಳ್ಳುತ್ತಾರೆ. ಇದೇ ಅವಧಿಯಲ್ಲಿ ಅಂದರೆ 1890 ರಲ್ಲಿ, ಇವರು "ಇಂಡಿಯನ್ ಸಿವಿಲ್ ಸರ್ವೀಸ್‌ನ ಮುಕ್ತ ಪರೀಕ್ಷೆ ಸ್ಪರ್ಧಾ ಪರೀಕ್ಷೆ"ಯನ್ನು ಯಶಸ್ವಿಯಾಗಿ ಪಾಸಾಗುತ್ತಾರೆ. ಆದರೆ ಎರಡು ವರ್ಷಗಳ ಪ್ರೊಬೇಶನರಿ ಅವಧಿಯ ನಂತರದಲ್ಲಿ, ಅವರೇ ಕುದುರೆ ಸವಾರಿಯನ್ನು ಮಾಡಲು ಒಪ್ಪದೇ ಆ ಪರೀಕ್ಷೆಗೆ ಹಾಜರಾಗುವದಿಲ್ಲ. ಹೀಗಾಗಿ ಸಿವಿಲ್ ಸರ್ವೀಸ್ ವಿಭಾಗದಲ್ಲಿ ಅವರಿಗೆ ಮುಂದೆ ಕಾರ್ಯ ಮಾಡಲು ಅರ್ಹತೆಯನ್ನು ಪಡೆಯಲಾಗಲಿಲ್ಲ. ಆದರೆ ಇದೇ ಸಮಯದಲ್ಲಿ ಬಡೋದೆಯ ರಾಜ ಗಾಯಕವಾಡ ಅವರು, ಶ್ರೀ ಅರವಿಂದರನ್ನು ತಮ್ಮ ಪ್ರದೇಶದ ಕಾರ್ಯಕ್ಕಾಗಿ ಆಯಕೆ ಮಾಡಿಕೊಳ್ಳುತ್ತಾರೆ. ಹೀಗಾಗಿ ಶ್ರೀ ಅರವಿಂದರು 1893 ರಲ್ಲಿ ಇಂಗ್ಲಂಡ್ ತೊರೆದು, ಭಾರತಕ್ಕೆ ಬಂದು ಬಡೋದದಲ್ಲಿ ತಮ್ಮ ಸೇವೆ ಪ್ರಾರಂಭಿಸುತ್ತಾರೆ.

ಬಡೋದೆಯಲ್ಲಿ 1893 ರಿಂದ 1906 ರವರೆಗೂ ಅಂದರೆ 13 ವರ್ಷಗಳ ಕಾಲ ಅವರು ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಾರಂಭದ ಹಂತದಲ್ಲಿ ಅವರು 'ಕಂದಾಯ ವಿಭಾಗ'ದಲ್ಲಿ, ತದನಂತರ 'ಮಹಾರಾಜರಿಗೆ ಸಂಬಂಧಪಟ್ಟ ಕಾರ್ಯಗಳ ವಿಭಾಗದ ಕಾರ್ಯದರ್ಶಿ'ಯಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ. ತದನಂತರದಲ್ಲಿ "ಇಂಗ್ಲೀಷ ಪ್ರೊಫೇಸರ್" ಎಂದು ಕಾಲೇಜಿನಲ್ಲಿ ಕಾರ್ಯ

ಮಾಡಿದರು. ಕೆಲವೇ ದಿನಗಳ ಅಂತರದಲ್ಲಿ ಆ ಕಾಲೇಜಿನ ಉಪ–ಪ್ರಾಂಶುಪಾಲ'ರಾಗಿ, ಆಮೇಲೆ 'ಪ್ರಾಚಾರ್ಯ'ರಾಗಿ ಕಾರ್ಯ ನಿರ್ವಹಿಸಿದರು. ಬಡೋದೆಯಲ್ಲಿ ಇರುವ ಈ ಅವಧಿಯಲ್ಲಿ 'ನಮ್ಮ(ಭಾರತೀಯ) ಸಂಸ್ಕೃತಿ', 'ಸಾಹಿತ್ಯಿಕ ಚಟುವಟಿಗೆಗಳಂತಹ ವಿಷಯಗಳಲ್ಲಿ ಹೆಚ್ಚು ಒಳಗೊಂಡಿದ್ದಾರೆ – ಈ ಅವಧಿಯಲ್ಲಿ ರಚಿತಗೊಂಡ ಕೃತಿಗಳೇ ಮುಂದೆ ಪಾಂಡಿಚೇರಿಯಿಂದ ತದನಂತರದಲ್ಲಿ ಪ್ರಕಾಶನಗೊಂಡಿವೆ – ಜೊತೆಜೊತೆಗೆ ತಮ್ಮ ಮುಂದಿನ ಕಾರ್ಯಗಳ ಬಗೆಗೆ ಸಿದ್ಧತೆಯನ್ನೂ ಮಾಡಿಕೊಂಡಿದ್ದಾರೆ. ಇಂಗ್ಲಂಡಿನಲ್ಲಿರುವ ಸಮಯದಲ್ಲೆಲ್ಲ ಅವರ ತಂದೆ ನೀಡುತ್ತಿದ್ದ ಸಲಹೆಗಳನ್ನೇ ಅನುಸರಿಸಬೇಕಾಗಿತ್ತು. ಅದರಲ್ಲೂ 'ಪಾಶ್ಚಿಮಾತ್ಯ ಮಾದರಿಯ ಶಿಕ್ಷಣ'ವೇ ಸಂಪೂರ್ಣವಾಗಿ ಕಲಿಕಾ ಹಂತವಾದುದರಿಂದ, ಈ ಪದ್ಧತಿಯಲ್ಲಿ 'ಭಾರತೀಯ ಸಂಸ್ಕೃತಿ'ಯ ಕುರಿತು ಕಿಂಚಿತ್ತೂ ಸಂಪರ್ಕವಿರದ ಸ್ಥಿತಿ ಇತ್ತು.

ಬಡೋದಾದಲ್ಲಿ ಇರುವಾಗ, ಈ ರೀತಿಯ ಶಿಕ್ಷಣದಿಂದ ತಾವು ದೂರವಿದ್ದದ್ದನ್ನು ಗುರುತಿಸಿಕೊಂಡ ಅವರು, ಸಂಸ್ಕೃತವನ್ನು ಕಲಿಯಲು ಪ್ರಾರಂಭಿಸಿದರು. ಅದೇ ರೀತಿ ಭಾರತದ ವಿವಿಧ ಭಾಷೆಗಳ ಕುರಿತೂ ತಮ್ಮ ಆಸಕ್ತಿ ತೋರಿ ಕಲಿಯಲು ಪ್ರಾರಂಭಿಸಿದರು. ಸುಸಂಬದ್ಧ ಸಂಯೋಜನೆಯಲ್ಲಿ ಸಂರಚನೆಗೊಂಡಿರುವ ಭಾರತೀಯ ಸಂಸ್ಕೃತಿಯ ಅಂತಃಸತ್ತ್ವ ಮತ್ತು ಅದರ ಸ್ವರೂಪ ಹಾಗೂ ಅದರ ಇತಿಹಾಸ ಮತ್ತು ಈಗಿನ ಪರಿಸ್ಥಿತಿ ಎಲ್ಲವನ್ನೂ ಅಧ್ಯಯನ ಮಾಡತೊಡಗಿದರು. ಇಲ್ಲಿ ಅತ್ಯಂತ ಪ್ರಮುಖವಾದ ಅಂಶವೆಂದರೆ, ಬಡೋದೆಯ ವಾಸ್ತವ್ಯದ ಕೊನೇ ವರ್ಷಗಳಲ್ಲಿ ಮೌನವಾಗಿಯೇ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಲು ತಮ್ಮ ರಜೆಯ ದಿನಗಳನ್ನು ಬಳಸಿಕೊಂಡರು. ಇದರಿಂದಾಗಿ ಅವರ ಹುದ್ದೆಯಿಂದ ಅವರನ್ನು "ಕಿತ್ತು ಹಾಕುವ(ಡಿಬಾರ್)" ಕಾರ್ಯವೂ ಘಟಿಸಿತು.

ಗ್ರೀಕ್ ಮತ್ತು ಲ್ಯಾಟಿನ್ ವಿಷಯಗಳಲ್ಲಿ ಶ್ರೀ ಅರವಿಂದರು ಪ್ರಾವಿಣ್ಯತೆಯನ್ನು ಹೊಂದಿದ್ದರು. ಬಾಲ್ಯವಾಸ್ಥೆಯಲ್ಲಿಯೇ ಮ್ಯಾಂಚೆಸ್ಟರದಲ್ಲಿ ಫ್ರೆಂಚ್ ಭಾಷೆಯನ್ನು ಶಿಕ್ಷಣದ ಮೂಲಕವೇ ಕಲಿತಿದ್ದರೆ, ಸ್ವಯಂ ಆಸಕ್ತಿಯಲ್ಲಿ ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳಲ್ಲಿಯೂ ಪರಿಣತಿ ಹೊಂದಿ, 'ಗಯಟೆ', 'ಡಾಂಟೆ'ಯವರ ಕೃತಿಗಳನ್ನು ಆ ಕೃತಿಕಾರರ ಭಾಷೆಯಲ್ಲಿಯೇ ಅರ್ಥೈಸಿಕೊಂಡವರು. ಕೆಂಬ್ರಿಜ್ಜಿನಲ್ಲಿ ಟ್ರಿಪೋಸ್(ವಿಶ್ವವಿದ್ಯಾಲಯದ ಗೌರವ ಪ್ರಶಸ್ತಿ)ಯನ್ನು ಯಶಸ್ವಿಯಾಗಿ ಪ್ರಥಮ

ಶ್ರೇಣಿಯಲ್ಲಿಯೇ ಪಾಸಾಗಿದ್ದೂ ಅಲ್ಲದೇ "ಸಿವಿಲ್ ಸರ್ವಿಸ್ ಪರೀಕ್ಷೆ"ಯಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯ ವಿಷಯದಲ್ಲಿ ಅತ್ಯಧಿಕವಾದ ಅಂಕಗಳನ್ನು ಗಳಿಸಿದ್ದರು.

## ಭಾರತದ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಚಳವಳಿಯಲ್ಲಿ ಪಾತ್ರ

1905 ರಲ್ಲಿ ನಡೆದ "ವಂಗ–ಭಂಗ"ದ ಕಾರಣದಿಂದಾಗಿ ಉದ್ಭವಿಸಿದ ತೀವ್ರ ವಿರೋಧದ ವಾತಾವರಣವು, ಶ್ರೀ ಅರವಿಂದರು ಬಡೋದಾ ಸೇವೆಯನ್ನು ತೊರೆಯುವದಕ್ಕೆ ಕಾರಣವಾಗಿದ್ದೂ ಅಲ್ಲದೆ ರಾಜಕೀಯ ಚಳವಳಿಯಲ್ಲಿ ಧುಮುಕಲು ಅವಕಾಶ ಒದಗಿಸಿತು. 1906 ರಲ್ಲಿ ಅವರು ಬಡೋದವನ್ನು ಬಿಟ್ಟು, ಕಲಕತ್ತೆಗೆ ತಲುಪುತ್ತಾರೆ. ಅಲ್ಲಿ ನೂತನವಾಗಿ ಪ್ರಾರಂಭಗೊಂಡ 'ಬೆಂಗಾಲ ನ್ಯಾಶನಲ್ ಕಾಲೇಜಿ'ಗೆ ಪ್ರಾಚಾರ್ಯರಾಗಿ ಕಾರ್ಯ ಪ್ರಾರಂಭಿಸುತ್ತಾರೆ. ಶ್ರೀಅರವಿಂದರ ರಾಜಕೀಯ ಚಟುವಟಿಕೆಗಳ ಈ ಅವಧಿ 1902 ರಿಂದ 1910ರವರೆಗೆ ಎಂಟು ವರ್ಷಗಳು. ಈ ಅವಧಿಯ ಮೊದಲರ್ಧ ಅವಧಿಯಲ್ಲಿ ಅವರು 'ತೆರೆಮರೆಯಲ್ಲಿಯೇ' ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಅವಧಿಯಲ್ಲಿ ತಮ್ಮ ಸಂಗಾತಿಗಳೊಡನೆ, 'ಸ್ವದೇಶೀ ಚಳವಳಿ'ಯ ರೂಪು–ರೇಷೆಗಳನ್ನು ರೂಪಿಸಿದರು. ಈ ಅವಧಿಯವರೆಗೂ ಬಂಗಾಳ ವಿಭಜನೆಯಿಂದಾಗಿ ರೂಪಿತಗೊಂಡಿದ್ದ ವಿರೋಧದ ವಾತಾವರಣವು, ಈ ರೀತಿಯ ಚಳವಳಿಯನ್ನೂ ಮತ್ತೂ ಮುಂದುವರಸಿಕೊಂಡು ಹೋಗಲು ಇದನ್ನೇ ನೇರಾನೇರ ರಾಜಕೀಯ ತಂತ್ರವನ್ನಾಗಿಸಿಕೊಂಡು ಹೋಗಲೂ ಬೇಕಾದ ವಾತವರಣವನ್ನು ನಿರ್ಮಾಣ ಮಾಡಿತ್ತು. ಈ ಅವಧಿಯವರೆಗೂ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡು ಸಾಗಿದ್ದ 'ಭಾರತೀಯ ನ್ಯಾಶನಲ್ ಕಾಂಗ್ರೆಸ್' ಮಂದಗಾಮೀ ಬದಲಾವಣೆಯ ರೀತಿಯ ನೀತಿಯನ್ನೇ ಅನುಸರಿಸುತ್ತಿತ್ತು.

1906 ರಲ್ಲಿ ಶ್ರೀ ಅರವಿಂದರು ಬಂಗಾಲಕ್ಕೆ ಬಂದದ್ದು. ಇಲ್ಲಿಗೆ ಆಗಮಿಸುವ ಮೂಲ ಉದ್ದೇಶವೂ ಸಹಿತ ಹೊಸದೊಂದು ಪಕ್ಷವನ್ನು ಹುಟ್ಟು ಹಾಕುವದು ಮತ್ತು ಅಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿಯೇ ಇರುವ ಆಧುನಿಕ ವಿಚಾರಧೋರಣೆಯವರ ಜೊತೆಗೆ – ಅವರೆಲ್ಲರೂ ಅಷ್ಟೊಂದು ಪ್ರಭಾವಶಾಲಿ–ಯಾಗಿರದಿದ್ದರೂ ಸಹಿತ – ಈ ಕಾಂಗ್ರೆಸ್ಸಿನಲ್ಲಿಯೇ ಇತ್ತೀಚಿಗೆ ರೂಪುಗೊಂಡಿದ್ದ ವ್ಯವಸ್ಥೆಯ ಸಂಗಡ ಕಾರ್ಯಕ್ರಮ ರೂಪಿಸುವಲ್ಲಿ ಯೋಜನೆ ಹೊಂದಿದ್ದರು. ಈ ಪಕ್ಷದ ರಾಜಕೀಯ ನೀತಿಯು ಒಂದು ಹಂತದವರೆಗೆ ಅಸಹಕಾರ ಚಳವಳಿಯ

ಕುರಿತು 'ಅಸ್ಪಷ್ಟ ಸ್ವರೂಪದ ಹೇಳಿಕೆ'ಯೇ ಆಗಿತ್ತು; ಆದರೆ ಅನುಷ್ಠಾನಗೊಳ್ಳುವಲ್ಲಿ ಇದೇನೂ ಅಷ್ಟೊಂದು ಯಶಸ್ವಿಯಾಗಲಿಲ್ಲ, ಅದೂ ಅಲ್ಲದೇ ಯಾವುದೇ ಪರಿಣಾಮವನ್ನೂ ಬೀರದ ಹಾಗಿರುವ ವಾತಾವರಣವನ್ನು ರೂಪಿಸಿದ ಜೊತೆಗೆ, ಕಾಂಗ್ರೆಸ್ಸಿನ ಮಂದಗಾಮೀ ನೀತಿಯ ಅನುಯಾಯಿಗಳ ಸಂಗಡ ವಿರೋಧವನ್ನು ಬೆಳೆಸಿತು. ಇದು 'ವಿಷಯಗಳ ಸಮಿತಿ' ರಚನೆಯ ರಹಸ್ಯ ಹೊದಿಕೆಯಲ್ಲಿ ಕಾಂಗ್ರೆಸ್ಸಿನ ಸರ್ವ ಸಾಧಾರಣ ಸಭೆಯಲ್ಲಿ ಮಂಡಿಸಲ್ಪಟ್ಟಿತ್ತು.

ಆದರೆ ಶ್ರೀ ಅರವಿಂದರು ಈ ವಿಷಯದ ಕುರಿತು ಬಂಗಾಲದ ತಮ್ಮ ಮುಖಂಡರು ಮುಂದೆ ಬಂದು ಇದರ ಜವಾಬುದಾರಿ ವಹಿಸಲು ನೇರವಾಗಿ ಸಾರ್ವಜನಿಕವಾಗಿ ಬರಲು ತಿಳಿಸಿದರು. ಇದೊಂದು ನಿರ್ಣಯಾತ್ಮಕವಾದ ಹಾಗೂ ನಿಶ್ಚಿತ ಗುರಿ ಹೊಂದಿದ ನೀತಿಯಾಗಿದ್ದು, ಇಲ್ಲಿ ಮರಾಠಾ ಮುಖಂಡರಾಗಿದ್ದ ಟಿಳಕರ ಎದುರು ಮಂಡಿಸಲ್ಪಟ್ಟಿತು, ಈ ಮೂಲಕ ಮಂದಗಾಮೀ ಧೋರಣೆಯಲ್ಲಿ ಹೋರಾಟದ ಸ್ವರೂಪದಲ್ಲಿದ್ದವರನ್ನು ಅದರಲ್ಲೂ ಕುಲೀನ ತಂತ್ರವನ್ನೇ ಪ್ರಾವಿಣ್ಯತೆಯಿಂದ ಅನುಸರಿಸುತ್ತಿದ್ದವರನ್ನು ಸಹಿತ ನಿಯಂತ್ರಿಸಲು, ಆ ಮೂಲಕ ನ್ಯಾಶನಲ್ ಕಾಂಗ್ರೆಸ್ಸಿನ ಮೇಲೂ ಹಿಡಿತ ಸಾಧಿಸುವ ಮೂಲಕ ಈ ದೇಶದ ವಿಷಯಕ್ಕೂ ನಿರ್ಣಯಾತ್ಮಕವಾಗಿ ಕಾರ್ಯ ರೂಪಿಸುವ ಯೋಜನೆ ಹೊಂದಿತ್ತು. ಈ ಹೋರಾಟವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿ ಮತ್ತು ಮಂದಗಾಮಿ ಎನ್ನುವ ಎರಡು ಪಂಗಡಗಳಲ್ಲಿ ಕೇವಲ ಎರಡೇ ವರ್ಷಗಳಲ್ಲಿ ಮುಂದುವರೆದು ಒಂದು ಇತಿಹಾಸವನ್ನೇ ನಿರ್ಮಾಣ ಮಾಡಿದೆ.

ಈ ರೀತಿಯಾಗಿ ನವೋದಿತವಾಗಿ ಬಂದ ಪಕ್ಷವು "ಸ್ವರಾಜ್ಯವೇ ನಮ್ಮ ಜನ್ಮಸಿದ್ಧ ಹಕ್ಕು" ಎನ್ನುವದನ್ನು ಪ್ರತಿಪಾದಿಸದರೆ, ಮಂದಗಾಮಿಗಳು ಮಾತ್ರ ವಸಾಹತುಶಾಹಿ ಸ್ವ–ಆಡಳಿತದ ಮಾದರಿಯ ಸರಕಾರದ ರಚನೆಯ ಸಲುವಾಗಿ ಯೋಚಿಸುತ್ತಿತ್ತು. ಇದು ಬದಲಾವಣೆಯನ್ನು ಸುದೀರ್ಘವಾದ ಅವಧಿಯಲ್ಲಿ ಅಂದರೆ ಶತಮಾನದ ಕಾಲ ರೂಪಿಸುವಲ್ಲಿ ನಿಧಾನ ಪ್ರಗತಿಯ ಮಾದರಿಯನ್ನು ಅನುಸರಿಸಿತ್ತು; ಉತ್ಸಾಹದ ಶಕ್ತಿಯಲ್ಲಿ ರೂಪಿಸಲ್ಪಟ್ಟಿದ್ದ ಇದರ ಅನುಷ್ಠಾನದ ಮಾರ್ಗಗಳು, ಸಂಪೂರ್ಣ ವಿವರಣಾತ್ಮಕವಾಗಿ ಇನ್ನೂ ರೂಪಗೊಂಡಿರದಿದ್ದರೂ, ವಿವರಣೆಗಳನ್ನೂ ಒಳಗೊಂಡಿರದಿದ್ದರೂ, ಆದರೆ ಮುಂದೆ ಕೆಲ ಅವಧಿಯ ನಂತರದಲ್ಲಿ ಇದೇ ರೀತಿಯ ನೀತಿಯನ್ನು ಐರ್ಲಂಡ್ ವಿಮೋಚನಾ ಚಳವಳಿಯಲ್ಲಿ ಯಶಸ್ವಿಯಾಗಿ ಮಂಡಿಸಲ್ಪಟ್ಟಿತು. ಈ ಹೊಸ ನೀತಿಯ ತತ್ತ್ವವೆಂದರೆ "ಸ್ವ–ಸಹಾಯ". ಇದು

ಒಂದು ಕಡೆಗೆ ಲಭ್ಯವಿರುವ ಜನಶಕ್ತಿಯನ್ನು ಪರಿಣಾಮಕಾರಿಯಾದ ಫಲಿತಾಂಶವನ್ನು ರೂಪಿಸುವದರ ಕಡೆಗೆ ಸಂಯೋಜನೆ–ಗೊಳಿಸಲು ಸಾಧ್ಯವಾದರೆ ಮತ್ತೊಂದು ಕಡೆಗೆ ಸರಕಾರದ ವಿರುದ್ದ ಸಂಪೂರ್ಣವಾಗಿ ಅಸಹಕಾರ ಧೋರಣೆಯನ್ನು ಮುಂದುವರೆಸಲು ಅನುಕೂಲವಾಗಿತ್ತು.

'ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ' ಅದರ ಬಲದಿ ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ಸ್ವದೇಶಿ ಉದ್ಯಮಗಳಿಗೆ ಪ್ರೋತ್ಸಾಹ ನೀಡುವದು, 'ಬ್ರಿಟೀಶ ನ್ಯಾಯ ವ್ಯವಸ್ಥೆಯ ನ್ಯಾಯಾಲಯ'ಗಳನ್ನು ಬಹಿಷ್ಕರಿಸುವದು, ಅದರ ಬದಲಾಗಿ ಸ್ವದೇಶಿ ಮಾದರಿಯ 'ಮಧ್ಯಂತರ ನ್ಯಾಯಾಲಯಗಳನ್ನು (ಪಂಚಾಯತ ಮಾದರಿಯ) ನ್ಯಾಯಾಲಾಯ'ಗಳನ್ನು ಸ್ಥಾಪಿಸುವದು, ವಿದೇಶಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಬಹಿಷ್ಕಾರ, ಅದರ ಬದಲು ರಾಷ್ಟ್ರೀಯ ಏಕತೆಯನ್ನು ರೂಪಿಸುವ ಸಲುವಾಗಿ ರಾಷ್ಟ್ರೀಯ ಕಾಲೇಜು ಮತ್ತು ಶಾಲೆಗಳ ಪ್ರಾರಂಭ, ಯುವ ಸಮುದಾಯದ ಸಂಘಗಳ ಸ್ಥಾಪನೆ ಮತ್ತು ಇಂತಹ ಸಂಘಟನೆಯ ಮೂಲಕ ಪೊಲೀಸ್ ಮತ್ತು ರಕ್ಷಣಾ ವ್ಯವಸ್ಥೆಯ ರೂಪಣೆ, ಎಲ್ಲೆಲ್ಲಿ ಯಾವಾಗ ಯಾವಾಗ ಅವಶ್ಯಕತೆ ಉದ್ಭವಿಸುತ್ತದೆಯೋ, ಅಲ್ಲೆಲ್ಲ, ಸಂಬಂಧಪಟ್ಟ ವಿಷಯದ ಕುರಿತು ಧನಾತ್ಮಕವಾದ ಪ್ರತಿರೋಧವನ್ನು ರೂಪಿಸುವದು ಇತ್ಯಾದಿ ಇಂತಹ ಸಂಗತಿಗಳನ್ನು ತಕ್ಷಣವೇ ರೂಪಿಸುವದು ಈ ಯೋಜನೆಯ ಮುಖ್ಯ ಸಂಗತಿಗಳಾಗಿದ್ದವು. ಇವುಗಳ ಮೂಲಕ ಕಾಂಗ್ರೆಸ್ಸನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಶ್ರೀ ಅರವಿಂದರ ಬಯಕೆ ಹೊಂದಿದ್ದರು. ಈ ಮೂಲಕ ರಾಷ್ಟ್ರೀಯ ಏಕತೆಯ ಕಾರ್ಯಗಳನ್ನು ಅನುಷ್ಠಾನಗೊಳಿಸಬಹುದು, ಅದೇ ರೀತಿ ಒಂದು ಆಡಳಿತದ ವ್ಯವಸ್ಥೆಯೊಳಗೆ ಮತ್ತೊಂದು ಸುಸಂಬದ್ಧ ಹಾಗೂ ಸುಸಂಗತವಾಗಿರುವ ಉಪ ಆಡಳಿತ ವ್ಯವಸ್ಥೆಯ ರೂಪಣೆಯನ್ನು ರೂಪಿಸುವ ಮೂಲಕ, ಸ್ವಾತಂತ್ರ್ಯ ಹೋರಾಟವನ್ನು ಅಂತಿಮ ಜಯಗಳಿಸುವವರೆಗೂ ಮುಂದುವರೆಸಲು ಆಶಯ ಹೊಂದಲಾಗಿತ್ತು. ಈ ರೀತಿಯಲ್ಲಿ ಅವರು ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಲು ಒಪ್ಪಿಕೊಂಡು, ಹೊಸದಾಗಿ ಪ್ರಾರಂಭವಾಗಿರುವ ದಿನಪತ್ರಿಕೆ "ವಂದೇ ಮಾತರಂ"ದಲ್ಲಿ ಕಾರ್ಯ ನಿರ್ವಾಹಕ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಸಮರ್ಪಿಸಿಕೊಂಡರು. ಈ ರೀತಿಯಾಗಿ 1907 ರಲ್ಲಿ ಪ್ರಾರಂಭವಾದ ಪತ್ರಿಕೆಯು ಮುಂದೆ ತನ್ನ ಪ್ರಕಟಣೆಯನ್ನು 1909 ರಲ್ಲಿ ನಿಲ್ಲಿಸುವವರೆಗೂ ಶ್ರೀ ಅರವಿಂದರು ಅದರ ಪೂರ್ತಿ ಜವಾಬ್ದಾರಿಯನ್ನು

ಹೊಂದಿದ್ದರು. ಅವರು ಅಲೀಪುರ ಜೈಲಿನಲ್ಲಿ ಇದ್ದಾಗಲೂ ಸಹಿತ ಅವರ ಸ್ಥಾನ ಕಡಿಮೆಯಾಗಿರಲಿಲ್ಲ. ಆಗ ಭಾರತದಾದ್ಯಂತ ಪತ್ರಿಕೆಯು ಲಭ್ಯವಾಗುವಂತೆ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಈ ಪತ್ರಿಕೆಯು ಅಲ್ಪಕಾಲಿಕವಾಗಿದ್ದರೂ ಸಹಿತ, ಭಾರತದ ರಾಜಕೀಯ ಚಿಂತನಗಳಲ್ಲಿ ಒಂದು ಕ್ರಾಂತಿಕಾರಕವಾಗಿರುವ ಬದಲಾವಣೆಯನ್ನೇ ರೂಪಿಸಿತು. ಮೂಲಭೂತವಾಗಿ ಅನುಷ್ಠಾನಗೊಂಡು ಮುಂದುವರೆದಿದ್ದ ಅಥವಾ ಅದೇ ರೀತಿಯಲ್ಲಿ ರಕ್ಷಿಸಲ್ಪಟ್ಟುಕೊಂಡು ಬಂದಿದ್ದ ರಾಜಕೀಯ ಚಿಂತನಗಳಲ್ಲಂತೂ ಇಲ್ಲಿಯವರೆಗೂ ಊಹಿಸದ ಪರಿವರ್ತನೆ ಪ್ರಾರಂಭವಾಯಿತು. ಈ ಪತ್ರಿಕೆಯು ಮುದ್ರಣವನ್ನು ನಿಲ್ಲಿಸಿದ ನಂತರದಲ್ಲೂ ಸಹಿತ ಇದರ ಪ್ರಭಾವ ಮುಂದುವರೆದುಕೊಂಡೇ ಬಂದಿತು. ಆದರೆ ಈ ಪತ್ರಿಕೆಯ ಮೂಲಕ ಯೋಜಿಸಲ್ಪಟ್ಟಿದ್ದ ಹೋರಾಟದ ಚಿಂತನೆಗಳು, ಭವಿಷ್ಯದ ಸಲುವಾಗಿ ಅವಶ್ಯಕವಾಗಿದ್ದರೂ ಮತ್ತು ಸಂದರ್ಭೋಚಿತವಾಗಿದ್ದರೂ, ಆ ಅವಧಿಯಲ್ಲಿ ಸುದೀರ್ಘವಾಗಿ ಉಳಿಯಲಿಲ್ಲ. ಏಕೆಂದರೆ ಈ ರೀತಿಯ ದಿಟ್ಟ ನಿರ್ಧಾರದ ಯೋಜನೆಗಳಿಗೆ ಯೋಚನೆಗಳಿಗೆ ಭಾರತೀಯ ಮನಸ್ಸು ಇನ್ನೂ ಪಕ್ವವಾಗಿರಲಿಲ್ಲ.

1907 ರಲ್ಲಿ, ಶ್ರೀ ಅರವಿಂದರನ್ನು ರಾಜದ್ರೋಹದ ಆಪಾದನೆಯಿಂದ ವಿಮುಕ್ತಗೊಳಿಸಲಾಯಿತು. ಅಲ್ಲಿಯವರೆಗೂ ಒಬ್ಬ ಸಮರ್ಥ ಲೇಖಕ, ಸಂಘಟಕರಾಗಿರುವ ಇವರನ್ನು, ಸೆರೆಮನೆಯ ಅವಧಿಯಲ್ಲಿ ಮತ್ತೂ ಆಗ ನಡೆದ ಘಟನೆಗಳಲ್ಲಿ, ಕೆಲವರು ಸೆರೆಮನೆ ವಾಸದಲ್ಲಿ ಇದ್ದ ಕಾರಣದಿಂದ, ಉಳಿದವರೆಲ್ಲರೂ ಇವರನ್ನು ಹಾರ್ದಿಕವಾಗಿ ಸ್ವಾಗತಿಸಿ, ಬಂಗಾಲದಲ್ಲಿ ಪಕ್ಷದ ಮುಖಂಡರಾಗಿ ಪಕ್ಷವನ್ನು ಮುನ್ನಡೆಸಲು ಕಾರಣವಾಯಿತು. ಪ್ರಥಮ ಬಾರಿಗೆ ಸಾರ್ವಜನಿಕವಾಗಿ ವೇದಿಕೆಯಲ್ಲಿ ಭಾಷಣ ಮಾಡುವ ಅವಕಾಶ ಇಲ್ಲಿ ದೊರೆಯಿತು, 1907 ರಲ್ಲಿ ಸೂರತ್‌ದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಾವೇಶದ ಅಧ್ಯಕ್ಷರಾದರು. ಆದರೆ ಅಲ್ಲಿ ಘಟಿಸಿದ ಸಮಬಲದ ತೀವ್ರ ಸಂಘರ್ಷದಲ್ಲಿ ಕಾಂಗ್ರೆಸ್ ಒಡೆದು ಎರಡು ಭಾಗವಾಯಿತು. 1908 ಮೇ ತಿಂಗಳಲ್ಲಿ, ಅಲೀಪುರ ಘಟನೆಯ ಹಿನ್ನೆಲೆಯಲ್ಲಿ ಬಂಧನಕ್ಕೆ ಒಳಪಡಿಸಲಾಯಿತು. ಹೀಗಾಗಿ ಇವರ ಕ್ರಾಂತಿಕಾರಿ ನಿರೂಪಣೆಯ ಸಂಘಟನೆಯನ್ನು ಇವರ ಸಹೋದರ ಬರೀಂದ್ರ ಘೋಷ ನಿರ್ವಹಿಸುವಂತಾಯಿತು. ಆದರೆ ಅವರನ್ನು ಬಂಧಿಸಿದ ಅಲೀಪುರ ಘಟನೆಗೆ ಸಂಬಂಧಿಸಿದಂತೆ, ಅವರ ಮೇಲೆ ಆಪಾದನೆ ಮಾಡಲು ಯಾವುದೇ ಸಾಕ್ಷ್ಯಗಳೂ ಲಭ್ಯವಾಗದ ಕಾರಣ, ಅವರನ್ನು

ಆಪಾದನೆಯಿಂದ ಮುಕ್ತಗೊಳಿಸಲಾಗಿತ್ತು. ವಿಚಾರಣಾಧೀನ ಕೈದಿಯಾಗಿ ಅವರು ಒಂದು ವರ್ಷದ ಕಾಲ ಸೆರೆಮನೆ ವಾಸ ಅನುಭವಿಸಬೇಕಾಗಿ ಬಂದಿತು. 1909 ರಲ್ಲಿ ಈ ವಿಚಾರಣಾಧೀನ ಸೆರೆಮನೆ ವಾಸದಿಂದ ಬಿಡುಗಡೆ ಪಡೆದರು. ಆದರೆ ಸೆರೆಮನೆಯಿಂದ ಹೊರಗೆ ಬಂದು ನೋಡಿದಾಗ, ಅವರ ಪಕ್ಷದ ಸಂಘಟನೆಯು ಒಡೆದು ಹೋಗಿತ್ತು. ಇದರ ಮುಖಂಡರೂ ಸಹಿತ ಬಂಧನಕ್ಕೆ ಸಿಲುಕಿ ಸೆರೆಮನೆಯಲ್ಲಿದ್ದರು; ಕೆಲವರನ್ನು ಗಡಿಪಾರು ಮಾಡಲಾಗಿತ್ತು; ಮತ್ತೆ ಕೆಲವರು ಸ್ವಯಂಘೋಷಿತ ಮೌನಕ್ಕೆ ಶರಣಾಗಿದ್ದರು. ಹೆಸರಿಗೆ ಮಾತ್ರ ಪಕ್ಷದ ಅಸ್ತಿತ್ವವಿದ್ದರೂ ಪೂರ್ತಿ ಕಿವುಡಾಗಿತ್ತು. ಹತಾಶೆಗೊಂಡಿತ್ತು. ಯಾವುದೇ ನಿರ್ಣಯಾತ್ಮಕವಾದ ಕ್ರಿಯೆಗೆ ತೊಡಗಲು ಅಸಮರ್ಥವಾಗಿತ್ತು. ಹೀಗಾಗಿ ಮುಂದಿನ ಒಂದು ವರ್ಷ ಪೂರ್ತಿಯಾಗಿ ಶ್ರೀ ಅರವಿಂದರು ಏಕಾಕಿಯಾಗಿಯೇ ಇದನ್ನು ನಿವಹಿಸುವ ಅನಿವಾರ್ಯತೆ ಎದುರಾಯಿತು. ರಾಷ್ಟ್ರೀಯವಾದವನ್ನು ಪ್ರತಿಪಾದಿಸುವ ಏಕೈಕ ಆಶಯದ ಪಕ್ಷವನ್ನು ಈ ರೀತಿ 'ಉಳಿದಿರುವ ಏಕೈಕ ನಾಯಕ'ರ ರೀತಿಯಲ್ಲಿ ಮರುರೂಪಿಸುವ ಹೊಣೆಗಾರಿಕೆಯ ಅವಧಿಯಾಗಿತ್ತು. ಇದೇ ಸ್ಥಿತಿಯಲ್ಲಿಯೇ ಇಡೀ ವರ್ಷವನ್ನು ಕೇವಲ ಚಳವಳಿಯ ರೂಪು ರೇಷೆಗಳನ್ನು ಪುನರ್–ಪರಿಶೀಲಿಸುವ ಕುರಿತು, 'ಕರ್ಮಯೋಗಿ' ಎನ್ನುವ ಇಂಗ್ಲೀಶ ಪತ್ರಿಕೆಯಲ್ಲಿ ಲೇಖನಗಳನ್ನು ರೂಪಿಸತೊಡಗಿದರು. ಇದೇ ಸಮಯಕ್ಕೆ ಇದೇ ವಿಷಯದ ಕುರಿತೇ ಪ್ರಾರಂಭಗೊಂಡ ಬಂಗಾಲಿ ಪತ್ರಿಕೆ "ಧರ್ಮ"ದಲ್ಲಿಯೂ ಸಹಿತ ಇವರ ಲೇಖನಗಳು ಮುಂದುವರೆದವು. ಆದರೆ ಕೊನೆಗೆ ಅವರಿಗೆ ಅರಿವಿಗೆ ಬಂದದ್ದೇನೆಂದರೆ, ಭಾರತವಿನ್ನೂ ಇಂಥಹ ಹೋರಾಟಕ್ಕೆ ಸಾಮರ್ಥ್ಯಪೂರ್ಣವಾಗಿ ತೊಡಗಿಸಕೊಳ್ಳಲು ಆಗುತ್ತಿಲ್ಲ, ಇವರ ನೀತಿಗಳನ್ನು ಅನುಷ್ಠಾನಿಸಲು ಅವರಿಗಿನ್ನೂ ತರಬೇತಿಯ ಅವಶ್ಯಕತೆ ಇದೆ ಎಂದು ನಿರ್ಧರಿಸಿಕೊಂಡು ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾದರು. ಮಹಾತ್ಮಾ ಗಾಂಧಿಯವರು ಆಫ್ರಿಕಾದಲ್ಲಿ ರೂಪಿಸಿದ್ದ ಹೋರಾಟದ ಮಾದರಿಯ ವಿರೋಧ ವ್ಯಕ್ತಪಡಿಸುವ ರೀತಿಯಲ್ಲಿಯೇ ಹಾಗೂ 'ಹೋಮ್ ರೂಲ್'ನ ಕೆಲವು ಅಂಶಗಳೊಂದಿಗೆ ತರಬೇತಿಯ ಅನುಷ್ಠಾನದ ಬಗೆಗೆ ಯೋಜನೆ ರೂಪಿಸಿದ್ದರು. ಆದರೆ ಈ ಯೋಜನೆಯೂ ಸಹಿತ ಅನುಷ್ಠಾನಕ್ಕೆ ಬರುವ ಯಾವುದೆ ಸಂದರ್ಭಗಳು ಕಾಣಲಿಲ್ಲ, ಹೀಗಾಗಿ ತಾವೇ ಇಲ್ಲಿ ಅವರೆಲ್ಲ ಆಯ್ಕೆ ಮಾಡಿಕೊಂಡಿರುವ ಮುಖಂಡರು ಅಲ್ಲ ಎನ್ನುವ ಸಂದರ್ಭವಿರುವದನ್ನು ಕಂಡುಕೊಂಡರು. ಅದಕ್ಕಿಂತ ಹೆಚ್ಚಾಗಿ, ಅವರು ಅಲೀಪುರ

ಸೆರೆಮನೆಯಲ್ಲಿ ಒಂದು ವರ್ಷದ ಕಾಲ ಇದ್ದ ಕಾರಣದಿಂದಾಗಿ ಅಲ್ಲಿ ಅವರು ಸಂಪೂರ್ಣ ಅವಧಿಯನ್ನು 'ಯೋಗಾಭ್ಯಾಸ'ದಲ್ಲಿಯೇ ತೊಡಗಿಸಿಕೊಂಡಿದ್ದರು. ಬಾಹ್ಯ ಚಟುವಟಿಕೆಗಳ ದೂರವಿರಲು ಅವರ ಆಂತರ್ಯದ ಆಧ್ಯಾತ್ಮಿಕ ತುಡಿತವು ಪ್ರೇರೇಪಣೆ ನೀಡುತ್ತಿತ್ತು. ಇದನ್ನು ಮನದಟ್ಟು ಮಾಡಿಕೊಂಡ ಶ್ರೀ ಅರವಿಂದರು, ತಮ್ಮ ಎಲ್ಲ ರಾಜಕೀಯ ಚಟುವಟಿಕೆಗಳಿಂದ ದೂರವಾಗಿರಲು, ಅಥವಾ ಕೆಲ ಅವಧಿಯವರೆಗಾದರೂ ದೂರವಿರಲು ನಿರ್ಧಾರ ಮಾಡಿದರು.

**ಪಾಂಡಿಚೇರಿಯತ್ತ ಪಯಣ**

1910 ರಲ್ಲಿ ಈ ರಹಸ್ಯಮಯ ನಿವೃತ್ತಿಯ ಹಿನ್ನೆಲೆಯಲ್ಲಿ ಚಂದ್ರನಗರಿಯಿಂದ ಹೊರಟು, ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ಪಾಂಡಿಚೇರಿಗೆ ಸಮುದ್ರ ಪ್ರಯಾಣದ ಮೂಲಕ ತಲುಪಿದರು. ಆಗ ಈ ಪಾಂಡಿಚೇರಿ ಫ್ರಾನ್ಸ ಆಡಳಿತದಲ್ಲಿತ್ತು. ಈ ಮಧ್ಯದಲ್ಲಿಯೇ 'ಕರ್ಮಯೋಗಿನ್' ಪತ್ರಿಕೆಯಲ್ಲಿ ಬರೆದ ಲೇಖನದ ಹಿನ್ನೆಲೆಯಲ್ಲಿ ಅವರ ಮೇಲೆ ಮೂರನೇ ಮೊಕದ್ದಮೆಯೊಂದನ್ನು ಹೂಡಲಾಗಿತ್ತಲ್ಲದೇ ಬಂಧನಕ್ಕೂ ಪ್ರಯತ್ನ ನಡೆದಿತ್ತು. ಇವರು ಸಿಗದೇ ಹೋದ ಕಾರಣದಿಂದ ಆ 'ಕರ್ಮಯೋಗಿನ್' ಪತ್ರಿಕೆಯನ್ನು ಮುದ್ರಿಸುತ್ತಿದ್ದ ವ್ಯಕ್ತಿಯನ್ನು ಅಪರಾಧಿ ಎಂದು ಬಂಧಿಸಿತ್ತು. ಆದರೆ ಈ ಪ್ರಕರಣವು ಉಚ್ಚ ನ್ಯಾಯಾಲಯದ ಮುಂದೆ ಬಂದು, ವಿಚಾರಣೆಯಲ್ಲಿ ಕಿತ್ತು ಹಾಕಲಾಗಿತ್ತು.

ಶ್ರೀ ಅರವಿಂದರು ಬಂಗಾಲವನ್ನು ತ್ಯಜಿಸಿ ಬರುವ ಮುನ್ನ, ವಾತಾವರಣವನ್ನು ಮತ್ತೆ ಸರಳವಾದ ನಂತರದಲ್ಲಿ ಪುನಃ ರಾಜಕೀಯ ರಂಗಕ್ಕೆ ಮರಳಿ ಬರುವ ಯೋಚನೆಯಲ್ಲಿಯೇ ಇದ್ದರು. ಆದರೆ ಈ ಘಟನೆಗಳ ನಂತರದ ಅಲ್ಪಾವಧಿಯಲ್ಲಿಯೇ ಅವರು ಕೈಕೊಂಡಿದ್ದ ಆಧ್ಯಾತ್ಮಿಕ ಕಾರ್ಯದ ಮಹತ್ತಿನಿಂದಾಗಿ, ಮತ್ತು ಅದನ್ನು ಅವರು ಸಾಕ್ಷಾತ್ಕರಿಸಿಕೊಂಡಿದ್ದ ಹಿನ್ನೆಲೆಯಲ್ಲಿ, ಅದು ಇನ್ನೂ ಹೆಚ್ಚಿನ ಏಕಾಗ್ರತೆಯನ್ನು ಆಶಿಸುತ್ತಿರುವದನ್ನು ಮನನ ಮಾಡಿಕೊಂಡ ಶ್ರೀ ಅರವಿಂದರು ಆ ದಿಸೆಯತ್ತ ಮುಂದುವರೆದರು. ಇದೇ ಹಿನ್ನೆಲೆಯಲ್ಲಿ ತಮಗಿದ್ದ ಎಲ್ಲ ರಾಜಕೀಯ ಸಂಪರ್ಕಗಳಿಂದ ಬಿಡುಗಡೆ ಮಾಡಿಕೊಂಡರು. ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಮತ್ತೇ ನೀವೇ ಅಧ್ಯಕ್ಷರಾಗಿ ಎಂದು ಪದೇ ಪದೇ ಬರುತ್ತಿದ್ದ ಕರೆಗಳನ್ನೂ ಸಹಿತ ನಿರಾಕರಿಸಿದರು. 1910 ರಿಂದ ಅವರು ಪಾಂಡಿಚೇರಿಯ ವಾಸವನ್ನು ಪ್ರಾರಂಭ ಮಾಡಿದಂದಿನಿಂದ ಮುಂದೆ ಪೂರ್ತಿಯಾಗಿ ತಮ್ಮ

ಜೀವನವನ್ನು ‘ಆಧ್ಯಾತ್ಮಿಕ ಕಾರ್ಯ’ಗಳಿಗಾಗಿಯೇ ರೂಪಿಸಿಕೊಂಡು, ಏಕಾಗ್ರಚಿತ್ತರಾಗಿ ಸಾಧನೆಯಲ್ಲಿ ತೊಡಗಿಸಿಕೊಂಡರು.

ಈ ರೀತಿಯ ನಾಲ್ಕು ವರ್ಷಗಳ ಏಕಾಂತ ಮೌನ ಹಾಗೂ ಯೋಗ ಸಾಧನೆಯ ನಂತರದಲ್ಲಿ, 1914 ರಲ್ಲಿ ತತ್ತ್ವಜ್ಞಾನದ ಮಾಸಿಕಪತ್ರಿಕೆ “ಆರ್ಯ” ವನ್ನು ಪ್ರಕಾಶನಗೊಳಿಸಿದರು. ಬಹುತೇಕವಾಗಿ ಅವರ ಅಭಿವ್ಯಕ್ತಿಗಳೆಲ್ಲವೂ ಅದರಲ್ಲೂ ಮಹತ್ವಪೂರ್ಣವಾಗಿರುವ ಅಭಿವ್ಯಕ್ತಿಗಳೆಲ್ಲವೂ ಈ “ಆರ್ಯ” ಪತ್ರಿಕೆಯಲ್ಲಿಯೇ ಪ್ರಕಾಶನಗೊಂಡಿವೆ. ಇವುಗಳು ಗ್ರಂಥದ ರೂಪ ಪಡೆಯುವ ಮುನ್ನ ಇಲ್ಲಿ ಪೂರ್ತಿ ಪಾಠವಾಗಿಯೇ ಪ್ರಕಾಶನಗೊಂಡಿವೆ. “ಈಶಾವಾಸ್ಯಪನಿಷತ್ತು”, “ದಿವ್ಯ ಜೀವನ”, “ಯೋಗ ಸಮನ್ವಯ”ಗಳೆಲ್ಲವೂ ಆರ್ಯ ಪತ್ರಿಕೆಯಲ್ಲಿ ಧಾರಾವಾಹಿ ಸ್ವರೂಪದಲ್ಲಿ ಪ್ರಕಾಶನಗೊಂಡಿವೆ. ಅವರು ಯೋಗಸಾಧನೆಯ ಅಪೂರ್ವ ಶಕ್ತಿಯೊಂದಿಗೆ ಈ ಎಲ್ಲ ಕೃತಿಗಳೂ ಅವರ ಆಂತರ್ಯದ ಸಾಕ್ಷಾತ್ಕಾರದ ಅನುಭವದೊಂದಿಗೆ ಸಾಕಾರಗೊಂಡಿವೆ. ಅವರ ಇನ್ನುಳಿದ ಕೃತಿಗಳು “ಭಾರತೀಯ ನಾಗರಿಕತೆ ಹಾಗು ಸಂಸ್ಕೃತಿಯ ಶಕ್ತಿ ಮತ್ತು ಮಹತ್ವ” ಹಾಗೂ ‘ವೇದಗಳ ನೈಜ ಆಂತರ್ಯ’ (ವೇದದ ಜ್ಞಾನಕಾಂಡ), ಮಾನವ ಸಮಾಜದ ಪ್ರಗತಿ, ಕಾವ್ಯದ ಸ್ವಭಾವ ಮತ್ತು ವಿಕಾಸ, ‘ಮಾನವ ಕುಲದ ಸಮಗ್ರತೆ’ಯಂತಹ ವಿಷಯಗಳಲ್ಲಿ ನವೀನ ವಾತಾವರಣವನ್ನೇ ಸೃಷ್ಟಿಸಿದವು. ಇಂಗ್ಲಂಡಿನಲ್ಲಿ ಇದ್ದಾಗ ಬರೆದ ಕವನಗಳು ಹಾಗೂ ಬಡೋದೆಯಲ್ಲಿದಾಗ ಬರೆದ ಕವನಗಳನ್ನೂ ಇಲ್ಲಿ ಪ್ರಕಾಶನಗೊಳಿಸಿದರು. ಮತ್ತೆ ಕೆಲವು ಕವನಗಳು, ಸ್ವಾತಂತ್ರ್ಯ ಹೋರಾಟದ ಸಲುವಾಗಿನ ರಾಜಕೀಯ ಚಟುವಟಿಕೆಯ ಅವಧಿಯಲ್ಲಿ ಬರೆದವುಗಳನ್ನೂ ಮತ್ತು ಪಾಂಡಿಚೇರಿಯ ಪ್ರಥಮ ವರ್ಷದ ಅವಧಿಯಲ್ಲಿ ಬರೆದವುಗಳನ್ನು ಇಲ್ಲಿ ಪ್ರಕಟಪಡಿಸಿದರು. 1921 ರವರೆಗೂ ನಿರಂತರವಾಗಿ 6 ವರ್ಷ 6 ತಿಂಗಳುಗಳ ಕಾಲ ಪತ್ರಿಕೆ ತನ್ನ ಅಸ್ತಿತ್ವವನ್ನು ಗಟ್ಟಿಯಾಗಿಯೇ ರೂಪಿಸಿಕೊಂಡಿತು.

ಶ್ರೀ ಅರವಿಂದರು ಈ ರೀತಿಯಾಗಿ ರಾಜಕೀಯ ಮತ್ತು ಇತರೇ ಸಂಪರ್ಕಗಳಿಂದ ಸಂಪೂರ್ಣ ನಿವೃತ್ತರಾಗಿ ಪಾಂಡಿಚೇರಿಯಲ್ಲಿ ನೆಲೆಸಿದರು. ಆಗ ಅವರ ಸಂಗಡ ಕೇವಲ ನಾಲ್ಕೋ ಅಥವಾ ಐದೋ ಜನರು ಮಾತ್ರ ಅನುಯಾಯಿಗಳಾಗಿದ್ದರು. ತದನಂತರದ ಅವಧಿಯಲ್ಲಿ ಇವರ ಆಧ್ಯಾತ್ಮಿಕ

ಪಥವನ್ನು ಅನುಸರಿಸಲೆಂದು ಬರುವವರ ಸಂಖ್ಯೆ ಹೆಚ್ಚಾಗತೊಡಗಿತು. ಹೀಗಾಗಿ ಸಾಧಕರ ಒಂದು ಸಮುದಾಯವನ್ನೇ ಸಂರಚಿಸಬೇಕಾಯಿತು. ಎಲ್ಲರೂ ಕೂಡಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗುವಂತೆ, ಅದರಲ್ಲೂ ಈ ಉದ್ದೇಶದ ಸಲುವಾಗಿ, ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ, ಈ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಿಕೊಳ್ಳುವ ಸಲುವಾಗಿ ಶ್ರೀ ಅರವಿಂದರಿಂದ ಮಾರ್ಗದರ್ಶನ ಪಡೆಯುವದರ ಸಲುವಾಗಿ ಇಲ್ಲಿಗೆ ಆಗಮಿಸತೊಡಗಿದರು. ಇದು "ಶ್ರೀ ಅರವಿಂದೋ ಆಶ್ರಮ"ವನ್ನು ಸ್ಥಾಪಿಸಲು ಕಾರಣವಾಯಿತು.

**ಯೋಗಾಭ್ಯಾಸ**

ಶ್ರೀ ಅರವಿಂದರು ತಮ್ಮದೇ ಯೋಗ ವಿಧಾನದ (ಪೂರ್ಣಯೋಗದ) ಅಭ್ಯಾಸವನ್ನು 1905 ರಲ್ಲಿಯೇ ಪ್ರಾರಂಭಿಸಿದರು. ಪ್ರಾರಂಭದ ಹಂತದಲ್ಲಿ, ಭಾರತದಲ್ಲಿ ಇಲ್ಲಿಯವರೆಗೂ ಅನುಸರಿಸಿಕೊಂಡು ಬರಲಾಗುತ್ತಿರುವ ವಿಧಾನದಲ್ಲಿಯೇ, ಭಾರತೀಯ ಆಧ್ಯಾತ್ಮ ಶಾಸ್ತ್ರದ ಸಾರಭೂತದ ಆಂಶಗಳಿಂದಲೇ ನಿರ್ಮಾಣವಾದ ಪಥದಲ್ಲಿಯೇ ತಮ್ಮ ಮಾರ್ಗವನ್ನೂ ಆರಂಭಿಸಿದರು. ಈ ರೀತಿಯ ಅವರ ಶೋಧನೆಯ ಮಾರ್ಗದಲ್ಲಿ ಅವರು, ಮತ್ತೂ ಪರಿಪೂರ್ಣವಾಗಿರುವ ಅನುಭವವನ್ನು ಹೊಂದಿ, ಅಸ್ತಿತ್ವದಲ್ಲಿರುವ ಶಕ್ತಿ ಮತ್ತು ಜಡವನ್ನು ಎರಡು ವಿಭಿನ್ನ ನೆಲೆಯಲ್ಲಿ ಕಾಣದೇ, ಅವುಗಳನ್ನು ಒಂದುಗೂಡಿಸಿ ಸುಷಮ್ಯತೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ವಿಧಾನವನ್ನು ಆನ್ವೇಷಿಸಿದರು. ಯೋಗದ ವಿಷಯದಲ್ಲಿ ಇದೀಗ ಅನುಷ್ಠಾನದಲ್ಲಿರುವ ಬಹುತೇಕ ಮಾರ್ಗಗಳು ಈ ತದುತ್ತರದ ಶಕ್ತಿಯ ಕಡೆಗೆ ಇವೆ, ಹೀಗಾಗಿ ಅಂತಿಮದ ಹಂತದಲ್ಲಿ ಇವೆಲ್ಲವೂ ಜೀವನದ ವಿಮುಖತೆಯ ಕುರಿತು ವಿವರಿಸುವಂತಿವೆ.

ಆದರೆ ಶ್ರೀ ಅರವಿಂದರು, "ಈ ಶಕ್ತಿಯು ಪುನಃ ತನ್ನ ಎಲ್ಲ ಫಲಿತಗಳನ್ನೂ ಹೊಂದಿಕೊಂಡೇ ಅವತರಣಗೊಂಡು ಬಂದು ಪ್ರಕಾಶ ಮತ್ತು ಸಾಮರ್ಥ್ಯವನ್ನು ತರುವದರ ಜೊತೆಗೆ ಶಕ್ತಿಯ ತೋಷವನ್ನೂ ಮಾನವ ಕುಲದ ಜೀವನವನ್ನಾಗಿ ರೂಪಾಂತರಣಗೊಳಿಸುವಂತೆ' ರೂಪಿಸಿದ್ದಾರೆ. ಪ್ರಸ್ತುತದಲ್ಲಿರುವ ಮಾನವನ ಜೀವನವು ಭೌತಿಕ ಜಗತ್ತಿನಲ್ಲಿಯೇ ಅಜ್ಞಾನದ ಕವಚದಲ್ಲಿ ಅದೂ ಅಚೇತನದ ಆಧಾರದಲ್ಲಿ ಸೀಮಿತಗೊಂಡಂತೆ ಕಾಣುತ್ತಿದೆ. ಆದರೆ ಏನೇ ಈ ರೀತಿಯ ತಮಸ್ಸು

ಮತ್ತು ಅಜ್ಞಾನದಲ್ಲಿಯೇ ಇದ್ದರೂ ಸಹಿತ, ಅಲ್ಲಿಯೇ ದಿವ್ಯತ್ವದ ಅಸ್ತಿತ್ವದ ಸಾಧ್ಯತೆಯೂ ಇರುತ್ತದೆ. ಈಗ ಸೃಷ್ಟಿಗೊಂಡಿರುವ ವಿಶ್ವವು ಕೇವಲ ಯಾವುದೇ ಒಂದು ಪ್ರಮಾದದಿಂದ ನಿರ್ಮಿತಿಗೊಂಡಿಲ್ಲ; ಇದೊಂದು ಶೂನ್ಯವೂ ಅಲ್ಲ; ಮತ್ತೆ ಮೇಲಾಗಿ ಇದು ಕೇವಲ ಕಲ್ಪನೆಯೂ ಅಲ್ಲ. ಅಥವಾ ನಿರ್ವಾಣದ ಮೂಲಕವಾಗಲೀ ಇಲ್ಲವೇ ಆತ್ಮವು ಮತ್ತೆ ಮರಳಿ ತನ್ನ ಮೂಲ ನೆಲೆಗೆ ಸಾಗುವದಕ್ಕಾಗಿಯೇ ಇರುವ ಉದ್ದೇಶಕ್ಕಾಗಿ ರೂಪಿತವಾಗಿಲ್ಲ. ಆದರೆ ಈ ಭೌತಿಕ ಅಚೇತನಾವಸ್ಥೆಯ ಬೀಜದಲ್ಲಿಯೇ ದಿವ್ಯ–ಚೇತನವನ್ನು ಉತ್ತರೋತ್ತರವಾಗಿ ಪ್ರಗತಿಗೊಳಿಸುವ ಸಲುವಾಗಿ ಈ ಆಧ್ಯಾತ್ಮಿಕ ವಿಕಾಸದ ದೃಧ್ಯಗಳು ರೂಪುಗೊಳ್ಳುತ್ತವೆ. ಈ ವಿಷಯದಲ್ಲಿ 'ಮನಸ್ಸು' ಸರ್ವೋಚ್ಚ ಸ್ಥಾನದಲ್ಲಿದೆ. ಆದರೆ ಅದು ಹೊಂದಿರುವ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಇನ್ನೂ ಸರ್ವೋಚ್ಚ ಸ್ಥಾನಕ್ಕೆ ಆರೋಹಗೊಳ್ಳಲು ಸಾಧ್ಯವಾಗಿಲ್ಲ. ಈ ಮನಸ್ಸಿಗಿಂತ ಮೇಲೆ 'ಅತಿಮಾನಸವಿದೆ'. ಅಥವಾ ಸ್ವಯಂ–ಪೂರ್ಣವಾಗಿರುವ ಋತ–ಚೇತನವಿದೆ. ಇದು ಸ್ವಯಂ–ನಿರ್ಧರಣೆಯ ಪ್ರಕಾಶವಾಗಿದ್ದು ಮತ್ತು ಆ ದಿವ್ಯ–ಜ್ಞಾನದ ಶಕ್ತಿಯೂ ಆಗಿದೆ. ಹೀಗಾಗಿ ಮನಸ್ಸು ಎನ್ನುವದು ಪರಮಸತ್ಯವನ್ನು ಶೋಧಿಸುವ ಒಂದು ಅಜ್ಞಾನದ ಹಂತದಲ್ಲಿದೆ. ಆದರೆ ಇದು ಸ್ವಯಂ ಅಸ್ತಿತ್ವದಲ್ಲಿ ಇರುವ ಜ್ಞಾನವಾಗಿದ್ದು, ಈ ಎಲ್ಲ ಲೀಲೆಗಳನ್ನು ಸಮಂಜಸವಾಗಿಯೇ ನಿರ್ಣಯಿಸಿ, ಆ ಲೀಲೆಗಳಲ್ಲಿ ಅದರ ಆಕಾರಗಳನ್ನು ಮತ್ತು ಬಲಗಳನ್ನು ನಿರ್ಧರಿಸುತ್ತದೆ.

ಈ ಅತಿಮಾನಸ ಹಂತದಲ್ಲಿಯೇ ಅವತರಣಗೊಳುವ ಅಥವಾ ಮಾನವನು ಆ ಹಂತಕ್ಕೆ ಆರೋಹಣಗೊಂಡಲ್ಲಿ ಅದೇ 'ಪೂರ್ಣತೆಯ ಹಂತ'ವಾಗುತ್ತದೆ. ಇದು ಮಾನವನ ಸರ್ವೋಚ್ಚ ಬಯಕೆಯೂ ಆಗಿದೆ. ಈಗ ಲಭ್ಯವಿರುವ ಪ್ರಕಾಶ ಮತ್ತು ಜ್ಞಾನವನ್ನು ಮತ್ತೂ ಔನ್ನತ್ಯಕ್ಕೇರಿಸುವ, ಮಾನವನ ಆತ್ಮದ ನೈಜ ಸ್ವರೂಪವನ್ನು ಅರಿತುಕೊಳ್ಳುವ ಮತ್ತು ಪರಮಾತ್ಮನ ಸಂಗಡ ಸತತವೂ ಸಂಪರ್ಕ ಸಾಧಿಸಿಕೊಳ್ಳುವ ಅಥವಾ ಅವನೊಡನೆ ಒಂದಾಗಿರುವ, ಜೊತೆಗೆ ಮನಸ್ಸು, ಜೀವನ ಮತ್ತು ಶರೀರಗಳನ್ನೂ ಪರಿವರ್ತಿಸುತ್ತ ಅತಿಮಾನಸ ಶಕ್ತಿಯನ್ನು ಧರಿಸಿ ರೂಪಾಂತರಣಗೊಳ್ಳುವ ಸಲುವಾಗಿ ಇರುತ್ತದೆ. ಇದನ್ನು ಸಾಕಾರಗೊಳಿಸಿ–ಕೊಳ್ಳುವದೇ ಶ್ರೀ ಅರವಿಂದರ ಯೋಗ ಸಾಧನೆಯ ಉದ್ದೇಶವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/5–10 – ಶ್ರೀ ಅರವಿಂದರು**



**ಶ್ರೀ ಅರವಿಂದರ ಸಹಾನುಭೂತಿ**

ಪ್ರತಿಯೊಂದು ದೃಷ್ಟಾಂತದಲ್ಲಿಯೂ ಅಗಣಿತವಾಗಿ ಮತ್ತು ಶಾಶ್ವತದಿ ನೆಲೆಸಿರುವದು

(ಪುಷ್ಪಗಳ ಮಹತ್ವವನು ವಿವರಿಸುತ್ತಾ ಮಾತೆಯವರು ತಿಳಿಸಿದ್ದು)

ಈ ಹೂವಿನ ಬಾಟನಿಕಲ್ ಹೆಸರ; ಪೋರ್ಚುಲಿಕ ಗ್ರಾಂಡಿಫ್ಲೋರಾ

ಮೌನಂ ಆಯ್ತುವನಲೀಗ ಅನ್ಯ ಬೇಡಿಕೆಗಳ ರೋದನಂ;
ಒಂದೇ ಪಂಬಲ್ ಈಗಳ್ ಸಲೆಯವಳ ಶಕ್ತಿ ಮೇಣ್ ಸನ್ನಿಧಿಯಂ
ಎಳೆತರ್ಪ ಅವನ ಮನ, ಹೃದಯ ಮೇಣ್ ಪ್ರಾಣ ಪಂಜರದೋಳ್ ತಾನ್;
ಅಭಿಲಷಿಷನು ಒಂದನೆ ಆಹ್ವಾನಿಸಲಿಲ್ಲಿ ಕೆಳಕೆ ಅವಿರತಂ
ಅವಳ ಅಮೃತ ಸ್ಪರ್ಶಮಂ ಪ್ರೇಮ, ಸತ್ಯ ಮೇಣ್ ಹರ್ಷದ ತಾನ್
ದುಃಖ–ಗ್ರಸಿತ ಜಗದ ಸಲೆ ಅಮಾ–ನಿಶಾ ಮಧ್ಯದೊಳಗಂ.
ವಿಮುಕ್ತನವನಾತ್ಮಂ ಸಮರ್ಪಿತಮಾಯ್ತು ಅವಳ್ಗೆ ಪೂರ್ಣಂ.

**ಸಾವಿತ್ರಿ; ಪರ್ವ 3 ಸರ್ಗ 2 ಪುಟ 316 – ಶ್ರೀ ಅರವಿಂದರು**

**– ಅನು: ಮಂದರ್ಕೆ ಮಾಧವ ಪೈ**

# ಆರ್ಯ

**– ಅನುವಾದ: ಡಾ॥ ಬಿ.ಆರ್.ಭೀಡ್, ರಾಯಚೂರು**

ಈ ಮಾಸ ಪತ್ರಿಕೆಯಲ್ಲಿ (1914–1921) ದಿವ್ಯಜೀವನ, ಯೋಗ ಸಮನ್ವಯ ಮತ್ತಿತರ ಶ್ರೀ ಅರವಿಂದರ ಕೃತಿಗಳು ಮೊದಲ ಬಾರಿಗೆ ಬೆಳಕು ಕಂಡವು. ಈ ಕೃತಿಗಳು ಪ್ರತ್ಯೇಕವಾಗಿ ಗ್ರಂಥಗಳಾಗಿ ಪ್ರಕಟವಾಗುವವರೆಗೆ, ಅವನ್ನೆಲ್ಲ ಸೇರಿಸಿ 'ಆರ್ಯ' ಎಂದೇ ಉದಾಹರಿಸಲಾಗುತ್ತಿತ್ತು.

## ಆರ್ಯದ ವಿಚಾರಧಾರೆ

ಭಾರತದಲ್ಲಿ ಜನರು "ಹಳೆಯ ವಿಚಾರಗಳಿಗೆ" ಒಗ್ಗಿ ಹೋಗಿದ್ದಾರೆ. ಪತಂಜಲಿ ಮುಂತಾದ ಷಡ್‌ದರ್ಶನಗಳ ವಿಚಾರವೇ ಅವರಿಗೆ ಮುಖ್ಯವಾಗಿದೆ. ಹೊಸದಾಗಿ ಯಾವುದೇ ವಿಷಯವಿರಲಿ, ಜೀವನ, ವಿಚಾರ ಯೋಗ ಏನೇ ಇರಲಿ, ಅದು ಜನರ ನಿರೀಕ್ಷೆಯನ್ನು ಬುಡಮೇಲು ಮಾಡಿಬಿಡುತ್ತದೆ, ಮತ್ತು ಅದು ಅವರಿಗೆ ಅರ್ಥವಾಗುವುದಿಲ್ಲ, ರುಚಿಸುವುದಿಲ್ಲ. ಆರ್ಯದಲ್ಲಿ ಪ್ರತಿಪಾದಿತವಾಗುವ ವಿಚಾರಗಳು ಓದುಗರನ್ನು ಆಳವಾಗಿ ಚಿಂತಿಸುವಂತೆ ಮಾಡುತ್ತದೆ. ಬಹಳ ಜನರು ಬಹು ಕಾಲದಿಂದ ಹೊಸ ವಿಚಾರ ಮಾಡುವುದನ್ನು ಬಿಟ್ಟಿದ್ದಾರೆ, ಮರೆತಿದ್ದಾರೆ; ಆದರೆ ಈ ಪತ್ರಿಕೆ ಮಾತ್ರ, ಅವರನ್ನು ಆಳವಾಗಿ ಯೋಚಿಸುವಂತೆ ಮಾಡುತ್ತದೆ. ಜನರಿಗೆ ತಮ್ಮ ಮನಸ್ಸನ್ನು ಹೇಗೆ ಏಕಾಗ್ರಗೊಳಿಸಬೇಕೆಂಬುದು ಗೊತ್ತಿದೆ, ಆದರೆ ಹೇಗೆ ಯೋಚಿಸಬೇಕೆಂಬುದು ಗೊತ್ತಿಲ್ಲ. ಈ ಪತ್ರಿಕೆಯು ಓದುಗರನ್ನು ವಿಚಾರಕ್ಕೆ ಹಚ್ಚುತ್ತದೆ.

ಎಲ್ಲಿಯವರೆಗೆ ಯೋಗಾಭ್ಯಾಸ ನಿರತರಾದ ಜನರು ಓದು ಅರ್ಥೈಸಿ–ಕೊಳ್ಳುವವರಿರುತ್ತಾರೋ, ಅಲ್ಲಿಯವರೆಗೆ ನಾವೇನೂ ಕಾಳಜಿ ಮಾಡಬೇಕಾದ್ದಿಲ್ಲ – "ಆರ್ಯವು ಹೊಸ ಸಿದ್ಧಾಂತವನ್ನು, ಯೋಗದ ಹೊಸ ಪದ್ಧತಿಯನ್ನು ಪ್ರಸ್ತುತ ಪಡಿಸುತ್ತದೆ. ಇನ್ನು ಏನೇ ಹೊಸದಿರಲಿ, ಅದು ಪ್ರಚಾರವಾಗಬೇಕಾದರೆ ಸಾಕಷ್ಟು ಸಮಯ ತಗಲುತ್ತದೆ. ಹಾಗೆ ನೋಡಿದರೆ, ವಾಸ್ತವಾವಿಕವಾಗಿ ಅದು ಹಳೆಯದನ್ನೇ ಹೊಸದಾಗಿ ಸ್ಥಾಪನೆ ಮಾಡಲು ಪ್ರಯತ್ನಿಸುತ್ತದೆ; ಹಳೆಯದೆಂದರೆ ಅದು ಸಂಪೂರ್ಣ ಮರೆತೇ ಹೋಗಿರುವುದರಿಂದ ಹೊಸತೆಂಬಂತೆ ತೋರುತ್ತದೆ. ನಿಜವಾಗಿ, ಯಾರು ಸಾಧನೆ ಮಾಡುತ್ತಾರೋ, ಅನುಭವ ಪಡೆಯುತ್ತಾರೋ

ಅವರು ಮಾತ್ರ ಇದನ್ನು ಮೊದಲು ಅರ್ಥಮಾಡಿಕೊಳ್ಳಬಲ್ಲರು. ಒಂದು ರೀತಿಯಲ್ಲಿ ಇದು ಒಳ್ಳೆಯದೇ, ಏಕೆಂದರೆ ಇದು ಕೇವಲ ಬುದ್ಧಿಯನ್ನು ಸಂತೃಪ್ತಗೊಳಿಸಲು ಅಲ್ಲ, ಬದಲಾಗಿ ಜನರ ಜೀವನವನ್ನು ಬದಲಿಸುವ ಸಲುವಾಗಿ ಇದೆ. ಫ್ರಾನ್ಸ್‌ನಲ್ಲಿ ಇದನ್ನು ಬಹುವಾಗಿ ಮೆಚ್ಚಿಕೊಳ್ಳಲಾಯಿತು, ಯಾರು ಸತ್ಯವನ್ನು ಸಂಶೋಧಿಸುವ ಇಚ್ಛೆ ಹೊಂದಿದ್ದಾರೋ, ಅವರು ಇದನ್ನು ಹೆಚ್ಚು ಪ್ರಶಂಸಿದರು. ಏಕೆಂದರೆ ಅಲ್ಲಿನ ಜನರು (ಫ್ರೆಂಚರು) ಹಳೆಯ ವಿಚಾರಗಳಲ್ಲಿ ಮುಳುಗಿ ಹೋಗಿಲ್ಲ, ತಮ್ಮ ಆಂತರಿಕ ಮತ್ತು ಬಾಹ್ಯ ಜೀವನವನ್ನು ಬದಲಾಯಿಸಬಲ್ಲ ಹೊಸ ತತ್ವದ ಹುಡುಕಾಟದಲ್ಲಿದ್ದಾರೆ. ಅದೇ ಮನಃಸ್ಥಿತಿಯನ್ನು ನಾವು ಇಲ್ಲಿಯೂ ತರಲು ಸಾಧ್ಯವಾದರೆ, 'ಆರ್ಯ' ಪತ್ರಿಕೆ ಪ್ರಶಂಸೆಗಳಿಸುವುದರಲ್ಲಿ ಸಂಶಯವಿಲ್ಲ. ಸದ್ಯಕ್ಕೆ ಬಂಗಾಲವು ಮಾತ್ರ ರಾಜಕೀಯವನ್ನು, ಆಧ್ಯಾತ್ಮವನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿದೆ.

ಆರ್ಯ ಪತ್ರಿಕೆ ಆರಂಭ ಮಾಡಿದ ಕೆಲವೇ ದಿನಗಳಲ್ಲಿ, ಕೆಲ ಪದವೀಧರರಿಂದ ನನಗೊಂದು ಪತ್ರ ಬಂದಿತು; ತಮಗೆ ಬೇಕಾಗಿರುವುದು ಮಾನವನನ್ನಾಗಿ ಮಾಡುವ ಸಿದ್ಧಾಂತ" ಎಂದು ಅವರು ಬರೆದಿದ್ದರು. ನಾನು ಈ ಮಾನವನನ್ನಾಗಿ ಮಾಡುವವನ ಪಾಲಿನ ಕೆಲಸ ಮಾಡಿದ್ದೇನೆ, ಮತ್ತು ಆ ಕೆಲಸವನ್ನು ಈಗ ಯಾರು ಬೇಕಾದರೂ ಮಾಡಬಹುದು. ಇಡೀ ಪ್ರಕೃತಿಯೇ ಈಗ ಆ ಕೆಲಸ ಮಾಡುತ್ತಲಿದೆ, ಇಡೀ ವಿಶ್ವದಲ್ಲಿ ಈ ಕೆಲಸ ನಡೆದಿದೆ, ಆದರೆ ಭಾರತದಲ್ಲಿ ಸ್ವಲ್ಪ ನಿಧಾನವಾಗಿ ನಡೆದಿದೆ. ನನ್ನ ಕೆಲಸ ಈಗ ಮಾನವನನ್ನು ಮಾನವನನ್ನಾಗಿ ಮಾಡುವುದಲ್ಲ, ಮಾನವನನ್ನು ದೇವ ಮಾನವನನ್ನಾಗಿ ಮಾಡುವುದು ನನ್ನ ಕೆಲಸ. ನನ್ನ ಸದ್ಯದ ಬೋಧನೆ ಏನೆಂದರೆ, ಇಡೀ ವಿಶ್ವವು ಈಗ ಹೊಸ ಪ್ರಗತಿಯ ಕಡೆಗೆ, ಹೊಸ ವಿಕಾಸದ ಕಡೆಗೆ ಹೊರಳುವ ಸಿದ್ಧತೆ ನಡೆಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/224–25**

## ಆರ್ಯದಲ್ಲಿನ ಪರಿಕಲ್ಪನೆ

ನಾವೊಂದು ಆಲೋಚನೆಯ ಮೂಲಕ ಆರಂಭ ಮಾಡುತ್ತೇವೆ, ಮಾನವ ಕುಲವು ತನ್ನ ಜೀವನದಲ್ಲಿ ಒಂದು ಹೊಸ ಬದಲಾವಣೆಗೆ ಕಡೆಗೆ ಹೊರಟಿದೆ, ಅದು ವಿಶ್ವ ಜೀವನವನ್ನೇ ಸಂಪೂರ್ಣವಾಗಿ ಬದಲಾಯಿಸಲಿದೆ, ಹೊಸ ಜನಾಂಗವನ್ನೇ ಸೃಷ್ಟಿ ಮಾಡಲಿದೆ. ಎಲ್ಲ ದೇಶಗಳಲ್ಲಿ, ವಿಚಾರ ಮಾಡಬಲ್ಲ

ಜನರಲ್ಲಿ ಈ ಆಲೋಚನೆ, ಪರಿಕಲ್ಪನೆ, ಭರವಸೆ ಬೇರೆ ಬೇರೆ ರೂಪದಲ್ಲಿ ಮೂಡುತ್ತಲಿದೆ. ನಮ್ಮ ಗುರಿಯು ಆಧ್ಯಾತ್ಮಿಕ, ಧಾರ್ಮಿಕ, ಮತ್ತು ಜನಾಂಗವನ್ನು ಮುನ್ನಡೆಸಬಲ್ಲ, ಜ್ಞಾನವಂತರನ್ನಾಗಿ ಮಾಡಬಲ್ಲ ಸತ್ಯವನ್ನು ಹುಡುಕುವುದಾಗಿದ್ದು, ಈ ದಿಶೆಯಲ್ಲಿ ಪ್ರಯತ್ನ ಮಾಡಲು, ಶ್ರಮ ವಹಿಸಲು ಸಿದ್ಧವಾಗಿರುವುದಾಗಿದೆ. ಆಧ್ಯಾತ್ಮಿಕ ಅನುಭವ ಮತ್ತು ಸಾರ್ವತ್ರಿಕ ಸತ್ಯದ ಮೇಲೆ ಆಧರಿಸಿದ ಇಂಥ ಪ್ರಯತ್ನ. ಈಗಾಗಲೇ ನಮ್ಮ ಕಣ್ಣೆದುರಿಗಿದೆ, ಇಲ್ಲವಾದರೆ ಈ ದಿಶೆಯಲ್ಲಿ ನಾವು ಮಾಡುವ ಆದರೆ ಆ ಸತ್ಯದ, ಪ್ರಯತ್ನ ಮಾಡುವ ಹಕ್ಕೂ ಸಹ ನಮಗಿರುತ್ತಿರಲಿಲ್ಲ. ಆದರೆ ಆ ಸತ್ಯದ, ಪ್ರಯತ್ನದ ಸಂಪೂರ್ಣ ಬೌದ್ಧಿಕ ಅವಗಾಹನೆಗೆ ನಾವು ಪ್ರಯತ್ನ ಮಾಡಬೇಕಿದೆ ಮತ್ತು ಎದುರಾಗುವ ತೊಡುಕುಗಳನ್ನು ಕಂಡುಹಿಡಿದು ಪರಿಹರಿಸಬೇಕಾಗಿದೆ. ಹೀಗೆ ಮಾಡಬೇಕಾದರೆ ನಿರಂತರವಾಗಿ ಚಿಂತನೆ ಮಾಡಬೇಕಾಗುತ್ತದೆ. ಅತಿ ಸೂಕ್ಷ್ಮವಾಗಿ ಮತ್ತು ಆಳವಾಗಿ ಯೋಚಿಸಬೇಕಾಗುತ್ತದೆ, ಎಲ್ಲ ಮಗ್ಗುಲಗಳಿಂದಲೂ ಆಲೋಚನೆ ಮಾಡಬೇಕಾಗುತ್ತದೆ. ಮತ್ತು ಕೇವಲ ನಾವು ಮಾತ್ರ ಅಲ್ಲ ನಮ್ಮ ಓದುಗರ ಮೇಲೂ ಈ ನಿರಂತರ, ಕಠಿಣ, ಸೂಕ್ಷ್ಮ ಚಿಂತನೆಯನ್ನು ಹೇರಬೇಕಾಗುತ್ತದೆ. ಅಂತೆಯೇ ನಾವು ಈ ಕಂತುಗಳ ರೂಪದ ಧಾರಾವಾಹಿ ವಿಧಾನವನ್ನು ಆಯ್ದುಕೊಂಡಿದ್ದೇವೆ; ಈ ರೀತಿಯ ತಾತ್ವಿಕ ಚಿಂತನೆಯ ವಿಷಯವನ್ನು ಹೀಗೆ ಮಾಡುವುದು ಅಂದರೆ ಕಂತುಗಳ ರೂಪದಲ್ಲಿ ಮಾಡುವುದು – ಕೆಲ ಅನಾನುಕೂಲತೆಗಳನ್ನು ಹೊಂದಿದೆ, ಆದರೆ ಇದನ್ನು ಬಿಟ್ಟರೆ ನಮಗೆ ಬೇರೆ ದಾರಿ ಇಲ್ಲ. ನಮ್ಮ ಮೂಲ ಉದ್ದೇಶವೇನೆಂದರೆ, ಎರಡು ಭಿನ್ನ ಸಂಸ್ಕೃತಿಗಳ ನಡುವೆ ಸಮನ್ವಯ ಸಾಧಿಸಬೇಕು, ಮಾನವನ ವಿಚಾರವನ್ನೇ ಎರಡಾಗಿ ಅಂದರೆ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಿಜ್ಞಾನ ಎಂದು ವಿಭಾಗಿಸಿದ, ಆದರೆ ವಿಚಾರದ ಅತ್ಯುನ್ನತ ಸ್ಥಿತಿಯಲ್ಲಿ ಎರಡೂ ಒಂದಾಗಿ ಬೆಸೆಯುವ ವೈರುಧ್ಯವನ್ನೇ ಹಿಡಿದುಕೊಂಡು ಆರಂಭ ಮಾಡಬೇಕೆಂಬುದಾಗಿತ್ತು. ಆದರೆ ಮಹಾಯುದ್ಧದ ವಿಪರೀತ ಪರಿಣಾಮದಿಂದಾಗಿ, ಇದು ಸಾಧ್ಯವಾಗದೇ ಹೋಯಿತು. ಒಂದು ಅಪೂರ್ಣ ಕಂತನ್ನುಳಿದು 'ಆರ್ಯ' ಪತ್ರಿಕೆಯು ಭಾರತೀಯ ಮಾನಸಿಕತೆ ಮತ್ತು ಆಧ್ಯಾತ್ಮಿದ ಜೀವನದ ಪ್ರಕಾರ ಅತ್ಯಂತ ಉನ್ನತ ಸತ್ಯವನ್ನು ಪಾಶ್ಚಾತ್ಯ ಜ್ಞಾನದ ಜೊತೆ ಸಮನ್ವಯ ಮಾಡಿ ನೋಡುವ ಪ್ರಯತ್ನ ಮಾಡಿದೆ. ಸದ್ಯಕ್ಕೆ ನಮ್ಮ ಮುಂದಿರುವ ಸಮಸ್ಯೆಯ ಒತ್ತಡವೇ ನಮ್ಮ ಲೇಖನವನ್ನು ಹಾಗೆ ಬರೆಯುವಂತೆ

ಮಾಡಿದೆ. ತತ್ವಜ್ಞಾನವು ಯಾವುದೇ ಇರಲಿ, ಅಸ್ತಿತ್ವದ ಮೂಲಭೂತ ಸತ್ಯ ಮತ್ತು ನಮ್ಮ ಅನುಭವಕ್ಕೆ ಬರುವ ಅದರ ರೂಪ ಇವೆರಡರ ನಡುವಿನ ಸಂಬಂಧವನ್ನು ಕುರಿತು ಚಿಂತನೆ ಮಾಡುತ್ತದೆ. ಅತ್ಯಂತ ಆಳವಾದ ಅನುಭವವು ಹೇಳುವಂತೆ ಅಸ್ತಿತ್ವದ ಮೂಲಭೂತ ಸತ್ಯವು ಆತ್ಮ ಚೈತನ್ಯದ ಸತ್ಯವೇ ಆಗಿದೆ; ಇನ್ನೊಂದು ಜೀವನದ ಸತ್ಯವು ಆಕಾರದ ಸತ್ಯ ಹಾಗೂ ರೂಪಗೊಳ್ಳುವ ಸತ್ಯ ಮತ್ತು ಜೀವಂತ ಕಲ್ಪನೆ ಮತ್ತು ಕಾರ್ಯ. ಪಾಶ್ಚಾತ್ಯ ಮತ್ತು ಪೌರ್ವಾತ್ಯಗಳು ಇಲ್ಲಿ ತುಂಬ ವಿಭಿನ್ನವಾದ ದಾರಿ ಹಿಡಿದಿವೆ. ಪಾಶ್ಚಾತ್ಯ ದೃಷ್ಟಿಕೋನವು ಜೀವನದ ಅಥವಾ ಬದುಕಿನ ಸತ್ಯವನ್ನು ಎತ್ತಿ ಹಿಡಿಯಿತು, ಕೆಲ ಸಮಯವಂತೂ ಪೂರ್ತಿ ಬದುಕಿನ ಸತ್ಯವೊಂದನ್ನೇ ಪರಿಗಣಿಸಿ, ಆತ್ಮ ತತ್ವದ ಅಸ್ತಿತ್ವವನ್ನೇ ನಿರಾಕರಿಸಿತು, ಅದು ಅಜ್ಞಾತವಾದುದು, ಅಜ್ಞೇಯವಾದುದು ಎಂದು ಹೇಳಿ ತಡೆ ಹಾಕಿತು. ಆದರೆ ಅಂಥ ತೀವ್ರ ಅತಿರೇಕದ ವಾದದಿಂದ ಅದು ಹಿಂತಿರುಗಿ ಬರಲಾರಂಭಿಸಿದೆ. ಪೌರ್ವಾತ್ಯ ಸಿದ್ಧಾಂತವು ಆತ್ಮದ ಸತ್ಯವೊಂದನ್ನೇ ನಂಬಿಕೊಂಡಿತು, ಹಿಂದು ಸಮಯದಲ್ಲಿ, ಎಲ್ಲೆಡೆ, ವಿಶೇಷವಾಗಿ ಭಾರತದಲ್ಲಂತೂ ಅದೊಂದೇ ಸತ್ಯ ಎಂಬ ನಿರ್ಣಯಕ್ಕೆ ಬರಲಾಯಿತು, ಬದುಕಿನ ಸಾಧ್ಯತೆಗಳನ್ನು ಅವಜ್ಞೆ ಮಾಡಿ, ಅಥವಾ ಏನೋ ಒಂದು ಮಿತಿ, ನಿರ್ದಿಷ್ಟ ಪರಿಮಿತಿಯೊಳಗಿನ ಬೆಳವಣಿಗೆ ಎಂಬ ನಿರ್ಣಯಕ್ಕೆ ಬಂದಿತು. ಈಗ ಪೌರ್ವಾತ್ಯ ದೃಷ್ಟಿಕೋನ ಕೂಡ ಬದಲಾಗುತ್ತಿದೆ, ಅದರ ಅತಿರೇಕತೆ ಕಡಿಮೆಯಾಗುತ್ತಲಿದೆ. ಪಾಶ್ಚಾತ್ಯ ಈ ದೃಷ್ಟಿಕೋನವು ಆತ್ಮಚೈತನ್ಯದ ಸತ್ಯಕ್ಕೆ ಆಧ್ಯಾತ್ಮಿಕ ಸಾಧ್ಯತೆಗಳಿಗೆ ಎಚ್ಚತ್ತುಕೊಳ್ಳುತ್ತಿದೆ. ಪೌರ್ವಾತ್ಯವು ಜೀವನದ ಸತ್ಯಕ್ಕೆ ಎಚ್ಚರಾಗುತ್ತಿದೆ ಮತ್ತು ತನ್ನ ಆಧ್ಯಾತ್ಮಿಕ ಜ್ಞಾನವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನದತ್ತ ತಿರುಗುತ್ತಲಿದೆ. ನಮ್ಮ ದೃಷ್ಟಿಯಂತೆ ಅವುಗಳ ನಡುವೆ ನಿರ್ಮಿಸಲಾಗಿದ್ದ ವಿರೋಧವು ಅಸತ್ಯವಾದುದು. ಆತ್ಮವು ಅಸ್ತಿತ್ವದ ಮೂಲಭೂತ ಸತ್ಯವಾಗಿದ್ದರೆ, ಜೀವನವು ಅದರ ಪ್ರಕಟಣೆಯಾಗಿದೆ. ಆತ್ಮವು ಜೀವನದ ಮೂಲ ಮಾತ್ರ ಅಲ್ಲ ಅದರ ಆಧಾರವು ಹೌದು, ಅದರ ವ್ಯಾಪಕ ಸತ್ಯ ಮತ್ತು ಅದರ ಉಚ್ಚತಮ ಮತ್ತು ಸಂಪೂರ್ಣ ಪರಿಣಾಮವೂ ಹೌದು – ಆದರೆ ಜೀವನದ ಬೇರೆ ಬೇರೆ ರೂಪಗಳು ಕೇವಲ ಅದರ ಛದ್ಮವೇಷಗಳ ಮತ್ತು ಅದರ ಸ್ವ–ಪ್ರಕಟಣೆಯ ಉಪಕರಣಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/105**

## ಆರ್ಯ ಶಬ್ದದ ಅರ್ಥ

*ಆರ್ಯ ಎಂಬ ಹೆಸರಿನ ವೈಶಿಷ್ಟ್ಯವೇನು?*

ಅನೇಕ ದೃಷ್ಟಿಕೋನಗಳ ಮೂಲಕ ಈ ಪ್ರಶ್ನೆಯನ್ನು ಕೇಳಲಾಗಿದೆ. ಯುರೋಪಿಯನ್ ಓದುಗರಿಗೆ, ಪತ್ರಿಕೆಯ ಮುಖಪುಟದ ಮೇಲಿನ ಈ ಬ್ರಹ್ಮ ಲಿಪಿ ಎಂಬಂತೆ, ಓದಲು ಬಾರದ ಯಾವುದೋ ಹೆಸರು ಎಂಬಂತೆ ತೋರಬಹುದು, ಕೆಲವರಿಗೆ ಆಕರ್ಷಕ ಅನ್ನಿಸಬಹುದು, ಕೆಲವರಿಗೆ ವಿಕರ್ಷಕ ಅನ್ನಿಸಲುಬಹದು. ಅದು ಅವರವರ ಸ್ವಭಾವವನ್ನವಲಂಬಿಸಿದೆ. ಭಾರತೀಯರಿಗೆ ಈ ಶಬ್ದ ಪರಿಚಿತ, ಆದರೆ ಅವರ ಪೂರ್ವಜರಿಗೆ ಗೊತ್ತಿದ್ದ ವೈಶಿಷ್ಟ್ಯ, ಮಹತ್ವ ಈಗಿನ ಜನರಿಗೆ ಗೊತ್ತಿಲ್ಲ, ಅದರ ವೈಶಿಷ್ಟ್ಯ ಕಳೆದು ಹೋಗಿದೆ. ಪಾಶ್ಚಾತ್ಯ ಭಾಷಾ ವಿಜ್ಞಾನವು ಈ ಶಬ್ದವನ್ನು ಜನಾಂಗ ಅಥವಾ ಜಾತಿ ಎಂಬರ್ಥದಲ್ಲಿ ತೆಗೆದುಕೊಂಡಿದೆ. ಇದರಿಂದಾಗಿ ಇದು ಗೊತ್ತಿಲ್ಲದ ಜನರು ಬೇರೆ ಬೇರೆ ವಿಪರೀತ ಅರ್ಥ ಹಚ್ಚುತ್ತ ಹೊರಟಿದ್ದಾರೆ. ಇತ್ತೀಚಿಗೆ, ಭಾಷಾ ಶಾಸ್ತ್ರಜ್ಞರು ಕೂಡ ಈ ಶಬ್ದವು ಬೇರೆ ಬೇರೆ ಜನಾಂಗೀಯ ಸೂಚಕ ಶಬ್ದವಲ್ಲ, ಇದು ಕೇವಲ ಸಂಸ್ಕೃತಿಯ ವಿಭಿನ್ನತೆಯನ್ನು ಸೂಚಿಸುವ ಶಬ್ದ ಎಂದು ತಿಳಿದುಕೊಳ್ಳಲು ಆರಂಭಿಸಿದ್ದಾರೆ. ಏಕೆಂದರೆ, ವೇದಗಳಲ್ಲಿ ವಿಶಿಷ್ಟವಾದ ಸಂಸ್ಕೃತಿಯೊಂದನ್ನು ತಾವಾಗಿ ಅಳವಡಿಸಿಕೊಂಡವರನ್ನು ಆರ್ಯರೆಂದು ಕರೆಯಲಾಗುತ್ತಿತ್ತು, ಅದು ಆಂತರಿಕ ಮತ್ತು ಬಾಹ್ಯ ಸಂಸ್ಕೃತಿಗೆ, ಆದರ್ಶಕ್ಕೆ, ಮಹಾತ್ವಕಾಂಕ್ಷೆಗೆ ಸಂಬಂಧಪಟ್ಟ, ಸಂಸ್ಕೃತಿಗೆ ಸಂಬಂಧಪಟ್ಟ ಶಬ್ದವಾಗಿತ್ತು. ಆರ್ಯರ ದೇವತೆಗಳಿಂದ ಅತಿಭೌತಿಕ ಶಕ್ತಿಗಳು, ಅವು ಮಾನವನು ದೇವನಾಗಲು ಪಡುವ ಪ್ರಯತ್ನದಲ್ಲಿ ಸಹಾಯ ಮಾಡುವ ಶಕ್ತಿಗಳಾಗಿದ್ದವು. ಪ್ರಾಥಮಿಕ ಹಂತದ ಮಾನವ ಜನಾಂಗದ ಎಲ್ಲ ಉಚ್ಚ ಕೋಟಿಯ ಅಭೀಪ್ಸೆ, ಅದರ ಉದಾತ್ತ ಧಾರ್ಮಿಕ ಪ್ರವೃತ್ತಿ, ಅದರ ಅತ್ಯುನ್ನತ ಆದರ್ಶದ ಕಲ್ಪನೆ ಇವೆಲ್ಲವನ್ನು ಈ ಒಂದು ಶಬ್ದದಲ್ಲಿ ಹಿಡಿದಿಡಲಾಗಿತ್ತು.

ಮುಂದಿನ ದಿನಗಳಲ್ಲಿ ಆರ್ಯ ಎಂಬ ಶಬ್ದವು ವಿಶಿಷ್ಟ ನೈತಿಕ ಮತ್ತು ಸಾಮಾಜಿಕ ಆದರ್ಶ, ಸುವ್ಯವಸ್ಥಿತ ಜೀವನ ಪದ್ಧತಿ, ಔದಾರ್ಯ, ಉದಾತ್ತತೆ, ನೇರವಾದ ವ್ಯವಹಾರ, ಧೈರ್ಯ, ನಮ್ರತೆ, ಮಾರ್ದವತೆ, ಶುದ್ಧತೆ, ಮಾನವೀಯತೆ, ಅನುಕಂಪ, ದುರ್ಬಲರ ರಕ್ಷಣೆ, ಸ್ವಾತಂತ್ರ್ಯ, ಸಾಮಾಜಿಕ ಕರ್ತವ್ಯಗಳ ಪರಿಪಾಲನೆ ಜ್ಞಾನರ್ಜಾನೆಯ ತುಡಿತ, ವಿದ್ವಾಂಸರಿಗೆ ಪಂಡಿತರಿಗೆ ಗೌರವ ನೀಡುವುದು, ಮುಂತಾದ ಗುಣಗಳಿಗೆ ಅನ್ವಯವಾಗುತ್ತಿತ್ತು. ಅದು

ಬ್ರಾಹ್ಮಣ ಮತ್ತು ಕ್ಷತ್ರಿಯ ಇಬ್ಬರ ಕರ್ತವ್ಯಗಳ ಸಂಯುಕ್ತ ಪದವಾಗಿತ್ತು. ಇದಕ್ಕೆ ವಿಪರೀತವಾಗಿ, ವಿರುದ್ಧವಾಗಿ ಹೇಯ, ನೀಚ, ನಿಮ್ನ, ಅಸ್ಪಷ್ಟ, ಒರಟು, ಕ್ರೌರ್ಯ, ಹಿಂಸೆ ಅಸತ್ಯಗಳೆಡೆಗೆ ಹೊರಳಿದವರನ್ನು ಅನಾರ್ಯರೆಂದು ಗುರುತಿಸಲಾಗುತ್ತಿತ್ತು. ಉದಾತ್ತವಾದ ಚರಿತ್ರೆ ಇಲ್ಲದ ಯಾವ ಶಬ್ದವೂ ಮಾನವನ ಭಾಷೆಯ ಬಳಕೆಯಲ್ಲಿಲ್ಲ.

ತುಲನಾತ್ಮಕ ಭಾಷಾ ಶಾಸ್ತ್ರದ ಆರಂಭದ ದಿನಗಳಲ್ಲಿ, ಶಬ್ದಗಳ ಅಧ್ಯಯನ ಮಾಡುವ ಚರಿತ್ರೆಯನ್ನು ಪ್ರಾಗೈತಿಹಾಸಿಕ ಕಾಲದ ಪಂಡಿತರು ಹೇಳುವಂತೆ, ಆರ್ಯ ಎಂಬ ಶಬ್ದವು ಊಳುಬಿತ್ತು ಕ್ರಿಯಾ ಮೂಲದಿಂದ ಬಂದಿದೆ, ವೇದ ಕಾಲದ ಆರ್ಯರು ತಮ್ಮ ಸಂಬಂಧಿಕರಿಂದ ದೂರಾಗಿ ಈಶಾನ್ಯದೆಡೆಗೆ ಬಂದರು. ಅಲ್ಲಿನ ಜನ ಒಕ್ಕಲುತನವನ್ನು ಒಲ್ಲದೇ ಕೇವಲ ಕುರಿಕಾಯುವ, ದನಗಾಯುವ, ಬೇಟೆಯಾಡುವ ಕೆಲಸಕ್ಕೆ ಬಗ್ಗಿಸಿಕೊಂಡಿದ್ದರು. ಇಂಥ ಅವೈಜ್ಞಾನಿಕ ಕಲ್ಪನೆಯು ನಿರಾಧಾರವಾಗಿದೆ ಮತ್ತು ತಮ್ಮ ಕಲ್ಪನೆಯಾಗಿದೆ. ಒಂದರ್ಥದಲ್ಲಿ ನಾವು ಇದನ್ನೊಂದು ಸೂಚನೆಯಾಗಿ ತೆಗೆದುಕೊಳ್ಳಬಹುದು. ಯಾರು ಪರಮಾತ್ಮನು ತಮಗೆ ನೀಡಿದ ಅಂತರ್ಬಾಹ್ಯಲೋಕ ಕ್ಷೇತ್ರವನ್ನು ಅಂತರಂಗ ಮತ್ತು ಬಹಿರಂಗದ ಸಾಮಾಜಿಕ ಜೀವನವನ್ನು ಹಸನಾಗಿಸಲು, ಬಂಜರಾಗಿಸದೇ, ಬಿತ್ತನೆಯ ಕೃಷಿ ಮಾಡಿ ಸಮೃದ್ಧ ಬೆಳೆ ಪಡೆಯುತ್ತಿದ್ದ ಜನರು ಆರ್ಯರೆಂದು ಹೇಳಲ್ಪಡುತ್ತಿದ್ದರೆಂದು ಅರ್ಥೈಸಬಹುದು.

ಆರ್ಯರು ಎಂಬ ಶಬ್ದವು ಜನಾಂಗೀಯವಾಗಿದ್ದರೆ ಅದು ಶಕ್ತಿ, ಶೌರ್ಯ, ಯೋಧರು, ಆಗಿರುತ್ತಿದ್ದರೆಂದು ಹೇಳಬಹುದು. ಶಬ್ದದ ಮೂಲವು ಆರ್ ಅಂದರೆ ಶಕ್ತಿ, ಯುದ್ಧ ಎಂಬ ಅರ್ಥದಿಂದ ಬಂದಿರಬೇಕೆಂದು ಊಹಿಸಬಹುದು. ಗ್ರೀಕರ ಯುದ್ಧ ದೇವತೆ Ares aerious, ಧೈರ್ಯಶಾಲಿ, ಯೋದ್ಧಾ ಅಷ್ಟೇ ಏಕೆ aretie ಸಚ್ಚಾರಿತ್ರ್ಯ, ಲ್ಯಾಟಿನ್ ಶಬ್ದದ ಪ್ರಕಾರ virtus, ಭೌತಿಕ ಶಕ್ತಿ ಮತ್ತು ಧೈರ್ಯ ಹಾಗೆಯೇ ನೈತಿಕ ಬಲ ಹಾಗೂ ಔನ್ನತ್ಯ. ಶಬ್ದದ ಈ ರೀತಿಯ ಅರ್ಥವನ್ನು ನಾವು ಪರಿಗಣಿಸಬಹುದು. ನಾವು ಉದಾತ್ತ ಜ್ಞಾನಕ್ಕಾಗಿ ಹೋರಾಡುತ್ತೇವೆ, ಆದ್ದರಿಂದ ಜನರು ನಮ್ಮನ್ನು ಯೋದ್ಧಾಳುಗಳೆಂದು ಕರೆಯುತ್ತಾರೆ. ಜ್ಞಾನವೆಂದರೆ ಆಯ್ಕೆ, ಯಾವುದು ಅತ್ಯಂತ ಹಿತವೋ, ಒಳ್ಳೆಯದೋ ಅದರ ಆಯ್ಕೆ. ಯಾವುದು ಉದಾತ್ತವೋ, ಪ್ರಕಾಶಮಾನವೋ, ದೈವಿಕವೋ ಅಂಥದರ ಆಯ್ಕೆ. ಜ್ಞಾನವೆಂದರೆ ಎಲ್ಲದರ ತಿಳುವಳಿಕೆ, ದಯೆ, ದಾನ, ಎಲ್ಲ ವಸ್ತುಗಳ ಬಗೆಗೆ ಗೌರವ, ಎಷ್ಟೇ

ಕ್ಷುಲ್ಲಕ, ಕುರೂಪ, ಕಪ್ಪು ಎಂಬಂತೆ ಕಂಡರೂ, ಅವುಗಳಲ್ಲಿ ವಿಶ್ವಾತ್ಮಕನಾದ ಪರಮಾತ್ಮ ವಾಸವಾಗಿದ್ದಾನೆ ಎಂಬ ಭಾವದಿಂದ ಗೌರವ, ವಿಶ್ವಾಸ, ಎಲ್ಲದರಲ್ಲೂ ಸಮಾನ ಪ್ರೀತಿ. ಬರೀ ಅಷ್ಟೇ ಅಲ್ಲ ಸತ್ಕಾರ್ಯಗಳಲ್ಲಿ ಪ್ರವೃತ್ತಿ, ದೈವತ್ವವನ್ನು ಪ್ರಕಟಿಸುವ ಎಲ್ಲದರಲ್ಲೂ ಸಮಾನ ವ್ಯಕ್ತಿ. ಆಯ್ಕೆ ಎಂದರೆ ಅದಕ್ಕಾಗಿ ಅಗತ್ಯ ಬಿದ್ದರೆ ಯುದ್ಧದಲ್ಲಿ ಹೋರಾಟಕ್ಕೆ ತೊಡಗಲು ಸಿದ್ಧ. ಈ ಆಯ್ಕೆ ಸಾಮಾನ್ಯವಾದುದಲ್ಲ, ಅದನ್ನು ಬೇರೊಬ್ಬರ ಮೇಲೆ ಸುಲಭವಾಗಿ ಹೇರಲು ಬರುವುದಿಲ್ಲ.

ಯಾರು ಆ ಆಯ್ಕೆಯನ್ನು ಮಾಡುವುರೋ, ಯಾವುದಕ್ಕೂ ಹೆದರದೇ, ಸೋಲು ಹಿಂಜರಿಕೆಗಳಿಂದ ವಿಚಲಿತರಾಗದೇ, ತನ್ನ ಬುದ್ಧಿಗೆ ತೀರ ವಿಶಾಲವಾಗಿದೆ ಎಂಬ ಕಾರಣದಿಂದ ಯಾವ ವಿಶಾಲತೆಗೂ ಹಿಂಜರಿಯದೇ, ತನ್ನ ಚೈತನ್ಯಕ್ಕೆ ಹೆಚ್ಚು ಎತ್ತರವಾಗಿದೆ ಎಂಬ ಕಾರಣದಿಂದ ಯಾವ ಎತ್ತರಕ್ಕೂ ಹಿಮ್ಮೆಟ್ಟದೇ, ತನ್ನ ಧೈರ್ಯ ಮತ್ತು ಬಲಗಳಿಗೆ ತೀರ ಉನ್ನತವಾಗಿದೆ ಎಂದು ಯಾವ ಔನ್ನತ್ಯಕ್ಕೂ ಹಿಂಜರಿಯದೇ, ನಿಧಾನವಾಗಿ ಹಂತಹಂತವಾಗಿ ದೈವೀ ಪರ್ವತವನ್ನು ಏರಲು ಸಿದ್ಧರಾಗುವುರೋ ಅವರೇ ಆರ್ಯ, ಅವರೇ ದೈವೀ, ಅವರೇ ಸೇನಾನಿ, ಯೋಧ, ಜಯಶಾಲಿ, ಉದಾತ್ತ ಮನುಷ್ಯ, arisos ಗೀತೆಯು ಹೇಳುವಂತೆ ಶ್ರೇಷ್ಠರು. ಆರ್ಯಶಬ್ದದ ಮೂಲ ಭೂತ ಅರ್ಥವೇನೆಂದರೆ ಪ್ರಯತ್ನ, ಆರೋಹಣ ಮತ್ತು ಎಲ್ಲ ವಿರೋಧಗಳನ್ನು ಗೆಲ್ಲುವುದು. ಯಾರು ಹೋರಾಡಿ, ಒಳಗಿನ ಮತ್ತು ಹೊರಗಿನ ಅಡ್ಡಿಗಳನ್ನು, ವಿರೋಧಗಳನ್ನು ಮೀರಿ ಮುಂದುವರಿಯುವುನೋ ಅವನೇ ನಿಜವಾದ ಆರ್ಯ. ಅವನ ಸ್ವಭಾವ ಅಥವಾ ಪ್ರಕೃತಿಯ ಮೊದಲ ನಿಯಮವೆಂದರೆ ಆತ್ಮ–ವಿಜಯ–ಅವನು ಭೌತಿಕ ಧರ್ಮವನ್ನೇ ಗೆಲ್ಲುತ್ತಾನೆ, ಸಾಮಾನ್ಯ ಮಾನವರು ತಮ್ಮ ತಾಮಸಕ್ಕೆ, ಜಡತೆಗೆ, ನಿಷ್ಕ್ರಿಯತೆಗೆ, ತಾಮಸಿಕ ಮಿತಿಗಳಿಗೆ ಬಲಿ ಬೀಳುವಂತೆ ಅವನು ಬಲಿಬೀಳುವುದಿಲ್ಲ. ಅವನು ಪ್ರಾಣಿಕವನ್ನು ಗೆಲ್ಲುತ್ತಾನೆ, ಅದರ ಶಕ್ತಿಗಳನ್ನು ಗೆಲ್ಲುತ್ತಾನೆ; ಪ್ರಾಣಿಕದ ಹಸಿವು, ಹಪಹಪಿತನಗಳಿಗೆ ಅವನು ಒಪ್ಪಿಗೆ ನೀಡುವುದಿಲ್ಲ. ಅವುಗಳ ರಾಜಸಿಕ ಭಾವಾವೇಶಗಳಿಗೆ ಅವನು ಒಳಗಾಗುವುದಿಲ್ಲ. ಅವನು ಮನಸ್ಸು ಮತ್ತು ಅದರ ರೂಢಿಗಳಿಂದ ಪಾರಾಗುತ್ತಾನೆ, ಅವುಗಳನ್ನು ಗೆಲ್ಲುತ್ತಾನೆ. ಅವನು ಅಜ್ಞಾನದ ಚಿಪ್ಪಿನೊಳಗೆ ಜೀವಿಸುವುದಿಲ್ಲ. ಅವನಿಗೆ ಪೂರ್ವಗ್ರಹಗಳಿರುವುದಿಲ್ಲ, ಅದೇ ಹಳೆಯ ಚರ್ವಿತಚರ್ವಣ ವಿಚಾರಗಳಿರುವುದಿಲ್ಲ, ಅಭಿಪ್ರಾಯಗಳಿರುವುದಿಲ್ಲ. ಹೇಗೆ ಆಯ್ಕೆ ಮಾಡಬೇಕು, ಹೇಗೆ ಅನುಸರಿಸಬೇಕು ಅನ್ನುವದು ಅವನಿಗೆ ಗೊತ್ತು, ಬೌದ್ಧಿಕವಾಗಿ ವಿಶಾಲವಾಗಿ, ಎತ್ತರವಾಗಿ ಬೆಳೆಯುವ ರೀತಿ ಅವನಿಗೆ ಗೊತ್ತು. ಅದೇ ರೀತಿ ತನ್ನ ತನ್ನ ಸಂಕಲ್ಪದಲ್ಲಿ ಅವನು

ಬಲಿಷ್ಠ ಮತ್ತು ದೃಢವಾಗಿರುತ್ತಾನೆ. ಏಕೆಂದರೆ ಎಲ್ಲದರಲ್ಲೂ ಅವನು ಸತ್ಯವನ್ನೇ ಅರಸುತ್ತಾನೆ, ಎಲ್ಲದರಲ್ಲೂ ನಿಜವನ್ನೇ ಅರಸುತ್ತಾನೆ. ಎಲ್ಲರದಲ್ಲೂ ಉನ್ನತವಾದುದನ್ನು ಸ್ವತಂತ್ರವಾದುದನ್ನು ಅರಸುತ್ತಾನೆ. ಆತ್ಮ–ವಿಜಯವೆಂದರೆ ಆತ್ಮಪರಿಪೂರ್ಣತೆ; ಅದೇ ಅವನ ಗುರಿ. ಆದ್ದರಿಂದ ಅವನು ಏನನ್ನು ಗೆಲ್ಲುತ್ತಾನೋ ಅದನ್ನು ನಾಶ ಮಾಡುವುದಿಲ್ಲ, ಅದನ್ನು ಉದಾತ್ತಗೊಳಿಸುತ್ತಾನೆ, ಸಾರ್ಥಕಗೊಳಿಸುತ್ತಾನೆ. ತನಗೆ ಶರೀರ ಮನಃ ಪ್ರಾಣಗಳನ್ನು ನೀಡಿರುವುದು ಅವುಗಳನ್ನು ಮೀರಿದ ಸಾಧನೆ ಮಾಡಲೆಂದು ಅವನಿಗೆ ಗೊತ್ತು. ಅಂತೆಯೇ ಅವುಗಳನ್ನು ಗೆಲ್ಲಬೇಕು, ಅವುಗಳನ್ನು ಮೀರಬೇಕು, ಅವುಗಳ ಮಿತಿಯನ್ನು ನಿರಾಕರಿಸಿ ವಿಶಾಲಗೊಳಿಸಬೇಕು, ಅತ್ಯುನ್ನತವಾದುದೆಂದರೆ ಜಗತ್ತನ್ನು ನಿರಾಕರಿಸುವುದಿಲ್ಲ. ಅದರಲ್ಲಿ ನಿರರ್ಥಕತೆ ಕಾಣುವುದಲ್ಲ. ಎಂಬುದು ಅವನಿಗೆ ಗೊತ್ತು. ಬದಲಾಗಿ ದೈವೀ ಸಂಕಲ್ಪ, ಪ್ರಜ್ಞೆ, ಪ್ರೇಮ, ಆನಂದ ಇವುಗಳನ್ನು ಉತ್ತರೋತ್ತರವಾಗಿ ಹೆಚ್ಚಿಸುತ್ತ ಹೋಗಬೇಕು. ನಿನ್ನ ಜೀವನದಲ್ಲಿ ಅಂಥ ಅಂಶವಿದ್ದರೆ, ಅದು ಸ್ವೀಕಾರ ಮಾಡಲು ಸಿದ್ಧವಿದ್ದರೆ ಅದನ್ನು ಪರಿವರ್ತನೆ ಮಾಡಬೇಕು. ಆ ದೃಷ್ಟಿಯಿಂದ ಅವನು ಆಳು ಇದ್ದ ಹಾಗೆ, ಪ್ರಿಯತಮ, ಅನ್ವೇಷಣೆ ಇದ್ದ ಹಾಗೆ. ಅಂಥ ಪರಿಸರ, ಸಂದರ್ಭ ಸಿಕ್ಕರೆ ಅವನು ತನ್ನ ಕಾರ್ಯದಲ್ಲಿ ಆನಂದ, ಪ್ರೀತಿ, ಜ್ಞಾನಗಳನ್ನು ಜನರ ಮೇಲೆ ಧಾರೆ ಹರಿಸುತ್ತಾನೆ. ಏಕೆಂದರೆ ಆರ್ಯನು ಯಾವಾಗಲೂ ಕೆಲಸಗಾರನು, ಹೋರಾಟಗಾರನು. ಪರಮೋನ್ನತ ಸತ್ಯವನ್ನು ಅರಸುವುದಾಗಲಿ, ಅದರ ಸೇವೆಗೈಯುವುದಾಗಲಿ ಅದರಲ್ಲಿ ಅವನು ಹಿಂದೆ ಬೀಳುವುದಿಲ್ಲ. ಅವನು ಕಷ್ಟಗಳಿಂದ ಪಾರಾಗಲೆತ್ನಿಸುವುದಿಲ್ಲ. ಅವನು ದಣಿಯುವುದಿಲ್ಲ. ಅವನು ನಿರಂತರ (ಚೈತನ್ಯ) ಸಾಮ್ರಾಜ್ಯ ತನ್ನಂತರಂಗದಲ್ಲಿ ಹಾಗೂ ಹೊರಜಗತ್ತಿನಲ್ಲಿ ಸ್ಥಾಪಿತವಾಗಲೆಂದು ಹೋರಾಡುತ್ತಾನೆ.

ಪರಿಪೂರ್ಣನಾದ ಆರ್ಯನೆಂದರೆ ಅರ್ಹಂತನು. ವಿಶ್ವಾತೀತವಾದ ಪ್ರಜ್ಞೆಯು ಈ ವಿಶ್ವದಾಚೆಗೆ, ಇದನ್ನು ಮೀರಿ ಇದೆ, ಈ ಲೋಕಗಳೆಲ್ಲ ಅದರ ಉಪಕ್ರಮಗಳಿದ್ದಂತೆ, ಉಪಕ್ರೀಡೆ ಇದ್ದಂತೆ. ಅವನು ಆ ವಿಶ್ವಾತೀತ ಪ್ರಜ್ಞೆಯನ್ನು ಪಡೆಯಲು ಬಯಸುತ್ತಾನೆ ಮತ್ತು ಪಡೆಯುತ್ತಾನೆ. ವಿಶ್ವಾತೀತವಾದ ಪರಾತ್ಪರ ಪ್ರಜ್ಞೆಯು ವಿಶ್ವಾತ್ಮಕವೂ ಆಗಿದೆ. ಆ ವಿಶ್ವಾತ್ಮಕ ಪ್ರಜ್ಞೆಯಲ್ಲಿ ತನ್ನ ಮಿತಿಯುಳ್ಳ ಅಹಂನ್ನು ಸೇರಿಸುತ್ತಾನೆ. ಅವನ್ನು ಜಗತ್ತಿನಲ್ಲಿರುವ ಎಲ್ಲ ಜೀವಿಗಳ ಜೊತೆ ಒಂದಾಗುತ್ತಾನೆ, ನಿರ್ಜೀವ ವಸ್ತುಗಳ ಜೊತೆಗೂ ಒಂದಾಗುತ್ತಾನೆ, ಆತ್ಮ–ಪ್ರಜ್ಞೆ, ಪ್ರೇಮ ಆನಂದ ಹಾಗೂ ಎಲ್ಲವನ್ನೂ ಒಳಗೊಳ್ಳುವ ಶಕ್ತಿಗಳ ಜೊತೆ

ಏಕೀಭವಿಸುತ್ತಾನೆ. ವಿಶ್ವಾತೀತ ಹಾಗೂ ವಿಶ್ವಾತ್ಮಕವಾದ ಪ್ರಜ್ಞೆಯು ವ್ಯಕ್ತಿಯನ್ನು ಅವನ ಸಂಕುಚಿತತೆಯನ್ನು ಒಪ್ಪಿಕೊಂಡು ಜ್ಞಾನದ ವಿವಿಧ ಬಗೆಯ ದೃಷ್ಟಿಕೋನದಿಂದ ಭಗವಂತನು ತನ್ನ ಸೃಷ್ಟಿಯ ಜೊತೆ ಕ್ರೀಡಿಸುವುದನ್ನು ಸ್ವೀಕರಿಸುತ್ತದೆ. ಅಲ್ಲಿ ಅಹಂ, ಕೊನೆಗೆ ದೈವೀ ಕೆಲಸದ, ದೈವೀ ಕ್ರೀಡೆಯ ಮುಕ್ತ ಕೇಂದ್ರವಾಗಿ ಪರಿವರ್ತಿತವಾಗುತ್ತದೆ. ಅಂಥ ಪ್ರಜ್ಞೆಯಲ್ಲೂ ಸಹ ಸಾಕಷ್ಟು ಪ್ರೀತಿ, ಆನಂದ, ಜ್ಞಾನ ಇರುತ್ತದೆ. ಆರ್ಯನಾದವನು ಆ ಪರಿವರ್ತನೆ ಸಂಪನ್ನವಾಗುವಂತೆ ಮಾಡುತ್ತಾನೆ. ವೈಯಕ್ತಿಕತೆಯನ್ನು ಸಂಪೂರ್ಣವಾಗಿ ಮೀರಿ ನಿಂತು ಆಮೇಲೆ ಅದನ್ನು ಒಪ್ಪಿಕೊಳ್ಳುವುದು. ಅಪ್ಪಿಕೊಳ್ಳುವುದು ಕೊನೆಯ ದೈವೀ ತ್ಯಾಗ ಅಥವಾ ಯಜ್ಞವಾಗಿರುತ್ತದೆ. ಪರಿಪೂರ್ಣನಾದ ಅರ್ಹತೆ ಅಸ್ತಿತ್ವದ ಈ ಮೂರು ಅವಸ್ಥೆಗಳಲ್ಲಿ ಏಕಕಾಲಕ್ಕೆ ಇರುತ್ತಾನೆ, ನಿಮ್ನವಾದುದನ್ನು ಉನ್ನತೀಕರಿಸುತ್ತಾನೆ, ನಿಮ್ನದಲ್ಲಿ ಉನ್ನತ ಶಕ್ತಿಯನ್ನು ಸ್ವೀಕರಿಸುತ್ತಾನೆ, ಅವನು ತಾನು ಒಂದಾಗಿರುವ ಜಗತ್ತಿನ ಎಲ್ಲ ಸಂಕೇತಗಳನ್ನು ಪರಿಪೂರ್ಣವಾದ ಪ್ರತಿನಿಧಿಸುವಂತವಾಗುತ್ತಾನೆ. ಅವನನ್ನು ತ್ರಿಮೂರ್ತಿ, ತ್ರಿವಳಿ ಬ್ರಹ್ಮ ಎಂದು ಕರೆಯುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/441–44 – ಶ್ರೀ ಅರವಿಂದರು**

**ದೈವತ್ವವನ್ನು ಗುರುತಿಸುವುದು**

ಹೌದು ನಿಜ, ಮಾನವನ ಮನಸ್ಸಿನಂತೆಯೇ ತಾನೂ ಯಥಾಸ್ಥಿತಿ(ಡಿಟ್ಟೋ) ಹೇಳುವುದಿಲ್ಲವೋ ಅದು ದೈವಿಕವಾಗಿರಲಾರದು. ಸಾಮಾನ್ಯವಾಗಿ ಇದು ಸಹಜ ನಿರ್ಣಯ. ಪರಮಾತ್ಮನು ನನಗೇನು ಬೇಕೋ ಅದನ್ನು ಮಾಡಬೇಕು, ನಾನು ಆಲೋಚನೆ ಮಾಡಿದಂತೆಯೇ ಆಲೋಚನೆ ಮಾಡಬೇಕು. ನಾನು ನಿರ್ಣಯಿಸಿದಂತೆ ನಿರ್ಣಯಿಸಬೇಕು. ನನ್ನ ಚಿಂತನೆಗಳನ್ನು ಬೆಂಬಲಿಸಬೇಕು. ನನ್ನ ಅಭಿರುಚಿ, ಅನಿಸಿಕೆ, ಬೇರೆಯವರ ಬಗ್ಗೆ ನನಗಿರುವ ಭಾವನೆ ಎಲ್ಲವನ್ನೂ ಅವನ ಬೆಂಬಲಿಸಬೇಕು. ಇಲ್ಲವಾದರೆ ಅವನೆಂತ ಪರಮಾತ್ಮನಾಗಬಲ್ಲ? ಏಕೆಂದರೆ ನಾನೇನು ಆಲೋಚನೆ ಮಾಡುತ್ತೇನೋ, ಬಯಸುತ್ತೇನೋ ಮತ್ತು ಭಾವಿಸುತ್ತೇನೋ ಅದು ಸತ್ಯವಾಗಿರಬೇಕು. ಆಶ್ರಮದಲ್ಲಿರುವ ಬಹುತೇಕ ಸಾಧಕರ ಚಿಂತನೆ, ಪ್ರವೃತ್ತಿ ಈ ರೀತಿಯೇ ಇದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/532 – ಶ್ರೀ ಅರವಿಂದರು**

# ಶ್ರೀಮಾತೆಯವರು ಮತ್ತು ಶ್ರೀ ಅರವಿಂದರು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಒಂದೇ ಪ್ರಜ್ಞೆ**

ನನ್ನ ಮತ್ತು ಶ್ರೀಮಾತೆಯವರ ಪ್ರಜ್ಞೆಯ ಮಧ್ಯದಲ್ಲಿ ಇದ್ದ ವಿರೋಧ ಭಾವನೆಯೇ, ಅದರಲ್ಲೂ ಶ್ರೀಮಾತೆಯವರು ಇನ್ನೂ ಸಂಪೂರ್ಣವಾಗಿ ಎಲ್ಲರಿಂದಲೂ ಗುರುತಿಸಲ್ಪಡುವ ಮೊದಲು ಹಾಗೂ ಸ್ವೀಕರಿಸಲ್ಪಡುವದಕ್ಕಿಂತ ಮೊದಲಿನ ಅವಧಿಯಲ್ಲಿ, ಆಶ್ರಮದಲ್ಲಿ ಕೆಲವರಿಂದ (ಅ ಮತ್ತು ಬ ಹಾಗೂ ಮತ್ತೆ ಕೆಲವರು), ಆ ದಿನಗಳಲ್ಲಿ ಒಂದು ಆವಿಷ್ಕಾರದಂತೆಯೇ ಹೊರಹೊಮ್ಮಿತ್ತು. ಶ್ರೀಮಾತೆಯವರು ಮಾನ್ಯವಾದ ನಂತರವೂ, ಅವರು ಈ ಅರ್ಥವಿಲ್ಲದ ವಿರೋಧದಲ್ಲಿಯೇ ಉಳಿದುಕೊಂಡರು ಮತ್ತು ತಮಗೂ ಹಾಗೂ ಇತರರಿಗೂ ದೊಡ್ಡ ಹಾನಿಯನ್ನು ಮಾಡಿದರು. ಶ್ರೀಮಾತೆಯವರ ಹಾಗೂ ನನ್ನ ಪ್ರಜ್ಞೆಗಳು ಒಂದೇ ಆಗಿವೆ, ಇಬ್ಬರಲ್ಲೂ ಒಂದೇ ದೈವೀ–ಪ್ರಜ್ಞೆ ಇದೆ, ಯಾಕೆಂದರೆ ಅದು ಲೀಲೆಗೆ ಅವಶ್ಯಕವಾಗಿತ್ತು. ಅವರ ಜ್ಞಾನ, ಶಕ್ತಿ ಮತ್ತು ಪ್ರಜ್ಞೆ ಇಲ್ಲದೆ ಏನನ್ನೂ ಮಾಡಲಾಗದು – ಯಾರಾದರೂ ಅವರ ಪ್ರಜ್ಞೆಯನ್ನು ನಿಜವಾಗಿಯೂ ಅನುಭವಿಸಿದರೆ, ಅದರ ಹಿಂದೆ ನಾನಿದ್ದೇನೆ ಎಂದು ಅವರಿಗೆ ಅರಿವಿರಬೇಕು ಮತ್ತು ಒಂದು ವೇಳೆ ನನ್ನ ಪ್ರಜ್ಞೆಯನ್ನು ಅನುಭವಿಸಿದರೆ ಅದರ ಹಿಂದೆ ಶ್ರೀಮಾತೆಯವರ ಪ್ರಜ್ಞೆ ಇದೆ ಎಂದುಕೊಳ್ಳಬೇಕು. ಆ ರೀತಿ ಬೇರ್ಪಡಿಸುವಿಕೆಯನ್ನು ಮಾಡಿದರೆ ಸತ್ಯವು ಪ್ರಕಟವಾಗುವುದೆಂತು – ಸತ್ಯದಿಂದ ಬೇರ್ಪಡಿಸುವಿಕೆ ಎಂಬ ಯಾವ ಸಂಗತಿಯೂ ಇಲ್ಲ.

**ಒಂದೇ ಶಕ್ತಿ**

*ನಿಮ್ಮ ಮತ್ತು ಶ್ರೀಮಾತೆಯವರ ಕಾರ್ಯ ಶೈಲಿಯಲ್ಲಿ ಏನಾದರೂ ಅಂತರವಿದೆಯೆ – ಅಂದರೆ ಶಕ್ತಿಯಲ್ಲಿ ಅಥವಾ ಸಫಲತೆಯಲ್ಲಿ?*

ಇಲ್ಲ, ಅದು **"ಒಂದೇ ಶಕ್ತಿ"**

*

ನಾವು ಒಂದು, ಮತ್ತು ಏನು ಕೊಡಲ್ಪಟ್ಟಿದೆಯೊ ಅದು ನಮ್ಮೀರ್ವರಿಂದ ಎಂದು ನೀನು ಹೇಳುವುದರಲ್ಲಿ ಸತ್ಯವಿದೆ. ನಾನು ಕೊಡಮಾಡಿದರೆ, ಶ್ರೀಮಾತೆಯವರ

ಶಕ್ತಿಯು ಅದರ ಜೊತೆಗೆ ಹೋಗುತ್ತದೆ, ಇಲ್ಲದಿದ್ದರೆ ಸಾಧಕನು ಏನನ್ನೂ ಪಡೆಯುವುದಿಲ್ಲ, ಮತ್ತು ಶ್ರೀಮಾತೆಯವರು ಕೊಡಮಾಡಿದರೆ, ಅದರ ಜೊತೆ ನನ್ನ ಬೆಂಬಲವೂ ಇರುತ್ತದೆ ಮತ್ತು ಅದಕ್ಕೆ ನನ್ನ ಹಾಗೂ ಶ್ರೀಮಾತೆಯವರ ಬೆಳಕನ್ನು ಕೊಡುತ್ತದೆ. ಅದು ಒಂದು ಅವಿಭಾಜ್ಯ ಕ್ರಿಯೆಯ ಎರಡು ಮಗ್ಗಲುಗಳು, ಒಂದು ತನ್ನಡೊನೆ ಇನ್ನೊಂದನ್ನು ಸಾಗಿಸುತ್ತದೆ. ಅದಕ್ಕೆ ಒತ್ತುಕೊಡುವುದು ಶ್ರೀಮಾತೆಯವರ ಶಕ್ತಿ, ಶಾಂತಿಯು ಸಹ.

*

ಶ್ರೀಮಾತೆಯವರಿಂದ ಯಾರು ಏನನ್ನು ಪಡೆದುಕೊಳ್ಳುತ್ತಾರೋ, ಅದು ನನ್ನಿಂದಲೂ ಸಹ ಬರುತ್ತದೆ – ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಹಾಗೆಯೇ, ನಾನೇನಾದರು ಕೊಟ್ಟರೆ ಅದು ಶ್ರೀಮಾತೆಯವರ ಶಕ್ತಿಯಿಂದ ಸಾಧಕನ ಜೊತೆಗೆ ಹೋಗುತ್ತದೆ.

**ಒಂದೇ ಮಾರ್ಗ**

ಶ್ರೀಮಾತೆಯವರ ಪ್ರಜ್ಞೆಯು ದೈವೀ ಪ್ರಜ್ಞೆ ಮತ್ತು ಅದರಿಂದ ಬರುವ ಬೆಳಕು ದೈವೀ ಸತ್ಯದ ಬೆಳಕಾಗಿದೆ; ಅವರು ಅವತರಣಗೊಳಿಸುವ ಶಕ್ತಿಯು ದೈವೀ ಸತ್ಯದ ಶಕ್ತಿಯಾಗಿದೆ. ಯಾರು ಶ್ರೀಮಾತೆಯವರ ಬೆಳಕನ್ನು ಸ್ವೀಕರಿಸಿ ಮತ್ತು ಒಪ್ಪಿಕೊಂಡು ಅದರಲ್ಲಿರುತ್ತಾರೊ, ಅವರು ಎಲ್ಲ ಸ್ಥರಗಳಲ್ಲಿ (ಮಾನಸ, ಪ್ರಾಣ ಹಾಗೂ ಭೌತಿಕ) ಸತ್ಯವನ್ನು ಕಾಣುತ್ತಾರೆ. ಅವರು ಅ–ದೈವಿಕವಾದ ಎಲ್ಲವನ್ನೂ ನಿರಾಕರಿಸುತ್ತಾರೆ; ಅ–ದೈವಿಕವು ಮಿಥ್ಯೆಯಾಗಿದೆ, ಅಜ್ಞಾನವಾಗಿದೆ, ಕತ್ತಲೆಯ ಶಕ್ತಿಗಳ ಪ್ರಮಾದವಾಗಿದೆ; ಅಸ್ಪಷ್ಟವಾದ ಎಲ್ಲವೂ ಅ–ದೈವಿಕವಾಗಿದೆ ಮತ್ತು ಅದು ದೈವೀ ಸತ್ಯವನ್ನು ಹಾಗೂ ಬೆಳಕನ್ನು ಸ್ವೀಕರಿಸಲು ಇಚ್ಛಿಸುವುದಿಲ್ಲ. ಆದುದರಿಂದ ನಾನು ಯಾವಾಗಲೂ ಹೇಳುತ್ತೇನೆ, ಶ್ರೀಮಾತೆಯವರ ಸಂಪರ್ಕದಲ್ಲಿ ಇರಿ ಮತ್ತು ಅವರ ಶಕ್ತಿಯ ಹಾಗೂ ಬೆಳಕಿನ ಸಂಪರ್ಕದಲ್ಲಿ ಇರಿ. ಹಾಗೆ ಮಾಡುವುದರಿಂದ ಅಸ್ಪಷ್ಟತೆಯಿಂದ ಹಾಗೂ ಗೊಂದಲದಿಂದ ಹೊರ ಬರುವಿರಿ ಮತ್ತು ಮೇಲಿನಿಂದ ಬರುವ ಸತ್ಯವನ್ನು ಸ್ವೀಕರಿಸುವಿರಿ.

ಒಂದು ವಿಶೇಷ ಅರ್ಥದಲ್ಲಿ ಶ್ರೀಮಾತೆಯವರ ಬೆಳಕಿನ ಬಗ್ಗೆ ಅಥವಾ ನನ್ನ ಬೆಳಕಿನ ಬಗ್ಗೆ ಮಾತನಾಡಿದಾಗ, ಒಂದು ವಿಶೇಷವಾದ ಗಹನ ಕ್ರಿಯೆಯ ಬಗ್ಗೆ

ಮಾತನಾಡುತ್ತಿರುತ್ತೇವೆ – ಉನ್ನತ ಮನಸ್ಸಿನಿಂದ ಬರುವ ಒಂದು ನಿರ್ದಿಷ್ಟ ಬೆಳಕಿನ ಬಗ್ಗೆ ಮಾತನಾಡುತ್ತೇವೆ.. ಈ ಕ್ರಿಯೆಯಲ್ಲಿ ಶ್ರೀಮಾತೆಯವರ ಬೆಳಕು ಶ್ವೇತ ವರ್ಣದ್ದು. ಆ ಬೆಳಕು ಶುದ್ಧಗೊಳಿಸುತ್ತದೆ, ಪ್ರಕಾಶಗೊಳಿಸುತ್ತದೆ, ಸತ್ಯದ ಪೂರ್ಣ ಸಾರ ಮತ್ತು ಸಾಮರ್ಥ್ಯವನ್ನು ಕೆಳ ತರುತ್ತದೆ ಮತ್ತು ಪರಿವರ್ತನೆಯನ್ನು ಸಾಧ್ಯವಾಗಿಸುತ್ತದೆ. ಆದರೆ ವಾಸ್ತವದಲ್ಲಿ ಮೇಲಿನಿಂದ ಬರುವ, ಉನ್ನತ ದೈವೀ ಸತ್ಯದಿಂದ ಬರುವ ಪ್ರಕಾಶ ಶ್ರೀಮಾತೆಯವರದಾಗಿದೆ. ಶ್ರೀಮಾತೆಯವರ ಪಥದಲ್ಲಿ ಮತ್ತು ನನ್ನ ಪಥದಲ್ಲಿ ಯಾವುದೇ ಭಿನ್ನತೆ ಇಲ್ಲ; ನಮ್ಮಲ್ಲಿ ಯಾವಾಗಲೂ ಒಂದೇ ಮಾರ್ಗವಿತ್ತು, ಉನ್ನತ ಮಾನಸದೆಡೆಗೆ ಮತ್ತು ದೈವೀ ಸಾಕ್ಷಾತ್ಕಾರದೆಡೆಗೆ ಮುನ್ನಡೆಸುವಂಥ ಮಾರ್ಗ; ನಮ್ಮ ಮಾರ್ಗಗಳು, ಅಂತ್ಯದಲ್ಲಿ ಮಾತ್ರವಲ್ಲದೆ ಪ್ರಾರಂಭದಿಂದಲೂ ಒಂದೇ ಆಗಿವೆ. ಈ ರೀತಿಯ ಪ್ರತ್ಯೇಕತೆ ಮತ್ತು ವಿರೋಧವನ್ನು ರಚಿಸುವ ಪ್ರಯತ್ನ, ಶ್ರೀಮಾತೆಯವರನ್ನು ಒಂದು ಬದಿಯಲ್ಲಿ ಇರಿಸುವುದು ಮತ್ತು ನನ್ನನ್ನು ಮತ್ತೊಂದು ಹಾಗೂ ವಿರುದ್ಧವಾದ ಅಥವಾ ಬೇರೆಯದೇ ಬದಿಯಲ್ಲಿ ಇರಿಸುವುದು ಮಿಥ್ಯಾ ಶಕ್ತಿಗಳ ಉಪಾಯವಾಗಿದೆ. ಅವು ಸಾಧಕನನ್ನು ಸತ್ಯದೆಡೆಗೆ ಮುನ್ನಡೆಯುವುದನ್ನು ತಡೆಯುತ್ತವೆ, ಆದುದರಿಂದ ಈ ರೀತಿಯ ಎಲ್ಲ ಮಿಥ್ಯೆಗಳನ್ನು ನಿಮ್ಮ ಮನಸ್ಸಿನಿಂದ ತೆಗೆದು ಹಾಕಿ.

*

ಶ್ರೀ ಅರವಿಂದರ ಪರಿಚಯವಿರುವ ಮೊದಲು ಅಥವಾ ಅವರನ್ನು ಭೇಟಿಯಾಗುವ ಮೊದಲೇ ಶ್ರೀಮಾತೆಯವರು ಯೋಗವನ್ನು ಮಾಡುತ್ತಿದ್ದರು; ಆದರೆ ಅವರ ಸಾಧನಾ ಪಥಗಳು ಒಂದೇ ಕ್ರಮವನ್ನು ಸ್ವತಂತ್ರವಾಗಿ ಅನುಸರಿಸುತ್ತಿದ್ದವು. ಅವರು ಬೇಟಿಯಾದಾಗ ಸಾಧನೆಯನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಒಬ್ಬರಿಗೊಬ್ಬರು ಸಹಾಯ ಮಾಡಿದರು. ಶ್ರೀ ಅರವಿಂದರ ಯೋಗವೆನ್ನುವುದು ಶ್ರೀ ಅರವಿಂದರ ಹಾಗೂ ಶ್ರೀಮಾತೆಯುವರ ಜಂಟಿ ರಚನೆಯಾಗಿದೆ; ಈಗ ಅದನ್ನು ಪೂರ್ಣವಾಗಿ ಗುರುತಿಸಲಾಗಿದೆ – ಆಶ್ರಮದಲ್ಲಿಯ ಸಾಧನೆ ಮತ್ತು ಎಲ್ಲ ವ್ಯವಸ್ಥೆ ನೇರವಾಗಿ ಶ್ರೀಮಾತೆಯವರಿಂದ ಮಾಡಲ್ಪಡುತ್ತದೆ, ಅವರಿಗೆ ಶ್ರೀ ಅರವಿಂದರ ಬೆಂಬಲವಿದೆ. ಯೋಗ ಸಾಧನೆಯನ್ನು ಮಾಡಲು ಇಲ್ಲಿಗೆ ಬರುವವರೆಲ್ಲರೂ ತಮ್ಮನ್ನು ತಾವು ಶ್ರೀಮಾತೆಯವರಿಗೆ ಅರ್ಪಿಸಿಕೊಳ್ಳಬೇಕು, ಆಗ ಶ್ರೀಮಾತೆಯವರು ಅವರ ಆಧ್ಯಾತ್ಮಿಕ ಜೀವನವನ್ನು ಕಟ್ಟಿಕೊಳ್ಳಲು ಯಾವಾಗಲೂ ಸಹಾಯ ಮಾಡುತ್ತಾರೆ.

## ಕಡಿಮೆಯಲ್ಲ ಅಥವಾ ಶ್ರೇಷ್ಠರಲ್ಲ

*"ದೈವತ್ವ"ವನ್ನು ಎಲ್ಲೆಡೆಯೂ ಇರುವ, ಅವನೆಡೆಗೆ ನನ್ನನ್ನು ಸೆಳೆಯುವ ಆತ್ಮವೆಂದು ನಾನು ಅಂದುಕೊಳ್ಳುತ್ತೇನೆ. ಅವನು ಎಲ್ಲದರ ಆತ್ಮ ಮತ್ತು ಎಲ್ಲದರ ಯಜಮಾನ. ಅವನು ಶ್ರೀಮಾತೆಯವರಿಗಿಂತ ಶ್ರೇಷ್ಠನೆಂದು ನನ್ನ ಅನಿಸಿಕೆ. ಅವನು ನನ್ನ ತಂದೆಯಾದ ಶ್ರೀ ಅರವಿಂದರಲ್ಲಿ ಮೂರ್ತಿವೆತ್ತಿದ್ದಾನೆಂದು ನನ್ನ ಭಾವನೆ.*

ಅದು ದೈವಿಕದ ಒಂದು ಅಂಶ – ಆದರೆ ದೈವಿಕವು ಆತ್ಮವಾಗಿ ಅಥವಾ ಪ್ರಭುವಾಗಿ ಮತ್ತು ದೈವಿಕವು ಶ್ರೀಮಾತೆಯಾಗಿ ಇರುವ ಅಂಶವು ಒಂದೇಯಾಗಿವೆ – ಅಲ್ಲಿ ಕಡಿಮೆ ಅಥವಾ ಹೆಚ್ಚು ಎಂಬುದಿಲ್ಲ.

*

*ಇಲ್ಲಿಯ ಕೆಲ ಜನರು ನಿಮ್ಮನ್ನು ಶ್ರೀಮಾತೆಯವರಿಗಿಂತ ಶ್ರೇಷ್ಠವೆಂದು ಏಕೆ ಪರಿಗಣಿಸುತ್ತಾರೆ? ನೀವೀರ್ವರೂ ಒಂದೇ ಸ್ಥರದಿಂದ ಬಂದವರಲ್ಲವೇ? ಈ ರೀತಿಯ ಭಿನ್ನತೆಯನ್ನು ಮಾಡುವುದು ಮಾನವ ದೃಷ್ಟಿಯ ಮೇಲೆ ಒಂದು ತೆರೆ ಇದ್ದಂತಲ್ಲವೆ?*

ಬರೀ ಮೇಮೆಲ್ಮೈ ವಿಷಯಗಳನ್ನು ನೋಡುವ ಮನಸ್ಸು ಮಾತ್ರ ಅದು ಅವುಗಳ ಹಿಂದೆ ಏನಿದೆ ಎನ್ನುವುದನ್ನು ನೋಡಲಾರರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/79–82**

## ಎರಡು ದೇಹಗಳಲ್ಲಿ – ಒಂದು

ಶ್ರೀಮಾತೆಯವರು ಮತ್ತು ನಾನು **"ಒಂದೇ"** ಆಗಿದ್ದೇವೆ. ಆದರೆ ಎರಡು ದೇಹಗಳಲ್ಲಿ; ಎರಡೂ ದೇಹಗಳಿಗೆ ಯಾವಾಗಲೂ ಒಂದೇ ವಿಷಯವನ್ನು ಮಾಡುವ ಅವಶ್ಯಕತೆ ಇಲ್ಲ. ಪ್ರತಿಯಾಗಿ ನಾವು ಒಂದೇ ಆಗಿರುವುದರಿಂದ ನಾವು ಯಾರಾದರೂ ರುಜು ಮಾಡುವುದು ಸಾಕಾಗುತ್ತದೆ, ಯಾರಿಗಾದರು ಕೆಳಗೆ ಹೋಗಿ ಪ್ರಣಾಮ ಸ್ವೀಕರಿಸಲು ಅಥವಾ ಧ್ಯಾನವನ್ನು ಕೊಡಲು ಸಾಕಾಗುವಂತೆ.

*

ಶ್ರೀಮಾತೆಯವರು ಮತ್ತು ನಾನು ಒಂದೇ ಆಗಿದ್ದೇವೆ ಮತ್ತು ಸಮವಾಗಿದ್ದೇವೆ. ಇಲ್ಲಿ ಅವರು ಪರಮ ಪ್ರಧಾನವಾಗಿದ್ದಾರೆ ಮತ್ತು ಅವರು ಕಾರ್ಯಕ್ಕಾಗಿ ಉತ್ತಮವಾಗಿ ಯೋಚಿಸುವುದರಿಂದ ಕೆಲಸವನ್ನು ಕ್ರಮಗೊಳಿಸಲು ಸಹ ಅವರಿಗೆ ಅಧಿಕಾರವಿದೆ, ಒಬ್ಬರಿಗೆ ಕೊಡಬಹುದಾದ ಕೆಲಸದ ಮೇಲೆ ಯಾರಿಗೂ ಹಕ್ಕಿಲ್ಲ ಅಥವಾ ಅಧಿಕಾರವಿಲ್ಲ ಅಥವಾ ಸ್ವಾಮಿತ್ವವಿಲ್ಲ. ಆಶ್ರಮವು ಶ್ರೀಮಾತೆಯವರ ಸೃಷ್ಟಿಯಾಗಿದೆ ಮತ್ತು ಅವರ ರಚನೆಯಾಗಿದೆ, ಅದನ್ನು ಅವರಿಗೆ ಯಾರೂ ಕೊಟ್ಟಿಲ್ಲ ಮತ್ತು ಅದನ್ನು ಅವರಿಂದ ಯಾರೂ ತೆಗೆದುಕೊಳ್ಳಲಾಗದು. ಶ್ರೀಮಾತೆಯವರೆಡೆಗೆ ಯಾವುದೇ ಒಳ್ಳೆಯ ಸಂಬಂಧವನ್ನು ಅಥವಾ ನಿಲುವನ್ನು ನೀವು ಹೊಂದಲು ಈ ಮೂಲ ರೂಪದ ಸತ್ಯವನ್ನು ಅರಿಯಲು ಪ್ರಯತ್ನಿಸಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/82–83**

**ಶ್ರೀ ಅರಬಿಂದೋ ಆಶ್ರಮದ ಆರಂಭ**

ಮೊದಲಿಗೆ ಆಶ್ರಮವೆನ್ನುವುದು ಇರಲಿಲ್ಲ, ಕೆಲವೇ ಜನರು ಮಾತ್ರ ಶ್ರೀ ಅರವಿಂದರ ಜೊತೆ ಇದ್ದು ಯೋಗಾಭ್ಯಾಸ ಮಾಡಲು ಬಂದರು. ಜಪಾನಿನಿಂದ ಶ್ರೀಮಾತೆಯವರು ಬಂದ ಕೆಲ ಸಮಯದ ನಂತರವಷ್ಟೇ ಅದು (ಶ್ರೀ ಅರವಿಂದರು ಇದ್ದ ಸ್ಥಳ) ಆಶ್ರಮದ ರೂಪ ತಾಳಿತು. ಆಶ್ರಮವು ಆರಂಭವಾಗಲು ಶ್ರೀಮಾತೆಯವರ ಅಥವಾ ಶ್ರೀ ಅರವಿಂದರ ಯಾವುದೇ ಆಶಯಗಿಂತ ಅಥವಾ ಯೋಜನೆಗಿಂತ ಹೆಚ್ಚು ಸಂಪೂರ್ಣ ಆಂತರಿಕ ಹಾಗೂ ಬಾಹ್ಯ ಜೀವನವನ್ನು ಶ್ರೀಮಾತೆಯವರಿಗೆ ಒಪ್ಪಿಸಲು ಇಚ್ಛೆಯುಳ್ಳ ಸಾಧಕರ ಆಶಯದಿಂದ ಆಶ್ರಮವು ರೂಪ ತಾಳಿತು...

ಈ ಮಧ್ಯೆ, ಫ್ರಾನ್ಸ ಮತ್ತು ಜಪಾನಿನಲ್ಲಿ ದೀರ್ಘಕಾಲದ ಇರುವಿಕೆಯ ನಂತರ, 24 ನೇ ಏಪ್ರಿಲ್ 1920 ರಂದು ಶ್ರೀಮಾತೆಯವರು ಪಾಂಡಿಚೇರಿಗೆ ತಿರುಗಿ ಬಂದರು. ಆಗ ಒಲವು ತೋರಿದ ಸಾಧಕರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಯಿತು. ಆಶ್ರಮವು ಬೆಳೆಯಲು ಆರಂಭಿಸಿದಾಗ, ಅದನ್ನು ವ್ಯವಸ್ಥಿತಗೊಳಿಸುವ ಭಾರ ಶ್ರೀಮಾತೆಯವರ ಮೇಲೆ ಬಿದ್ದಿತು; ಶ್ರೀ ಅರವಿಂದರು ಒಡನೆಯೇ ಏಕಾಂತಕ್ಕೆ ಜಾರಿದರು. ಆಗ ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ಜವಾಬ್ದಾರಿಯು ಶ್ರೀಮಾತೆಯವರ ಮೇಲೆ ಪೂರ್ಣವಾಗಿ ಬಂತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/102–03 – ಶ್ರೀ ಅರವಿಂದರು**

# ಶ್ರೀ ಅರವಿಂದರ ತತ್ತ್ವಬೋಧನೆ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸೃಷ್ಟಿಯ ಪ್ರಕಾಶನದ ಹಿಂದೆ ಒಬ್ಬ ಪುರುಷನ ಮತ್ತು ಪ್ರಜ್ಞೆಯ ಎಲ್ಲ ವಸ್ತುಗಳ ಆತ್ಮ, ಏಕ ಮತ್ತು ಅನಂತವಾದ ಋತ ಇದೆ ಎಂಬ ಭಾರತದ ಪ್ರಾಚೀನ ಋಷಿಗಳ ಜ್ಞಾನದಿಂದ ಶ್ರೀ ಅರವಿಂದರ ತತ್ತ್ವಬೋಧನೆ ಆರಂಭವಾಗುತ್ತದೆ. ಆ ಏಕಾತ್ಮನಲ್ಲಿ ಹಾಗೂ ಚೇತನದಲ್ಲಿ ಎಲ್ಲ ಜೀವಿಗಳು ಒಗ್ಗಟ್ಟಾಗಿವೆ, ಆದರೆ ಪ್ರಜ್ಞೆಯ ಪ್ರತ್ಯೇಕತೆಯಿಂದ, ತಮ್ಮ ಮನಸ್ಸಿನಲ್ಲಿನ, ಜೀವನದಲ್ಲಿನ ಹಾಗೂ ದೇಹದಲ್ಲಿನ ತಮ್ಮ ನಿಜ ವ್ಯಕ್ತಿತ್ವದ ಹಾಗೂ ಸತ್ಯತೆಯ ಅಜ್ಞಾನದಿಂದ ಭಿನ್ನವಾಗಿವೆ. ಒಂದು ನಿರ್ದಿಷ್ಟ ಮಾನಸಿಕ ಶಿಸ್ತಿನಿಂದ ಈ ಪ್ರತ್ಯೇಕತೆಯ ಪ್ರಜ್ಞೆಯ ಪರದೆಯನ್ನು ತೆಗೆಯಲು ಮತ್ತು ಆತ್ಮನ, ನಮ್ಮೆಲ್ಲರಲ್ಲಿರುವ ದೈವೀಕತೆಯನ್ನು ಅರಿವಾಗಲು ಸಾಧ್ಯವಿದೆ.

ಈ ಏಕ ಪುರುಷ ಮತ್ತು ಪ್ರಜ್ಞೆಯು, ಇಲ್ಲಿ ಭೌತ ವಸ್ತುವಿನಲ್ಲಿ ಅಡಕವಾಗಿದೆ ಎಂದು ಶ್ರೀ ಅರವಿಂದರ ಬೋಧನೆ ಹೇಳುತ್ತದೆ. ತನ್ನನ್ನು ತಾನು ಮುಕ್ತಗೊಳಿಸುವ ವಿಧಾನವೆ ವಿಕಸನವಾಗಿದೆ; ಅವಚೇತನವೆಂದು ತೋರುವುದರಲ್ಲಿ ಪ್ರಜ್ಞೆಯು ಪ್ರಕಟವಾಗುತ್ತದೆ, ಅದು ಒಂದೊಮ್ಮೆ ಪ್ರಕಟವಾದ ಮೇಲೆ ಮೇಲೆ–ಮೇಲೆ ಬೆಳೆಯಲು, ಮತ್ತು ಅದೇ ಸಮಯಕ್ಕೆ ಶ್ರೇಷ್ಠತಮ ಪರಿಪೂರ್ಣತೆಯ ಕಡೆಗೆ ವರ್ಧಿಸಲು ಹಾಗೂ ವಿಕಸಿಸಲು ಸ್ವಯಂ ಆಗಿ ಹುರಿದುಂಬಿಸಲ್ಪಡುತ್ತದೆ. ಈ ಪ್ರಜ್ಞೆಯ ಬಿಡುಗಡೆಯಲ್ಲಿ ಜೀವನವು ಮೊದಲನೆಯ ಹೆಜ್ಜೆಯಾಗಿದೆ, ಮನಸ್ಸು ಎರಡನೆಯದು; ಆದರೆ ವಿಕಸನವು ಮನಸ್ಸಿನಿಂದ ಕೊನೆಗೊಳ್ಳುವುದಿಲ್ಲ, ಅದು ಇನ್ನೂ ಶ್ರೇಷ್ಠವಾದ ಆಧ್ಯಾತ್ಮಿಕ ಹಾಗೂ ಉನ್ನತ ಮಾನಸದ ಪ್ರಜ್ಞೆಯ ಬಿಡುಗಡೆಗಾಗಿ ವಿಕಸನದ ಮುಂದಿನ ಹೆಜ್ಜೆಯು ಜಾಗೃತ ಪುರುಷನಲ್ಲಿ ಅತಿಮಾನಸ ಮತ್ತು ಆತ್ಮನ ಒಂದು ಪ್ರಬಲ ಶಕ್ತಿಯಾಗಿ ಅಭಿವೃದ್ಧಿಯಾಗುವ ಕಡೆಗೆ ಇರಲೇಬೇಕು. ಆಗ ಮಾತ್ರ ವಸ್ತುಗಳಲ್ಲಿ ಅಡಕವಾದ ದೈವಿಕವು ತನ್ನನ್ನು ತಾನು ಸಂಪೂರ್ಣವಾಗಿ ಬಿಡುಗಡೆಗೊಳಿಸಿಕೊಳ್ಳುವುದು ಮತ್ತು ಜೀವನವು ಪರಿಪೂರ್ಣತೆಯನ್ನು ಪ್ರಕಟಗೊಳಿಸಲು ಸಾಧ್ಯವಾಗುವುದು.

ಸಸ್ಯಗಳ ಹಾಗೂ ಪ್ರಾಣಿಗಳ ಜೀವನದಲ್ಲಿ ಪ್ರಕೃತಿಯಿಂದ ಜಾಗೃತ ಸಂಕಲ್ಪವಿಲ್ಲದೆ, ವಿಕಸನದಲ್ಲಿ ಮೊದಲ ಹೆಜ್ಜೆಗಳನ್ನು ತೆಗೆದುಕೊಂಡ ಸಮಯದಲ್ಲಿ, ಮನುಷ್ಯನಲ್ಲಿ ಈ ಪ್ರಕೃತಿಯು ಸಾಧನದಲ್ಲಿ ಒಂದು ಜಾಗೃತ ಸಂಕಲ್ಪದಿಂದ ವಿಕಸಿಸಲು ಸಾಧ್ಯವಾಯಿತು. ಆದರೂ ಮನುಷ್ಯನಲ್ಲಿನ ಮಾನಸಿಕ ಸಂಕಲ್ಪದಿಂದ ಇದನ್ನು

ಪೂರ್ಣವಾಗಿ ಮಾಡಲಾಗದು. ಏಕೆಂದರೆ, ಮನಸ್ಸು ಒಂದು ಸೀಮಿತ ಘಟ್ಟದವರೆಗೆ ಮಾತ್ರ ಹೋಗಬಹುದು, ಆಮೇಲೆ ಸದಾ ವೃತ್ತದಲ್ಲಿ ಮಾತ್ರ ಸಂಚರಿಸುತ್ತದೆ. ಪ್ರಜ್ಞೆಯ ತಿರುವಿನಿಂದ ಮನಸ್ಸನ್ನು ಉನ್ನತ ತತ್ವದಲ್ಲಿ ಬದಲಾಯಿಸಲು ಒಂದು ಬದಲಾವಣೆಯನ್ನು ಮಾಡಬೇಕಾಗಿದೆ. ಈ ವಿಧಾನವನ್ನು ಪ್ರಾಚೀನ ಮನೋವಿಜ್ಞಾನದ ಅಧ್ಯಯನದ ಹಾಗೂ ಯೋಗ ಸಾಧನೆಯ ಮುಖಾಂತರ ಕಂಡುಕೊಳ್ಳಬೇಕಾಗಿದೆ. ಹಿಂದೆ, ಪ್ರಪಂಚದ ಸೆಳೆತದಿಂದ ಹಿಂದೆ ಸರಿಯುದರಿಂದ ಮತ್ತು ಆತ್ಮನ ಔನ್ನತ್ಯದಲ್ಲಿ ಅದೃಶ್ಯವಾಗುವುದರಿಂದ ಪ್ರಯತ್ನಿಸಲಾಗಿತ್ತು.

ಪ್ರಪಂಚದಿಂದ ಆತ್ಮನನ್ನು ಬಿಡುಗಡೆಗೊಳಿಸುವುದು ಮಾತ್ರವಲ್ಲದೆ ಅದನ್ನು ಪ್ರಪಂಚದಲ್ಲಿ ಮುಕ್ತಗೊಳಿಸಲು, ಅಂತರಾತ್ಮನ ಯೋಗ್ಯ ಸಾಧನವಾಗಲು ಮತ್ತು ಮನುಷ್ಯ ಜೀವಿಗೆ ತನ್ನನ್ನು ತಾನು ಕ್ರಿಯಾಶೀಲನಾಗಿ ಹಾಗೂ ಆಂತರಿಕವಾಗಿ ಕಂಡುಕೊಳ್ಳಲು ಮತ್ತು ತನ್ನ ಸ್ಥಿರವಾದ ಮೃಗೀಯ ಮನುಷ್ಯತ್ವದ ಆಚೆ, ಒಂದು ದೈವೀ ಕುಲದಲ್ಲಿ ಬೆಳೆಯಲು ಸಾಧ್ಯವಾಗಿಸಲು, ಮನಸ್ಸಿನ ಅಜ್ಞಾನವನ್ನು ಅತಿಮಾನಸ ಸತ್ಯ ಪ್ರಜ್ಞೆಯಿಂದ ಬದಲಾಯಿಸಲು, ಉನ್ನತ ತತ್ವದ ಅವರೋಹಣವು ಸಾಧ್ಯ ಎಂದು ಶ್ರೀ ಅರವಿಂದರು ಬೋಧಿಸುತ್ತಾರೆ. ಆದುದರಿಂದ ಯೋಗದ ಮನೋವೈಜ್ಞಾನಿಕ ಶಿಕ್ಷಣವನ್ನು ಇನ್ನೂ ನಿಗೂಢವಿರುವ ಉನ್ನತ ಅತಿಮಾನಸ ತತ್ವದ ಅವರೋಹಣದ ಕಾರ್ಯದ ಮುಖಾಂತರ ಜೀವಿಯ ಎಲ್ಲ ಭಾಗಗಳ ತೆರೆದುಕೊಳ್ಳುವಿಕೆಯಿಂದ ಪರಿವರ್ತನೆಗೆ ಅಥವಾ ರೂಪಾಂತರಕ್ಕೆ ಉಪಯೋಗಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/547–48 – ಶ್ರೀ ಅರವಿಂದರು**

ಶಿಲೆಯಿಂದ ಸಸ್ಯಕ್ಕೆ, ಸಸ್ಯದಿಂದ ಪ್ರಾಣಿಗೆ, ಪ್ರಾಣಿಯಿಂದ ಮನುಷ್ಯನಿಗೆ ಹೋಗುವ ಒಂದು ಆರೋಹಣ ವಿಕಸನವು ನಿಸರ್ಗದಲ್ಲಿದೆ. ಯಾಕೆಂದರೆ, ಸದ್ಯಕ್ಕೆ ಮನುಷ್ಯನು ಆರೋಹಣ ವಿಕಸನದ ಶೃಂಗದಲ್ಲಿ ಕೊನೆಯ ಮೆಟ್ಟಿಲಾಗಿದ್ದಾನೆ. ಈ ಆರೋಹಣದಲ್ಲಿ ತನ್ನನ್ನು ತಾನು ಕೊನೆಯ ಹಂತವೆಂದು ಪರಿಗಣಿಸಿದ್ದಾನೆ ಮತ್ತು ಈ ಭೂಮಿಯ ಮೇಲೆ ತನಗಿಂತ ಅತ್ಯುತ್ತಮವಾದ ಏನೂ ಇಲ್ಲವೆಂದು ನಂಬಿದ್ದಾನೆ. ಈ ನಂಬಿಕೆಯಿಂದ ಅವನು ಪ್ರಮಾದವೆಸಗಿದ್ದಾನೆ. ತನ್ನ ಭೌತಿಕ ಸ್ವಭಾವದಲ್ಲಿ ಅವನು ಪೂರ್ಣವಾಗಿ ಇನ್ನೂ ಪ್ರಾಣಿಯಾಗಿದ್ದಾನೆ, ಯೋಚಿಸುವ ಮತ್ತು ಮಾತನಾಡುವ ಪ್ರಾಣಿ. ಅವನು ತನ್ನ ಪ್ರಾಪಂಚಿಕ ರೂಢಿಗಳಲ್ಲಿ ಮತ್ತು ಪವೃತ್ತಿಗಳಲ್ಲಿ ಇನ್ನೂ ಪ್ರಾಣಿಯಾಗಿಯೇ ಇದ್ದಾನೆ. ನಿಸ್ಸಂಶಯವಾಗಿಯೂ

ಪ್ರಕೃತಿಯನ್ನು ಇಂತಹ ಅಪೂರ್ಣ ಫಲಿತಾಂಶದಿಂದ ತೃಪ್ತಿಪಡಿಸಲು ಆಗುವುದಿಲ್ಲ; ಪ್ರಕೃತಿ ಮಾತೆಯು ಮನುಷ್ಯ ಪ್ರಾಣಿಗೆ ಏನಾಗಿದ್ದಾನೊ ಅಂತಹ ಒಬ್ಬ ಪುರುಷನನ್ನು ತನ್ನ ಬಾಹ್ಯ ರೂಪದಲ್ಲಿ ಒಬ್ಬ ಮನುಷ್ಯನಾಗಿ ಉಳಿಯುವ ಪುರುಷನನ್ನು, ಆದರೂ ಅವನ ಪ್ರಜ್ಞೆಯು ಮಾನಸಿಕದ ಮತ್ತು ಅಜ್ಞಾನದ ಅದರ ದಾಸ್ಯದ ಎತ್ತರಕ್ಕೆ ಏರುವ ಒಬ್ಬ ಪುರುಷನನ್ನು ಹೊರತರುವಲ್ಲಿ ಪ್ರಯತ್ನಿಸುತ್ತಾಳೆ.

ಮಾನವ ಕುಲಕ್ಕೆ ಈ ಸತ್ಯವನ್ನು ಬೋಧಿಸಲು ಶ್ರೀ ಅರವಿಂದರು ಭೂಮಿಯ ಮೇಲೆ ಅವತರಿಸಿದರು. ಮನುಷ್ಯನು ಮಾತ್ರ ಮಾನಸ ಪ್ರಜ್ಞೆಯಲ್ಲಿ ಇರುವ ಪರಿವರ್ತನಾ ಪುರುಷ (ಪರಿವರ್ತನೆಯಾಗುವಂಥ ಪುರುಷ) ಎಂದು ಶ್ರೀ ಅರವಿಂದರು ಹೇಳಿದ್ದಾರೆ. ಮನುಷ್ಯನು ಒಂದು ಹೊಸ ಪ್ರಜ್ಞೆಯನ್ನು, ಸತ್ಯ–ಪ್ರಜ್ಞೆಯನ್ನು ಪಡೆಯುವ ಸಾಧ್ಯತೆಯನ್ನು ಹೊಂದಿದ್ದಾನೆ. ಅವನು ಪರಿಪೂರ್ಣ ಸಾಮರಸ್ಯದ ಉತ್ತಮ ಹಾಗೂ ಸುಂದರವಾದ, ಆನಂದದ ಹಾಗೂ ಪೂರ್ಣಪ್ರಜ್ಞೆಯ ಜೀವನವನ್ನು ಜೀವಿಸುವ ಸಾಮರ್ಥ್ಯ ಹೊಂದಿದ್ದಾನೆ. ಶ್ರೀ ಅರವಿಂದರು ಭೂಮಿಯ ಮೇಲಿನ ತಮ್ಮ ಜೀವಿತಾವಧಿಯಲ್ಲಿ ಅತಿಮಾನಸ ಎಂದು ಅವರು ಕರೆದಿರುವ ಈ ಪ್ರಜ್ಞೆಯನ್ನು ಸ್ಥಾಪಿಸಲು ಮತ್ತು ಅದನ್ನು ಬಿಡುಗಡೆ ಮಾಡಲು ತಮ್ಮ ಜೊತೆ ಇದ್ದವರಿಗೆ ಸಹಾಯ ಮಾಡಲು ತಮ್ಮ ಎಲ್ಲ ಸಮಯವನ್ನು ಮೀಸಲಿರಿಸಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/116**

**ಅಪೂರ್ವವಾದ ಭೂ–ರೂಪಾಂತರಣ**

ಶ್ರೀ ಅರವಿಂದರ ಭೂ–ರೂಪಾಂತರಣದ ಕಾರ್ಯ ಅದ್ವಿತೀಯವಾಗಿದೆ.

ಮನಸ್ಸಿನ ಮೇಲೆ ಜಾಗೃತ ಪುರುಷನ ಬಹು ಸ್ತರಗಳಿವೆ. ಅವುಗಳಲ್ಲಿ ಶ್ರೀ ಅರವಿಂದರು ಅತಿಮಾನಸ, ಋತದ ಲೋಕ ಎಂದು ಕರೆದಿರುವ ನೈಜ ದೈವಿಕ ಜಗತ್ತು ಒಂದಾಗಿವೆ. ಆದರೆ ಈ ಮಧ್ಯೆ ಅವರು ಗುರುತಿಸಿದ್ದು ಅಧಿಮಾನಸವೆಂದು ಕರೆಯುವ ಬ್ರಹ್ಮಾಂಡದ ದೇವರುಗಳ ಪ್ರಪಂಚ. ಈ ಅಧಿಮಾನಸವು ಇಲ್ಲಿಯವರೆಗೆ ನಮ್ಮ ಜಗತ್ತನ್ನು ಆಳಿದೆ: ಅದು ಮನುಷ್ಯನು ಬೆಳಗುವ ಪ್ರಜ್ಞೆಯಲ್ಲಿ ತಲುಪಲು ಸಾಧ್ಯವಾದ ಉನ್ನತ ಸ್ಥರವಾಗಿದೆ. ಅದನ್ನು ಶ್ರೇಷ್ಠ ದೈವಿಕಗಾಗಿ ತೆಗೆದುಕೊಳ್ಳಲ್ಪಟ್ಟಿದೆ ಮತ್ತು ಅದನ್ನು ತಲುಪಿದವರೆಲ್ಲರೂ ಒಂದು ಕ್ಷಣ ಮಾತ್ರಕ್ಕೂ ತಾವು ಸತ್ಯಾತ್ಮವನ್ನು ಸ್ಪರ್ಶಿಸಿದ್ದೇವೆ ಎಂದು ಸಂಶಯಿಸಿಲ್ಲ. ಅದರ ಭವ್ಯತೆಯು ಸಾಮಾನ್ಯ ಮಾನವ ಪ್ರಜ್ಞೆಗೆ ಎಷ್ಟು

ಶ್ರೇಷ್ಠವಾದುದೆಂದರೆ, ಅತ್ಯುನ್ನತ ಸತ್ಯವು ಇಲ್ಲಿದೆ ಎಂದು ನಂಬುವಲ್ಲಿ ಅದು ಸಂಪೂರ್ಣವಾಗಿ ದಿಗ್ಭ್ರಮೆಗೊಂಡಿತು. ವಾಸ್ತವಾಂಶ ಏನೆಂದರೆ, ಅಧಿಮಾನಸವು ನಿಜವಾದ ದೈವಿಕದ ಬಹಳ ಕೆಳಗಡೆ ಇದೆ. ಅದು ನಿಜವಾದ ದೈವಿಕದ ಅಧಿಕೃತ ನೆಲೆಯಲ್ಲ. ಆದು, ಆ ಇತಿಹಾಸದ ಪ್ರಾರಂಭದಿಂದ ಕ್ರಿಯಾತ್ಮಕ ಸಾಮರ್ಥ್ಯಗಳಿಗೆ ಮತ್ತು ದೇವತೆಗಳಿಗೆ ಎಲ್ಲ ತರಬೇತುದಾರರ ಕ್ಷೇತ್ರಮಾತ್ರವಾಗಿದೆ. ನೈಜ ದೈವಿಕವು ಪ್ರಕಟವಾಗದಿರುವುದಕ್ಕೆ ಮತ್ತು ಭೂ–ಪ್ರಕೃತಿಯನ್ನು ಬದಲಾಯಿಸಲಾರದ್ದಕ್ಕೆ ಇರುವ ಕಾರಣ ಅಧಿಮಾನಸವನ್ನು ಅತಿಮಾನಸವೆಂದು ತಪ್ಪಾಗಿ ಅರ್ಥೈಸಿಕೊಂಡಿದ್ದು. ಬ್ರಹ್ಮಾಂಡದ ದೇವತೆಗಳು ನೈಜ ಪ್ರಜ್ಞೆಯಲ್ಲಿ ಪೂರ್ಣವಾಗಿ ಇರುವುದಿಲ್ಲ: ಅವರು ಅದರ ಸ್ಪರ್ಶದಲ್ಲಿ ಮಾತ್ರ ಇರುತ್ತಾರೆ ಮತ್ತು ಅವರಲ್ಲಿ ಪ್ರತಿಯೊಬ್ಬರೂ ಅದರ ಭವ್ಯತೆಯ ಅಂಶವಾಗಿ ಅದನ್ನು ಪ್ರತಿನಿಧಿಸುತ್ತಾರೆ.

ಅತಿಮಾನಸವೂ ಸಹ ಜಗತ್ತಿನ ಇತಿಹಾಸದಲ್ಲಿ ಕಾರ್ಯಮಾಡಿದೆ ಆದರೆ ಉನ್ನತ ಮಾನಸದ ಮುಖಾಂತರ. ಅದು ಸುಪ್ರಮಾನಸ ಪ್ರಜ್ಞೆಯ ಮತ್ತು ಆತ್ಮನ ನಿಬಂಧನೆಗಳಲ್ಲಿ ಜೀವನವನ್ನು ಸಂಪೂರ್ಣ ಮರು ಸೃಷ್ಟಿ ಮಾಡುವಂಥ ಏಕಮಾತ್ರ ಪ್ರಭಾವದ ನೇರ ಅವರೋಹಣವಾಗಿದೆ. ಮನಸ್ಸಿನ, ಜೀವನದ ಮತ್ತು ಭೌತವಸ್ತುವಿನ ಕೆಳ ತ್ರಿವಳಿ ಜಗತ್ತಿನಲ್ಲಿ ಇರುವ ನಮ್ಮ ಅಸ್ತಿತ್ವದ ಆರಂಭವನ್ನು ಗುರುತಿಸುವ ಉನ್ನತ ಮಾನಸದ ಸಾಧ್ಯತೆಗಳ ಲೀಲೆಯು ಆಗಲೆ ಅಲ್ಲಿದೆ. ಯಾವಾಗ ಈ ಲೀಲೆ ಇದೆಯೊ ಮತ್ತು ಸ್ವಾಭಾವಿಕವಾದ ಹಾಗೂ ದೋಷಾತೀತ ಆತ್ಮನ ಸತ್ಯದ ಆಂತರಿಕ ಕಾರ್ಯ ಇಲ್ಲವೊ, ಅಲ್ಲಿ ವಿರೂಪದ ಮತ್ತು ಅಜ್ಞಾನದ ಬೀಜವಿದೆ. ಉನ್ನತ ಮಾನಸವು ಅಜ್ಞಾನದ ಕ್ಷೇತ್ರ ಎಂಬ ವಿಷಯವಲ್ಲ; ಆದರೆ ಉನ್ನತ ಮತ್ತು ನಿಮ್ನ ಮಾನಸಗಳ ನಡುವಿನ ಸೀಮಾರೇಖೆಯಾಗಿದೆ, ಸಾಧ್ಯತೆಗಳ ಲೀಲೆ, ಬೇರೆಯಾದ ಇನ್ನೂ ಭಿನ್ನವಾಗಿಸದ ಆಯ್ಕೆ, ವಸ್ತುಗಳ ಸತ್ಯತೆಯಿಂದ ವಿಪಥಗೊಳಿಸುವ ಸಂಭವವಿದೆ.

ಆದುದರಿಂದ ಉನ್ನತ ಮಾನಸವು ಮಾನವ ಕುಲವನ್ನು ದೈವೀ ಸ್ವರೂಪದಲ್ಲಿ ಪರಿವರ್ತಿಸುವುದಿಲ್ಲ ಮತ್ತು ಪರಿವರ್ತಿಸುವ ಪ್ರಭಾವ ಹೊಂದುವುದಿಲ್ಲ. ಅದಕ್ಕಾಗಿ, ಅತಿಮಾನಸವು ಏಕೈಕ ಪರಿಣಾಮಕಾರಿ ಪ್ರತಿನಿಧಿಯಾಗಿದೆ. ಭೂತದಲ್ಲಿ ಜೀವನವನ್ನು ಆಧ್ಯಾತ್ಮಗೊಳಿಸುವ ಪ್ರಯತ್ನಗಳಿಂದ ನಮ್ಮ ಯೋಗವು ನಿಖರವಾಗಿ ಏನನ್ನು ಬೇರ್ಪಡಿಸುತ್ತದೆ ಎಂದರೆ, ಅಧಿಮಾನಸದ ಪ್ರಭೆಯು ಉನ್ನತ ಸತ್ಯವಲ್ಲ ಮತ್ತು ಅದೊಂದು ಮನಸ್ಸಿನ ಹಾಗೂ ನಿಜ ದೈವಿಕದ ನಡುವಿನ ಒಂದು ಮಧ್ಯಂತರ ಹೆಜ್ಜೆಯಾಗಿದೆ ಎಂದು ನಮಗೆ ಗೊತ್ತಿರುವ ಸಂಗತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/173–74**

## ಬುವಿಯ ಮೇಲೊಂದು ನವೀನ ರಚನೆ

ಪ್ರಜ್ಞೆಯು ಒಂದು ಏಣಿ ಇದ್ದಂತೆ: ಪ್ರತಿ ಶ್ರೇಷ್ಠ ವಿಕಸನದ ಅವಧಿಯಲ್ಲಿ ಈ ಏಣಿಗೆ ಇನ್ನೊಂದು ಹಂತವನ್ನು ಸೇರಿಸುವ ಮತ್ತು ಸಾಮಾನ್ಯ ಪ್ರಜ್ಞೆಯು ಎಂದಿಗೂ ಹೋಗದ ಸ್ಥಾನಕ್ಕೆ ತಲುಪಲು ಸಾಮರ್ಥ್ಯ ಹೊಂದಿದ ಒಬ್ಬ ಶ್ರೇಷ್ಠ ಪುರುಷನಿದ್ದಲ್ಲಿ, ಪ್ರಾಪಂಚಿಕ ಪ್ರಜ್ಞೆಯಿಂದ ಪೂರ್ಣವಾಗಿ ಹೊರಬಂದು ಉನ್ನತ ಸ್ತರವನ್ನು ತಲುಪಲು ಸಾಧ್ಯವಿದೆ; ಆದರೆ ನಾವು ಆ ಏಣಿಯನ್ನು ಉಳಿಸಿಕೊಳ್ಳುವುದಿಲ್ಲ. ವಿಶ್ವದ ಶ್ರೇಷ್ಠ ಕಾಲಮಾನದ ಸಾಧನೆ ಏನೆಂದರೆ, ಪ್ರಪಂಚದ ಸಂಬಂಧವನ್ನು ಕಳೆದುಕೊಳ್ಳದೆ ಏಣಿಗೆ ಮತ್ತೊಂದು ಸ್ತರವನ್ನು(ಹೆಜ್ಜೆಯನ್ನು) ಸೇರಿಸುವುದಾಗಿದೆ ಮತ್ತು ಅತಿ ಉನ್ನತವನ್ನು ತಲುಪುವ ಸಾಮರ್ಥ್ಯ ಹೊಂದುವುದಾಗಿದೆ ಹಾಗೂ ಅದೇ ಸಮಯದಲ್ಲಿ ವಿಭಿನ್ನ ಸ್ತರಗಳ ನಡುವಿನ ಎಲ್ಲ ಸಂಬಂಧವನ್ನೂ ಒಂದು ಶೂನ್ಯತೆಯು ಕಡಿದುಕೊಳ್ಳಲು ಬಿಡದೆ, ಆ ಉನ್ನತವನ್ನು ಈ ತಳದ ಜೊತೆಗೆ ಜೋಡಿಸುವುದಾಗಿದೆ. ಮೇಲೆ ಹಾಗೂ ಕೆಳಗೆ ಹೋಗುವುದು ಮತ್ತು ಮೇಲನ್ನು ಕೆಳಗಿನ ಜೊತೆ ಜೋಡಿಸುವುದು ಸಾಕ್ಷಾತ್ಕಾರದ ಒಟ್ಟು ರಹಸ್ಯವಾಗಿದೆ, ಅದು ಅವತಾರದ ಕಾರ್ಯವಾಗಿದೆ. ಪ್ರತಿಯೊಂದು ಸಲ ಅವನು ಏಣಿಗೆ ಇನ್ನೊಂದು ಹಂತವನ್ನು ಕೂಡಿಸಿದಾಗ ಭೂಮಿಯ ಮೇಲೆ ಒಂದು ಹೊಸ ರಚನೆಯಾಗಿದೆ.... ಕೂಡಿಸಲಾದ ಆ ಹಂತವನ್ನು ಶ್ರೀ ಅರವಿಂದರು ಈಗ ಅತಿಮಾನಸವೆಂದು ಕರೆದಿದ್ದಾರೆ; ತತ್ಪರಿಣಾಮವಾಗಿ ಪ್ರಜ್ಞೆಯು ತನ್ನ ವೈಯಕ್ತಿಕ ರೂಪವನ್ನು ಉಳಿಸಿಕೊಂಡು ಅತಿಮಾನಸ ಪ್ರಪಂಚವನ್ನು ಪ್ರವೇಶಿಸುತ್ತದೆ ಮತ್ತು ಇಲ್ಲಿ ಒಂದು ಹೊಸ ಅಸ್ತಿತ್ವವನ್ನು ಸ್ಥಾಪಿಸಲು ಕೆಳಗೆ ಬರುತ್ತದೆ. ಪುರುಷನ ಮತ್ತಷ್ಟು ವ್ಯಾಪ್ತಿಗಳು ಇರುವುದರಿಂದ ಖಂಡಿತವಾಗಿಯೂ ಇದು ಕೊನೆಯಲ್ಲ; ಆದರೆ ಸದ್ಯಕ್ಕೆ ಅತಿಮಾನಸವನ್ನು ಕೆಳತರಲು, ಪ್ರಪಂಚವನ್ನು ಪುನರ್ವ್ಯವಸ್ಥೆಗೊಳಿಸಲು, ಜಗತ್ತನ್ನು ಸತ್ಯವಾದ ದೈವಿಕದ ಕಡೆಗೆ ಮರಳಿ ತರಲು ನಾವು ಕಾರ್ಯನಿರತರಾಗಿದ್ದೇವೆ. ಮೂಲತಃ ಇದೊಂದು ವ್ಯವಸ್ಥೆಯ ರಚನೆಯಾಗಿದೆ, ಎಲ್ಲವನ್ನೂ ಅದರ ನಿಜವಾದ ಸ್ಥಳದಲ್ಲಿ ಇರಿಸುವುದಾಗಿದೆ; ಮುಖ್ಯ ಚೇತನ ಅಥವಾ ಸದ್ಯಕ್ಕೆ ಕ್ರೀಯಾಶೀಲವಾಗಿರುವ ಶಕ್ತಿಯು ಪರಿಪಕ್ವ ಸಂಘಟನೆಯ ದೇವತೆಯಾದ ಮಹಾಸರಸ್ವತಿಯಾಗಿದ್ದಾಳೆ.

ನಮಗೆ ಮೇಲೆ ಮತ್ತು ಕೆಳಗೆ ಹೋಗಲು ಮತ್ತು ಮೇಲೆ ಏನಿದೆಯೊ ಅದನ್ನು ಭೌತ ಸ್ವರೂಪದಲ್ಲಿ ತರಲು ಅನುಮತಿಸುವ, ಅವಿರತ ಸಾಧನೆಯ

ಕೆಲಸವು ಪ್ರಜ್ಞೆಯಲ್ಲಿ ಮಾಡಲ್ಪಡುತ್ತದೆ. ಅದನ್ನು ಮಾಡಲು ಕಾರಣೀಭೂತನಾದ (ಅವತಾರ) ವ್ಯಕ್ತಿಯನ್ನು ನೋಡಲಿಲ್ಲವಾದರೂ, ಬಂದಿಖಾನೆಯಿಂದ ಹೊರಗೆ ಬರಲಿಲಲ್ಲವಾದರೂ ಆ ಕಾರ್ಯವನ್ನು ಮಾಡುತ್ತಾನೆ, ಯಾಕೆಂದರೆ ಆ ಕಾರ್ಯ ಪ್ರಜ್ಞೆಯಲ್ಲಿ ಇರುವಂಥದ್ದು, ಪ್ರಾಪಂಚಿಕ ಪುರುಷನ ಮತ್ತು ಅತಿಮಾನಸದ ಮಧ್ಯದ ಸಂಪರ್ಕದ ಒಂದು ಕಾರ್ಯವಾಗಿದೆ. ಅವನನ್ನು ಗುರುತಿಸುವುದು ಬೇಕಾಗಿಲ್ಲ, ಈ ಪ್ರಜ್ಞಾ ಸಂಪರ್ಕವನ್ನು ಸಾಧಿಸಿದರೆ, ಅದರ ಪರಿಣಾಮವು ಬಾಹ್ಯ ಜಗತ್ತಿನಲ್ಲಿ ಹೊಸ ರಚನೆಯ ರೂಪದಲ್ಲಿ ಒಂದು ಮಾದರಿ ಪಟ್ಟಣದ ಪ್ರಾರಂಭದೊಂದಿಗೆ ಮತ್ತು ಪರಿಪೂರ್ಣ ಜಗತ್ತಿನ ಅಂತ್ಯದೊಂದಿಗೆ ಆಗಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/178–79 – ಶ್ರೀಮಾತೆ**

ದೇವರು ಸರ್ವಶಕ್ತ ಎಂದು ನಾವು ನಿಖರವಾಗಿ ಹಾಗೂ ಸ್ಪಷ್ಟವಾಗಿ ಹೇಳಲಾರೆವು. ಯಾಕೆಂದರೆ, ಅವನು ಬೇರೆ ಬೇರೆ ಸ್ತರಗಳಿಂದ ಕೆಲಸ ಮಾಡುತ್ತಾನೆ. ಅವನು ಅತಿಮಾನಸ ಸ್ಥರದಿಂದ ಕ್ರಿಯಾಶೀಲನಾದಾಗ ಅವನ ಸಾಮರ್ಥ್ಯವು ಸರ್ವಶಕ್ತವಾಗುತ್ತದೆ.

ದೇವರು ತನ್ನ ಮೂಲಸ್ವರೂಪದಲ್ಲಿ ಸರ್ವಶಕ್ತನಲ್ಲ, ಅವನು ಎಲ್ಲೆಡೆಯೂ ಸರ್ವಶಕ್ತನಾಗಲಾರ – ಅತಿಮಾನಸದಲ್ಲಾಗಲಿ ಅಥವಾ ಬೇರೆ ಎಲ್ಲೇ ಆಗಲಿ. ಯಾಕೆಂದರೆ, ಅವನು ತನ್ನ ಮೇರೆಯನ್ನು ಆಯ್ಕೆ ಮಾಡುತ್ತಾನೆ ಅಥವಾ ತನ್ನ ಕಾರ್ಯವನ್ನು ಪರಿಸ್ಥಿತಿಗಳಿಂದ ನಿಶ್ಚಯಿಸುತ್ತಾನೆ. ಅದು ಅವನನ್ನು ಕಡಿಮೆ ಸರ್ವಶಕ್ತನ್ನಾಗಿ ಮಾಡುವುದಿಲ್ಲ. ತನ್ನ ಸ್ವ–ನಿರ್ಬಂಧವು ಒಂದು ಸರ್ವಶಕ್ತ ಕ್ರಿಯೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/476 – ಶ್ರೀ ಅರವಿಂದರು**

ನೀನು ಸೂಕ್ಷ್ಮ ಪಂಚ ಭೂತ (ಸ್ಥೂಲ ಪಂಚ ಭೂತಗಳು, ಸೂಕ್ಷ್ಮ ಪಂಚ ಭೂತಗಳು, ಕಾರಣ ಪಂಚ ಭೂತಗಳು ಎಂಬ ಹದಿನೈದು ದೇಹಗಳು) ದೇಹದಲ್ಲಿಯ ದೇವರ ಅವತಾರವೆಂದು ನನಗೆ ಬಲವಾದ ನಂಬಿಕೆ ಇದೆ. ನಾನು ಹೇಳಿದ್ದು ಸರಿ ತಾನೆ?

ನಿನ್ನ ಶ್ರದ್ಧೆಯನ್ನು ಅನುಸರಿಸು – ಅದು ನಿನ್ನನ್ನು ದಾರಿ ತಪ್ಪಿಸುವ ಸಾಧ್ಯತೆ ಇಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/403 – ಶ್ರೀ ಅರವಿಂದರು**

# ಅವತಾರ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

## ಅವತಾರದ ವೈಯಕ್ತಿಕ ಉದಾಹರಣೆ

ಇದು ಕೂಡ ಪ್ರಶ್ನೆಯಲ್ಲಿ ಇರುವುದು – ಮನುಷ್ಯನು ಈ ಜೀವನಕ್ಕೆ ಸ್ವಭಾವ ಮತ್ತು ವಿಶಿಷ್ಟತೆಗಳೊಂದಿಗೆ ಕಟ್ಟುಬಿದ್ದು ಬಂದಿದ್ದಾನೆಯೊ – ಅಥವಾ ಯೋಗದಿಂದ ಹೊಸ ಮನುಷ್ಯನಾಗಿ ಬದಲಾಗಿದ್ದಾನೋ? ಇದನ್ನು ಸಹಿತ ನನ್ನ ಸಾಧನೆಯಲ್ಲಿ ಸಿದ್ಧಮಾಡಿದ್ದೇನೆ. ನನ್ನ ಸಂದರ್ಭದಲ್ಲಿ ಇದು ಸಾಧ್ಯವಿದೆ. ಏಕೆಂದರೆ ನಾನು ಅವತಾರ(!)ವಿದ್ದೇನೆ ಎಂದು ಹೇಳಿದಾಗ ಮತ್ತು ಬೇರೆಯವರ ಪ್ರಕರಣದಲ್ಲಿ ಇದು ಅಸಾಧ್ಯ, ನೀವು ನನ್ನ ಸಾಧನೆಯನ್ನು ಅಭಾಸ ಮಾಡಿಬಿಟ್ಟಿರಿ ಮತ್ತು ಅವತಾರತನವನ್ನು ಅಭಾಸ ಮಾಡಿಬಿಟ್ಟಿರಿ. ನನ್ನ ಯೋಗವನ್ನು ನಾನು ನನಗಾಗಿ ಮಾಡುತ್ತಿಲ್ಲ; ನನಗೇನೂ ಬೇಕಿಲ್ಲ ಮತ್ತು ನನಗೆ ಮುಕ್ತಿ ಬೇಕಿಲ್ಲ ಅಥವಾ ಏನು ಇಲ್ಲ, ಆದರೆ ನಿಖರವಾಗಿ ಭೂಮಿಯ ಪ್ರಜ್ಞೆಗಾಗಿ, ಭೂಮಿಯ ಪ್ರಜ್ಞೆಯ ಬದಲಾವಣೆಗಾಗಿನ ಒಂದು ಮಾರ್ಗಕ್ಕಾಗಿ ಈ ಪ್ರಯತ್ನ. ದೈವವು ಅವತರಣಗೊಂಡು ಬಂದು, ಅವನು ಇದನ್ನು ಮಾಡಬಹುದು ಅಥವಾ ಅದನ್ನು ಮಾಡಬಹುದು ಅಥವಾ ಅವನಿಗೆ ಇದನ್ನೆಲ್ಲ ಮಾಡಲು ವೈಯಕ್ತಿಕ ಅವಶ್ಯಕತೆ ಇದೆಯಾ? ನಿನ್ನ ವಾದ ಏನು ಸಿದ್ಧ ಮಾಡುತ್ತದೆ ಎಂದರೆ ನಾನು ಅವತಾರ ಪುರುಷ ಅಲ್ಲ, ಬರೀ ಉನ್ನತ ಮಾನವ ವ್ಯಕ್ತಿಯೆಂದು. ಒಂದು ರೀತಿಯಾಗಿ ಅದು ಸರಿಯಾಗಿದೆ ಕೂಡ, ಆದರೆ ನೀನು ಬೇರೆಯದೇ ರೀತಿಯ ತಳಹದಿಯ ಮೇಲೆ ಪ್ರಾರಂಭಿಸಿದೆ. ಅದಲ್ಲದೆ, ನಾನು ಬರೀ ಒಬ್ಬ ದೊಡ್ಡ ಮಾನವ ವ್ಯಕ್ತಿಯಾಗಿ, ನನ್ನ ಸಾಧನೆ ಏನು ತೋರಿಸಿಕೊಡುತ್ತದೆ ಎಂದರೆ, ಮಾನವರಿಗೆ ಏನೆಲ್ಲಾ ಮಾಡಲು ಸಾಧ್ಯವಿದೆ ಎನ್ನುವದನ್ನು ಹಾಗೂ ಆ ರೀತಿ ಮಾಡಬಹುದೆಂದು ಸಹಿತ ಹೇಳುತ್ತಿದೆ. ಯಾರಾದರೂ ಸರಿ ಅವನು ಬೀದಿ–ಭಿಕ್ಷುಕನಾಗಿಯೂ ಮಾಡಬಹುದು ಅಥವಾ ಮಾಡಿರಬಹುದು, ಅದೊಂದು ಬೇರೆ ವಿಷಯ. ದುರದೃಷ್ಟವಶಾತ್ ಯಾರು ಭಿಕ್ಷುಕರಲ್ಲವೋ ಅವರು ಕೂಡ ಇದನ್ನು ಮಾಡಬಹುದು.

*

*ನಾವು ಮಾನವನ ಇತಿಹಾಸ ನೋಡಿದಾಗ ಒಬ್ಬನೇ ಒಬ್ಬ ಕ್ರಿಸ್ತ, ಒಬ್ಬ ಬುದ್ಧ, ಒಬ್ಬ ಕೃಷ್ಣ, ಒಬ್ಬ ಶ್ರೀ ಅರವಿಂದರು ಮತ್ತು ಒಬ್ಬ ಶ್ರೀಮಾತೆ. ಈ ನಿಯಮವನ್ನು*

*ಮುರಿಯುವುದು ಏನಾದರೂ ಇದೆಯಾ? ಯಾಕೆಂದರೆ ಅದನ್ನು ಮಾಡಿಲ್ಲ, ಅದನ್ನು ಮಾಡಲಾಗುವುದಿಲ್ಲ.*

ಎಂತಹ ಅದ್ಭುತವಾದ ವಾದ! ಇಲ್ಲಿವರೆಗೆ ಮಾಡಿಲ್ಲ, ಅದಕ್ಕಾಗಿ ಮಾಡಲಾಗುವುದಿಲ್ಲ! ಆ ಗತಿಯಲ್ಲಿ ಭೂಮಿಯ ಇತಿಹಾಸ ಜೀವ ಸಸ್ಯ ಹಾಗೂ ಪ್ರಾಣಿಗಳ ಜೀವದ್ರವ್ಯದಂತೆ (ಪ್ರೊಟೋಪ್ಲಾಜಂ) ಹಂತದಲ್ಲಿ ನಿಂತು ಬಿಡಬೇಕಿತ್ತು. ಅನಿಲ ಉಂಡೆಯಲ್ಲಿ ಜೀವ ಉತ್ಪತ್ತಿ ಆಗುತ್ತಿರಲಿಲ್ಲ ಆದ್ದರಿಂದ ಜೀವ ಉತ್ಪತ್ತಿ ಆಗುತ್ತಿರಲಿಲ್ಲ – ಯಾವಾಗ ಬರೀ ಪ್ರಾಣ ಇದ್ದಾಗ ಮನಸ್ಸು ಹುಟ್ಟಿರಲಿಲ್ಲ ಆದ್ದರಿಂದ ಮನಸ್ಸು ಹುಟ್ಟುತ್ತಿರಲಿಲ್ಲ ಮನಸ್ಸಿನಾಚೆ ಏನೂ ಇರಲಿಲ್ಲ, ಯಾರಲ್ಲೂ ಅಧಿಮಾನಸ ಪ್ರಕಟವಾಗಿಲ್ಲ ಆದುದರಿಂದ ಅಧಿಮಾನಸ ಹುಟ್ಟುವುದಿಲ್ಲ. ಅಯ್ಯೋ ದೇವರೇ! ಜಯವಾಗಲಿ, ಜಯವಾಗಲಿ, ಮನುಷ್ಯನ ಈ ತರ್ಕಕ್ಕೆ ಜಯವಾಗಲಿ! ಭಾಗ್ಯವಶಾತ್ ದೈವಕ್ಕಾಗಲಿ ಅಥವಾ ವಿಶ್ವಾತ್ಮಕ ಚೈತನ್ಯಕಾಗಲಿ ಅಥವಾ ಪ್ರಕೃತಿ ಅಥವಾ ಇದ್ಯಾವುದೂ ಮನುಷ್ಯನ ತರ್ಕಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅವನು ಅಥವಾ ಅವಳು ಅಥವಾ ಅದು ಮಾಡಲೇಬೇಕಿದೆ ಅದನ್ನು ಮಾಡಬೇಕು ಅಥವಾ ಮಾಡಬಾರದೋ ಎನ್ನುವದನ್ನು ನಿರ್ಧರಿಸಿಕೊಳ್ಳಬೇಕು.

**ಅವತಾರ ಒಂದು ಮಾರ್ಗ**

ನನ್ನ ಮತ್ತು ಶ್ರೀಮಾತೆ ಕುರಿತಾಗಿ ಕೆಲವು ಜನರು ಹೇಳುತ್ತಾರೆ, "ಸುಪ್ರಮಾನಸ ಕೆಳಗಿಳಿದು ಬರುವುದಾದರೆ ಅದು ಎಲ್ಲರಲ್ಲಿಯೂ ಬರಬಹುದು, ಅವರಲ್ಲೇ ಮೊದಲು ಏಕೆ? ಅವರಿಗಿಂತ ಮುಂಚೆ ನಮ್ಮಲ್ಲೇಕೆ ಇಲ್ಲ? ಅವರ ಮುಖಾಂತರ ಏಕೆ? ನೇರವಾಗಿ ನಮ್ಮಲ್ಲಿ ಏಕಿಲ್ಲ?"

ಇದು ತಾರ್ಕಿಕವೆನಿಸುತ್ತದೆ, ವಾದವು ಸರಿಯಾಗಿದೆ, ಆದರೆ ಈ ತರ್ಕದ ಕಷ್ಟವೇನೆಂದರೆ ಇದು ಪರಿಸ್ಥಿತಿಯನ್ನು ನಿರ್ಲಕ್ಷಿಸುತ್ತದೆ. ಸುಪ್ರಮಾನಸ ಎಂದರೆ ಏನೆಂದು ಗೊತ್ತಿರದೇ ಅದನ್ನು ತಮ್ಮೊಳಗೆ ಇಳಿಸಿಕೊಳ್ಳುವ ಮೂರ್ಖತನ ಮಾಡುತ್ತದೆ. ಮತ್ತು ಮೇಲಿನಿಂದ ಕೆಳಗಿಳಿಸುವ ಪವಾಡದ ಕಲ್ಪನೆ ಮಾಡುತ್ತದೆ – ಯಾರು ಇದಕ್ಕಾಗಿ ಪ್ರಯತ್ನ ಪಡುತ್ತಾರೋ ಅವರು ಭಯಂಕರ ಸೋಲಿಗೆ ಸಿಕ್ಕಿಕೊಳ್ಳುತ್ತಾರೆ – ಇಲ್ಲಿಯವರೆಗೆ ಪ್ರಯತ್ನಪಟ್ಟವರೆಲ್ಲ ಇದನ್ನು ಅನುಭವಿಸಿದ್ದಾರೆ. ಇದು ಹೇಗೆಂದರೆ ಮಾರ್ಗದರ್ಶನ ಪಡೆಯದೆ ಆಲೋಚನೆ ಮಾಡಿದ ಹಾಗೆ, ಬೆಟ್ಟದ ಮೇಲೆ ಪ್ರಪಾತದ ಅಂಚಿನಲ್ಲಿ ನಡೆಯುತ್ತಾ ಗಾಳಿಯಲ್ಲಿ ಹಾರಿದ ಹಾಗೆ. ಪರಿಣಾಮ ಅನಿವಾರ್ಯವಾದದ್ದು.

*

*ಯಾವುದನ್ನು ನೀವು ಸಾಧಿಸುವಿರೋ ಅದು ಮನುಷ್ಯರಿಗೆ ಸಾಧಿಸಲು ಸಾಧ್ಯ ಎನ್ನುವುದು ನನಗೆ ಸರಿಯಾಗಿ ಅರ್ಥವಾಗುತ್ತಿಲ್ಲ. ನಿಮ್ಮ ಸಿದ್ಧಿ ಬೇರೆಯವರಿಗೆ ಒಂದು ಅನುಸರಣೀಯ ಮಾರ್ಗ ಅದು ಏಕಮೇವವಾಗಿದೆ.*

ಇಷ್ಟು ಸುಲಭದ್ದೂ ನನಗೆ ಅರ್ಥವಾಗುವುದಿಲ್ಲ. ನನ್ನಲ್ಲಿನ ಆಧ್ಯಾತ್ಮದೆಡೆಗೆ ಯಾವುದೇ ಬಲವಂತವಿಲ್ಲ, ನಾನು ಆಧ್ಯಾತ್ಮಿಕತೆಯನ್ನು ಬೆಳೆಸಿಕೊಂಡೆ. ನಾನು ತತ್ತ್ವಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥನಿದ್ದೆ. ನಾನು ತತ್ತ್ವಶಾಸ್ತ್ರಜ್ಞನಾಗಿ ಬೆಳೆದೆ. ನಾನು ಚಿತ್ರಕಲಾಕಾರನಾಗಲು ಬಯಸಿರಲಿಲ್ಲ – ನಾನು ಯೋಗದಿಂದ ಅದನ್ನು ಕಲಿತೆ. ನಾನು ಈ ಪ್ರಕೃತಿ ಏನಿತ್ತೋ ಅದೇ ಆಗಿದ್ದು, ಅದರ ಕಡೆ ಪರಿವರ್ತಿಸಿದೆ. ಅದನ್ನು ಹೊಸ ತರಹದ ಹಾಗೆ ಮಾಡಿದೆ, ಪವಾಡದಿಂದಲ್ಲ ಮತ್ತು ನಾನು ಏನು ಮಾಡಬಹುದು ಎನ್ನುವುದಕ್ಕೆ ಮಾಡಿ ತೋರಿಸಿದೆ ಮತ್ತು ಅದನ್ನು ಹೇಗೆ ಮಾಡಬಹುದೆಂದು ಕೇಳಿದರೆ, ಅದನ್ನು ನನ್ನ ವೈಯಕ್ತಿಕ ಅವಶ್ಯಕತೆಯಾಗಿ ನನಗೋಸ್ಕರ ಮಾಡಿದ್ದಲ್ಲ ಅಥವಾ ಯಾವುದೇ ಕ್ರಿಯೆ ಇಲ್ಲದೆ ಪವಾಡದಿಂದ ಮಾಡಿದ್ದು ಅದಲ್ಲ ಅದು ಹಾಗಿಲ್ಲದಿದ್ದರೆ ನನ್ನ ಯೋಗವು ಅನುಪಯೋಗಿಯಾಗುತ್ತಿತ್ತು ಮತ್ತು ನನ್ನ ಜೀವನ ಒಂದು ಪ್ರಮಾದವಾಗುತ್ತಿತ್ತು – ಪ್ರಕೃತಿಯ ಯಾವುದೇ ಉದ್ದೇಶ ಅಥವಾ ಪರಿಣಾಮವಿಲ್ಲದ ಕೇವಲ ಒಂದು ಅಭಾಸ ಮತ್ತು ಪೂರ್ಣವಾದ ಮನೋವಿಕಾರವಾಗುತ್ತಿತ್ತು ನೀವು ಏನು ಆಲೋಚನೆ ಮಾಡುತ್ತಿರುವಿರೆಂದರೆ ನಾನು ಏನು ಮಾಡಿದ್ದೇನೆಂದರೆ ನನಗೆ ಬಿಟ್ಟರೆ ಬೇರೆಯವರಿಗೆ ಉಪಯೋಗವಿಲ್ಲವೆಂದು ಅಭಿನಂದಿಸುತ್ತಿರುವಿರಿ ನನ್ನ ಕೆಲಸದ ಮೇಲೆ ಮಾಡಬಹುದಾದ ಅದೊಂದು ಹಾನಿಕಾರಕ ವಿಮರ್ಶೆ ಎನಿಸುತ್ತದೆ.

**ಅವತಾರದ ಜೀವನ ಮತ್ತು ಪವಾಡಗಳು**

ಪ್ರಾಯೋಗಿಕವಾಗಿ ನನಗೆ ಅನುಭವಕ್ಕೆ ಬಂದಿರುವದೇನೆಂದರೆ, ನನಗೆ ಬೇಕಿದ್ದ ಶಕ್ತಿಗಳು ಪ್ರಾರಂಭದಲ್ಲಿ ನನ್ನಲ್ಲಿರಲಿಲ್ಲ, ನಾನು ಯೋಗದಿಂದ ಅವುಗಳನ್ನು ಪಡೆದುಕೊಂಡಿದ್ದೇನೆ. ಅವುಗಳಲ್ಲಿ ಬಹಳಷ್ಟು ನಾನು ಪ್ರಾರಂಭ ಮಾಡಿದಾಗ ನನ್ನ ಅಸ್ತಿತ್ವದಲ್ಲಿರಲಿಲ್ಲ ಮತ್ತು ಅವುಗಳನ್ನು ಹೆಚ್ಚಿನ ಮಟ್ಟಕ್ಕೆ ಪಳಗಿಸಬೇಕಾಯಿತು. ನನ್ನ ಕಲ್ಪನೆಯಲ್ಲಿ ಅವತಾರದ ಜೀವನ ಮತ್ತು ಕ್ರಿಯೆಯ ಅಂಶದ ಬಗ್ಗೆ ಹೇಳುವುದಾದರೆ ಅವು ಪವಾಡಗಳಲ್ಲ ಮತ್ತು ಅವು ಹಾಗೆ ಆಗಿದ್ದರೆ, ಅವನ ಅಸ್ತಿತ್ವ ಪರಿಪೂರ್ಣವಾಗಿ ಅನುಪಯೋಗಿ, ಪ್ರಕೃತಿಯ ಒಂದು ವಿಲಕ್ಷಣ ಅನವಶ್ಯಕತೆ ಮಾತ್ರ. ಅವನು ಭೂಮಿಯ ಪರಿಸ್ಥಿತಿಗಳನ್ನು

ಒಪ್ಪಿಕೊಳ್ಳುತ್ತಾನೆ, ಅವನು ಸಲಕರಣೆಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಅವನು ಮಾನವರಿಗೆ ಮಾರ್ಗವನ್ನು ತೋರುವುದಲ್ಲದೆ ಸಹಾಯ ಕೂಡ ಮಾಡುತ್ತಾನೆ. ಇಲ್ಲವೆಂದರೆ ಅವನಿಂದ ಉಪಯೋಗವೇನಿದೆ ಮತ್ತು ಇಲ್ಲಿ ಏಕಿದ್ದಾನೆ?

*

ಅವತಾರದ ಬಗ್ಗೆ ನಾನು ಏನು ಬರೆದಿದ್ದೇನೆ ಎಂದು ನಿನಗೆ ನೆನಪಿಸುತ್ತೇನೆ. ಅವತಾರತನಕ್ಕೆ ಎರಡು ಅಂಶಗಳ ಆಯಾಮಗಳು ಅದರ ಹಿಂದೆ ದೈವೀ ಪ್ರಜ್ಞೆ ಮತ್ತು ಉಪಕರಣದ ವ್ಯಕ್ತಿತ್ವ. ದೈವೀ ಪ್ರಜ್ಞೆಯು ಸರ್ವಶಕ್ತ, ಆದರೆ ಉಪಕರಣದ ವ್ಯಕ್ತಿತ್ವ ಪ್ರಕೃತಿಯಲ್ಲಿ ಸಿಕ್ಕು ಹಾಕಿಕೊಂಡಿರುತ್ತದೆ, ಪ್ರಕೃತಿಯ ಸ್ಥಿತಿಗೆ ಅನುಗುಣವಾಗಿ ಮತ್ತು ಅದು ಆಟದ ನಿಯಮಕ್ಕನುಗುಣವಾಗಿ ಉಪಯೋಗಿಸುತ್ತದೆ – ಆದಾಗ್ಯೂ ಕೆಲವು ಸಲ ಆಟದ ನಿಯಮಗಳನ್ನು ಬದಲಾಯಿಸುತ್ತದೆ. ಅವತಾರ ಹೊಳೆಯುವ ಪವಾಡವೆಂದು ಸ್ವೀಕರಿಸುವದಾದರೆ, ನಾನು ಅದನ್ನು ಉಪಯೋಗಿಸುತ್ತೇನೆ. ಸರ್ವಶಕ್ತ ದೈವವು ಪ್ರಕೃತಿಯಲ್ಲಿನ ಒಂದುಗೂಡಿಸುವ ಅದೊಂದು ವ್ಯವಸ್ಥೆ ಎಂದಾದರೆ ನಾನದನ್ನು ತಿಳಿದುಕೊಂಡು ಒಪ್ಪಿಕೊಳ್ಳುತ್ತೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/405–14**

**ಮಾನವೀಯತೆಯ ಹೊಣೆಗಾರಿಕೆ**

> *ನೀವು ಇಂದು ರಾತ್ರಿ "ಕ"ನ ಪ್ರಶ್ನೆಗೆ ಏನು ಉತ್ತರ ಕೊಡುವಿರೆಂದು ನಾನು ಬಹಳ ಕೌತುಕದಿಂದ ಕಾಯುತ್ತಿದ್ದೇನೆ. ಬಹುತೇಕವಾಗಿ ನನಗೆ ಆಶ್ಚರ್ಯವೂ ಆಗಿದೆ. ನೀವು ಏಕೆ ನಿಮ್ಮ ವಿಷಯಗಳನ್ನು ಸಮಸ್ಯೆಯಂತೆಯೇ ಮಾಡುತ್ತೀರಿ, ನೀವು ಯಾವಾಗಲಾದರೂ ಆಸೆಯಿಂದ, ಉದ್ವೇಗದಿಂದ, ಆನಂದ ಅಥವಾ ಮೋಹ ಇತ್ಯಾದಿಗಳಿಂದ ನಮ್ಮ ತರಹ ದುಃಖ ಪಟ್ಟಿದ್ದೀರಾ? ನಾವು ಪಟ್ಟಿರುವ ದುಃಖ ಮತ್ತು ಪ್ರಶ್ನೆಗಳ ಮುಂದೆ, ನಿಮ್ಮದು ಕೇವಲ ಮಕ್ಕಳ ಆಟದ ತರಹ – ನಾನು ನಿಮ್ಮ ಉದಾಹರಣೆಗಳನ್ನು, ನನ್ನ ಸಮಸಮಕ್ಕೆ ಎಂದು ತಿಳಿಯುವದಿಲ್ಲ.*

ನಾನು ಹೇಳಿದ್ದೇನೆಂದರೆ ಅವತಾರವು ಭೂಮಿಗೆ ಬಂದು ಉನ್ನತ ಪ್ರಜ್ಞೆಯೆಡೆಗೆ ದಾರಿ ತೋರಲು ಬಂದಂತಹದು – ಆ ವಿಷಯದ ಬಗ್ಗೆ ನಮ್ಮ ಪರಿಕಲ್ಪನೆ ಅದು ಕ್ರಿಸ್ತ ಮತ್ತು ಕೃಷ್ಣ ಮತ್ತು ಬುದ್ಧನದು ಕೂಡ ಆಗಿದ್ದರೂ, ಅವರ ಮಾರ್ಗವನ್ನು ಯಾರೂ ಅನುಸರಿಸದಿದ್ದರೆ ಎಲ್ಲವೂ ತಪ್ಪಾಗುತ್ತದೆ ಅಥವಾ ಅವತಾರದ ಎಲ್ಲ

ಜೀವನ ಮತ್ತು ಕ್ರಿಯೆ ಬರೀ ನಿರರ್ಥಕವಾಗುತ್ತದೆ. "ಕ" ಅಂದುಕೊಂಡಂತೆ "ದಾರಿ"ಯೇ ಇಲ್ಲ ಮತ್ತು ಅನುಸರಿಸುವ ಸಾಧ್ಯತೆಯಿಲ್ಲ, ಅವತಾರದ ಹೋರಾಟ ಮತ್ತು ದುಃಖ ನಿಜವಾದುದಲ್ಲ ಮತ್ತು ಎಲ್ಲಾ ನಟನೆ, – ದೈವವನ್ನು ಪ್ರತಿನಿಧಿಸುವವರಿಗೆ ದುಃಖವೆಂಬುದು ಸಾಧ್ಯವೇ ಇಲ್ಲ. ಅಂತಹ ಒಂದು ಪರಿಕಲ್ಪನೆ ಎಲ್ಲಾ ಅವತಾರದ ಕಲ್ಪನೆಯನ್ನು ಮೂರ್ಖತನವನ್ನಾಗಿಸುತ್ತದೆ – ಅದರಲ್ಲಿ ತರ್ಕವೇನಿಲ್ಲ, ಅದರ ಅವಶ್ಯಕತೆ ಇಲ್ಲ ಯಾವುದೇ ಅರ್ಥವಿಲ್ಲ. ದೈವಿ ಸತ್ತೆ ತುಂಬಾ ಶಕ್ತಿಯುತವಾದಂತಾಗಿದ್ದು ಭೂಮಿಗೆ ಕೆಳಗೆ ಇಳಿದುಬರದೇ ಜನರನ್ನು ಮೇಲಕ್ಕೆತ್ತಬಹುದು. ಅವತಾರವು ಜಗತ್ತಿನ ವ್ಯವಸ್ಥೆಯ ಒಂದು ಭಾಗವಾಗಿ ಮಾನವನ ಭಾರವನ್ನು ತನ್ನ ಮೇಲೆ ಹೇರಿಕೊಂಡು ಮತ್ತು ಮಾರ್ಗವನ್ನು ತೋರಿದರೆ ಆಗ ಅವತಾರತನಕ್ಕೆ ಏನಾದರೂ ಅರ್ಥವಂತಿಕೆ ಇರುತ್ತದೆ.

*

... ಇದೋ ನಾನು ಹೇಳುತ್ತಿರುವದೇನೆಂದರೆ, "ನಾನು ಮಾರ್ಗವನ್ನು ತೋರಿದ್ದೇನೆ; ಈಗ ನೀನು ದೈವದ ಸಹಾಯದೊಂದಿಗೆ ಅದನ್ನು ಅನುಸರಿಸು". "ನಿನ್ನ ದಾರಿ ನೀನೇ ಹುಡುಕಿಕೋ ನಾನು ಹೇಗೆ ಅದನ್ನು ಕಂಡುಕೊಂಡಿದ್ದೇನೆಯೋ ಅದೇ ರೀತಿಯಲ್ಲಿ ಕಂಡುಕೋ ಎಂದೇನೂ ನಾನು ಹೇಳಿಲ್ಲ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/420–21 – ಶ್ರೀ ಅರವಿಂದರು**



*ನೀವು ದಿವ್ಯ-ಅವತಾರಿಗಳಾಗಿ "ಭಗವಂತನೆ ತನುವಿನ ಸ್ವರೂಪದಲ್ಲಿ" ಇರುವಿರಿ ಎನ್ನುವದು ನನ್ನ ಬಲವಾದ ವಿಶ್ವಾಸ. ಈ ವಿಶ್ವಾಸ ಸರಿಯಾಗಿದೆ ಅಲ್ಲವೇ?*

– ನಿನ್ನ ವಿಶ್ವಾಸವನ್ನು ನೀನು ಅನುಸರಿಸು. ಅದು ನಿನಗೆ ತಪ್ಪು ಮಾರ್ಗದರ್ಶನ ನೀಡುವದಿಲ್ಲ

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/433 – ಶ್ರೀ ಅರವಿಂದರು**

# ಶ್ರೀ ಅರವಿಂದರ ಜೀವಯಾನ

**– ಅನುವಾದ: ನಾಗಜ್ಯೋತಿ ಮಾನ್ವಿ**

**1872 –** ಆಗಸ್ಟ್ 15 ರಂದು ಕಲ್ಕತ್ತಾದಲ್ಲಿ ಶ್ರೀ ಅರವಿಂದರ ಜನನ.[1]

**1877** ರವರೆಗೆ ಮೊದಲಿಗೆ ಪೂರ್ವ ಬಂಗಾಳದ ರಂಗಪುರ; ನಂತರ ಡಾರ್ಜಿಲಿಂಗ್‌ನ ಲೊರೆಟ್ಟೋ ಕಾನ್ವೆಂಟ್ ಶಾಲೆಯಲ್ಲಿ ವಿದ್ಯಾಭ್ಯಾಸ.

**1879 –** ಇಂಗ್ಲೆಂಡ್‌ಗೆ ಶ್ರೀ ಅರವಿಂದರನ್ನು ವಿದ್ಯಾಭ್ಯಾಸಕ್ಕಾಗಿ ಕರೆದೊಯ್ಯಲಾಯಿತು.[2]

**1879–1884 –** ಮ್ಯಾಂಚೆಸ್ಟರ್‌ನಲ್ಲಿ ಡ್ರೆವೆಟ್ ಕುಟುಂಬದವರ ನೇತೃತ್ವದಲ್ಲಿ ಮನೆಯಲ್ಲಿಯೇ ಡ್ರೆವೆಟ್‌ರವರಿಂದ ಶಿಕ್ಷಣದ ಪಾಠ.

**1883 –** ಬೆಳಕು (light) ಎಂಬ ಮೊದಲ ಪದ್ಯ ರಚಿಸಲಾಯಿತು.

**1884 –** ಲಂಡನ್‌ನ 'ಸೇಂಟ್ ಪಾಲ್' ಶಾಲೆಗೆ ಸೆಪ್ಟೆಂಬರ್‌ನಲ್ಲಿ ದಾಖಲಾದರು.

**1887 –** ಹ್ಯಾಸ್ಟಿಂಗ್ಸ್‌ನಲ್ಲಿ ಆಗಸ್ಟ್ ರಜೆ. ರಜೆಯ ನಂತರ ಲಂಡನ್‌ನ ಕ್ರೋಮ್‌ವೆಲ್ ರಸ್ತೆಯ 128 ಕೋಣೆಯನ್ನು ವಸತಿ ಪಡೆದರು.

**1889 –** 'ಸೇಂಟ್ ಪಾಲ್ಸ್ ಶಾಲೆ'ಯಲ್ಲಿ ಡಿಸೆಂಬರ್‌ನಲ್ಲಿ (ಮೆಟ್ರಿಕುಲೇಶನ್) 10ನೇ ತರಗತಿ ಉತ್ತೀರ್ಣರಾದರು.

**1890 –** ಜುಲೈನಲ್ಲಿ ಭಾರತೀಯ ನಾಗರಿಕ ಸೇವೆಗೆ ಪರೀಕ್ಷಾರ್ಥಿಯಾಗಿ ದಾಖಲಾದರು. ಅಕ್ಟೋಬರ್ 11 ರಂದು ವಿದ್ಯಾರ್ಥಿವೇತನದಿಂದ 'ಕೇಂಬ್ರಿಡ್ಜ್‌ನ ಕಿಂಗ್ಸ್ ಕಾಲೇಜಿ'ನಲ್ಲಿ ದಾಖಲಾತಿ ಪಡೆದರು. ಕೇಂಬ್ರಿಡ್ಜ್‌ನಲ್ಲಿ 'ಮಜಲಿಸ' ಎಂಬ ವಿದ್ಯಾರ್ಥಿ ಸಂಘ ಸೇರಿದರು ಅಲ್ಲಿ ಭಾರತದ ಸ್ವತಂತ್ರದ ಬಗ್ಗೆ ಭಾಷಣ ಮಾಡಲಾಯಿತು.

ಸದ್ಗುಣಗಳ ಸಾಮರಸ್ಯ (Harmony of Virtues) ಎಂಬ ನಾಟಕ ಬರೆದರು.

**1892 –** ಆಗಸ್ಟ್ ಭಾರತೀಯ ನಾಗರಿಕ ಸೇವೆಯ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅಕ್ಟೋಬರ್‌ನಲ್ಲಿ ಕೇಂಬ್ರಿಡ್ಜ್‌ನಿಂದ ಹೊರಗೆ ಬಂದರು. ಲಂಡನ್‌ನಲ್ಲಿ 'ಕಮಲ ಮತ್ತು ಖಡ್ಗ' (Lotus and Dagger) ಎಂಬ ರಹಸ್ಯ ಸಮಾಜದ ನಿರ್ಮಾಣದಲ್ಲಿ ಭಾಗಿಯಾದರು.

ಮೊದಲ 'ಪೂರ್ವ ಯೋಗಿಕ' 'ಆತ್ಮ'ದ ಕುರಿತು ಮಾನಸಿಕ ಅನುಭಾವವನ್ನು ಪಡೆದರು.

ನವೆಂಬರ್‌ನಲ್ಲಿ ಕುದುರೆ ಸವಾರಿಯ ಪರೀಕ್ಷೆಗೆ ಉದ್ದೇಶ ಪೂರ್ವಕವಾಗಿ ಹಾಜರಾಗದ ಕಾರಣದಿಂದ ಭಾರತೀಯ ನಾಗರಿಕ ಸೇವೆಗೆ ಅಸಮರ್ಥರಾದರು.

**1892 –** ಡಿಸೆಂಬರ್‌ನಲ್ಲಿ ಬರೋಡದ ಗ್ರಾಯಕವಾಡ್ ಮಹಾರಾಜರ ಬಳಿ ವೃತ್ತಿಯನ್ನು ಪಡೆದರು.

**1893 –** ಜನೆವರಿ 12 ರಂದು ಎಸ್.ಎಸ್. ಕಾರ್ತೇಜ್ ಎನ್ನುವ ಹಡಗಿನ ಮೂಲಕ ಇಂಗ್ಲೆಂಡ್‌ನಿಂದ ಮರುಪ್ರಯಾಣ ಬೆಳೆಸಿದರು. ಗಿಬ್ರಾಲ್ಟರ್, ಸೇಡ್ ಬಂದರು ಮತ್ತು ಆ್ಯಡನ್ ಮೂಲಕ ಪ್ರಯಾಣಿಸಿದರು.

ಫೆಬ್ರವರಿ 6 ರಂದು ಬಾಂಬೆಯ 'ಅಪೊಲೋ ಬಂದರಿ'ನಲ್ಲಿಳಿದು ಭಾರತವನ್ನು ತಲುಪಿದರು.

ಭಾರತದ ಮಣ್ಣಿನ ಮೇಲೆ ಶ್ರೀ ಅರವಿಂದರು ಪಾದಾರ್ಪಣೆ ಮಾಡಿದಾಗ ಬಂದು 'ವಿಶಾಲ ವ್ಯಾಪ್ತತೆಯ ಪ್ರಶಾಂತಿ'ಯು ಅವರ ಮೇಲೆ ಅವತರಣವಾಗುತ್ತದೆ ಮತ್ತು ಅದು ಕೆಲವು ತಿಂಗಳುಗಳು ನಂತರವೂ ಹಾಗೆಯೇ ಉಳಿಯುತ್ತದೆ.

ಫೆಬ್ರವರಿ 18 ರಂದು ಬರೋಡ ರಾಜ್ಯಸೇವೆಗಾಗಿ ಅಧಿಕೃತವಾಗಿ ಸೇರಿಕೊಂಡು, ಮೊದಲು "ಭೂ–ಒಪ್ಪಂದ ವಿಭಾಗ"ದಲ್ಲಿ ಕೆಲಸ ಮಾಡಿದರು.

ಬರೋಡದ ಮೊದಲ ವರ್ಷದಲ್ಲಿ ಘಟಿಸಿದ ಕುದುರೆಗಾಡಿ ಅಪಘಾತದ ವಿಪತ್ತಿನಲ್ಲಿ, ತಮ್ಮ ಅಂತರಂಗದಿಂದ ದೈವತ್ವವು ಹೊರಹೊಮ್ಮುವ ದರ್ಶನದ ದೃಷ್ಟಾಂತವಾಯಿತು.

ಮಾರ್ಚ–ಏಪ್ರಿಲ್‌ನಲ್ಲಿ ಮಹಾಭಾರತದಿಂದ ಆಯ್ದುಕೊಂಡ ಭಾಗಗಳನ್ನುವು ಆಂಗ್ಲ ಭಾಷೆಗೆ ಭಾಷಾಂತರಿಸಿದರು.

ಬಾಂಬೆಯ "ಇಂದು ಪ್ರಕಾಶನ" ಎನ್ನುವ ಸಂಸ್ಥೆಗೆ "ಭಾರತ ಮತ್ತು ಬ್ರಿಟಿಷ ಪಾಲಿಮೆಂಟ್" ಎಂಬ ಲೇಖನ ಮತ್ತು ಲೇಖನಗಳ ಸರಣಿಗಳನ್ನು ಕೊಡುಗೆ ನೀಡಿದರು. ಅವುಗಳಲ್ಲಿ "ಹಳೆಯ ದೀವಿಗೆಯ ಸ್ಥಾನದಲ್ಲಿ ಹೊಸ ದೀವಿಗೆ (new lamps for old)" ಒಂದಾಗಿತ್ತು.

**1897 –** 'ಫ್ರೆಂಚ್ ಉಪನ್ಯಾಸಕ'ರಾಗಿ 'ಬರೋಡಾ ಮಹಾವಿದ್ಯಾಲಯ'ದಲ್ಲಿ ಅಲ್ಪಕಾಲಿಕ ಕೆಲಸ ಪ್ರಾರಂಭಿಸಿದರು.

**1898 –** ಮಹಾವಿದ್ಯಾಲಯದಲ್ಲಿ 'ಹಂಗಾಮಿ ಇಂಗ್ಲೀಷ ಪ್ರಾಧ್ಯಾಪಕ'ರಾಗಿ ನೇಮಕಗೊಂಡರು.

**1899 –** ಹಂಗಾಮಿ ಇಂಗ್ಲೀಷ ಮತ್ತು ಫ್ರೆಂಚ್ ಆಧ್ಯಾಪಕರಾಗಿ ಸೇವೆ ಸಲ್ಲಿಸಿದರು.

**1900 –** ಹಂಗಾಮಿ ಇಂಗ್ಲೀಷ್ ಪ್ರಾಧ್ಯಾಪಕರಾದರು.

**1900 –** ಮೊದಲ ರಾಜಕೀಯ ಸಂಚಲನೆ: ಕ್ರಾಂತಿಕಾರಿ ಸಂಘಟನೆಯ ಕೆಲಸಕ್ಕಾಗಿ ತಮ್ಮ ಪ್ರತಿನಿಧಿಯಾಗಿ ಜತೀಂದ್ರನಾಥರನ್ನು ಕಳುಹಿಸಿದರು.

**1901 –** ಏಪ್ರಿಲ್ 17ರಂದು ಕಾಲೇಜಿನಿಂದ ಬರೋಡ ರಾಜ್ಯದ ಕಂದಾಯ ವಿಭಾಗಕ್ಕೆ ಸ್ಥಳಾಂತರಗೊಂಡರು.

ಏಪ್ರಿಲ್ 30ರಂದು ಕಲಕತ್ತಾದಲ್ಲಿ ಭೂಪಾಲ ಚಂದ್ರ ಬೋಸ್‌ರವರ ಜೇಷ್ಠ ಸುಪುತ್ರಿಯಾದ 'ಮೃಣಾಲಿನಿ ಬೋಸ್'ರವರೊಂದಿಗೆ ವಿವಾಹವಾಯಿತು. ನಂತರ ಅವರ ತಂಗಿ 'ಸರೋಜಿನಿ' ಮತ್ತು ಪತ್ನಿ ಮೃಣಾಲಿನಿಯೊಂದಿಗೆ ನೈನಿತಾಲ್‌ಗೆ ಹೋದರು.

**1902 –** 1902 ರ ನಂತರ ಶ್ರೀ ಅರವಿಂದರು ವಿಶೇಷವಾಗಿ ತಮ್ಮ ರಜಾ ದಿನಗಳು ಮತ್ತು ಬಿಡುವಿನ ದಿನಗಳನ್ನು ಬಂಗಾಳದಲ್ಲಿ ಕ್ರಾಂತಿಕಾರಿ ಕಾರ್ಯಗಳ ಸಂಘಟನೆಗಳಿಗಾಗಿ ಉಪಯೋಗಿಸುತ್ತಿದ್ದರು.

ಡಿಸೆಂಬರ್‌ನಲ್ಲಿ "ಅಹಮದಾಬಾದ್‌ನ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ"ದಲ್ಲಿ 'ಲೋಕಮಾನ್ಯ ತಿಲಕ್'ರನ್ನು ಭೇಟಿಯಾದರು.

**1903 –** ಮೇ ತಿಂಗಳಿಂದ ಆಗಸ್ಟ್‌ವರೆಗೆ ಗಾಯಕವಾಡರ ಕಾಶ್ಮೀರ ಯಾತ್ರೆಯಲ್ಲಿ ಅವರ ವೈಯಕ್ತಿಕ ಕಾರ್ಯದರ್ಶಿಗಳಾಗಿ ಜೊತೆಗಿದ್ದರು.

ಕಾಶ್ಮೀರದಲ್ಲಿ 'ತಖ್ತ–ಎ–ಸುಲೇಮಾನ್'ನಲ್ಲಿ "ಆನಂತ ಶೂನ್ಯದ ಅನುಭಾವ"ವನ್ನು ಪಡೆದು, ಆ ಅನುಭವದ ಮೇಲೆ "ಅದ್ವೈತ" ಎಂಬ ಕವಿತೆಯನ್ನು ರಚಿಸಿದರು.

**1904 –** ಆಗಾಗ್ಗೆ ಗಾಯಕವಾರರ ಕಾರ್ಯದರ್ಶಿಯ ಕಾರ್ಯ ನಿರ್ವಹಿಸುತ್ತಾ, "ಹುಜೂರ್ ಕಮ್ವಾರ" ಆಗಿ ಕೆಲಸ ಮಾಡಿದರು.

**1904 –** ಯೋಗ ಪ್ರಾಣಾಯಾಮದ ಅಭ್ಯಾಸ ಆರಂಭಿಸಿದರು.

**1905 –** ಜನೆವರಿಯಲ್ಲಿ ಮಹಾವಿದ್ಯಾಲಯದ ಉಪ ಪ್ರಾಂಶುಪಾಲರಾಗಿ ಸ್ಥಾನ ಸ್ವೀಕರಿಸಿದರು.

ಮಾರ್ಚ 3 ರಂದು ಮಹಾವಿದ್ಯಾಲಯದ ಹಂಗಾಮಿ ಪ್ರಾಂಶುಪಾಲರಾದರು.

ಅಕ್ಟೋಬರ್ 16 ರಂದು ಬಂಗಾಲ ವಿಭಜನೆಯು '[ವಂಗ–ಭಂಗ] ಘಟಿಸಿದ ದಿನ.

ವಿಭಜನೆಯ ಮುಂಚೆ ಏರ್ಪಟ್ಟ ಆಂದೋಲನದ ಸಂದರ್ಭದಲ್ಲಿ ಶ್ರೀ ಅರವಿಂದರು 'ಯಾವುದೇ ರಾಜೀ ಇಲ್ಲ' (No compromise) ಮತ್ತು 'ಭವಾನಿ ಮಂದಿರ' ಎಂಬ ಕರಪತ್ರಗಳನ್ನು ಬರೆಯುತ್ತಾರೆ.

**1906 –** ಫೆಬ್ರವರಿ 19 ರಂದು ಸವಲತ್ತು ರಜೆಯನ್ನು ಪಡೆದು ಬಂಗಾಲಕ್ಕೆ ಹೋದರು.

ಮಾರ್ಚ 11 ರಂದು ಕಲ್ಕತ್ತಾದಲ್ಲಿ "ರಾಷ್ಟ್ರೀಯ ಶಿಕ್ಷಣ ಸಭೆ"ಯ ರಚನೆಯಲ್ಲಿ ಉಪಸ್ಥಿತರಿದ್ದರು.

ಜೂನ್ 19 ರಂದು ಬರೋಡಾ ಮಹಾವಿದ್ಯಾಲಯದಿಂದ ಸಂಬಳ ರಹಿತ ರಜೆಯನ್ನು ಒಂದು ವರ್ಷಕ್ಕೆ ಪಡೆದು ಬಂಗಾಳಕ್ಕೆ ಮರಳಿದರು.

ಆಗಸ್ಟ್ 14 ರಂದು ಕಲ್ಕತ್ತಾದಲ್ಲಿ ಶ್ರೀ ಅರವಿಂದರನ್ನು ಪ್ರಾಂಶುಪಾಲರನ್ನಾಗಿ ಹೊಂದಿದ ಬಂಗಾಳ ರಾಷ್ಟ್ರೀಯ ಮಹಾವಿದ್ಯಾಲಯವನ್ನು ತೆರೆಯಲಾಯಿತು.

**1907 –** ಆಗಸ್ಟ್ 23 ರಂದು ಬಂಗಾಳ ರಾಷ್ಟ್ರೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು.

"ವಂದೇ ಮಾತರಂ"ನ ದಂಗೆಯ ಸಂದರ್ಭದ ನಂತರ, ಶ್ರೀ ಅರವಿಂದರು ಬಂಗಾಳದಲ್ಲಿನ ರಾಷ್ಟ್ರೀಯ ರಾಜಕೀಯ ಪಕ್ಷದ ನಾಯಕರಾಗಿ ಮುಂದೆ ಬಂದರು.

ಡಿಸೆಂಬರ್ 27ರಂದು ಅಧಿವೇಶನ ಎರಡನೆಯ ದಿನದಂದು, ಶ್ರೀ ಅರವಿಂದರು ಕಾಂಗ್ರೇಸ್ ವಿಭಜನೆಯಾಗುವಂತಹ ಆದೇಶವನ್ನು ನೀಡಿದರು.

**1908 –** ಜನೆವರಿ ಬರೋಡದಲ್ಲಿ ಮಹಾರಾಷ್ಟ್ರದ – ಯೋಗಿಯಾದ "ವಿಷ್ಣು ಭಾಸ್ಕರ್ ಲೇಲೆ"ಯವರನ್ನು ಭೇಟಿಯಾದರು. ಲೇಲೆಯವರ ನಿರ್ದೇಶನಗಳನ್ನು ಅನುಸರಿಸುತ್ತಾ, ನಿಶ್ಚಲ ನೀರವ ಬ್ರಹ್ಮನ ಅನುಭಾವವನ್ನು ಹೊಂದುವ ಸಂಪೂರ್ಣ ಮಾನಸಿಕ ನಿಶ್ಚಲ ನೀರವತೆಯನ್ನು ಹೊಂದಿದರು.

ವಿವಿಧ ಪ್ರದೇಶಗಳಲ್ಲಿ ಹದಿನೆಂಟು ಸಾರ್ವಜನಿಕ ಭಾಷಣ ನೀಡಿದರು.

ಮೇ 2 ರಂದು ಅವರ ಸಹೋದರ ಬರಿಂದ್ರ ಮುಂದಾಳತ್ವದ ಗುಂಪಿನ ಭಯೋತ್ಪಾದಕ ಚಟುವಟಿಕೆಯಲ್ಲಿ ಶ್ರೀ ಅರವಿಂದರು ಭಾಗಿಯಾಗಿದ್ದಾರೆಂದು, "ಆಲಿಪುರ ಬಾಂಬ್ ಪ್ರಕರಣ"ದಲ್ಲಿ ಬಂಧಿಸಲಾಯಿತು.

ಮೇ 5 ರಂದು ಆಲಿಪುರದ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ಮೇ 5 1908 ರಿಂದ ಮೇ 6 1909 ರವರೆಗೆ ಆಲಿಪುರದಲ್ಲಿ ವಿಚಾರಣಾಧೀನ ಖೈದಿಯಾಗಿದ್ದರು. ಗೀತೆ ಮತ್ತು ಉಪನಿಷತ್ತುಗಳನ್ನು ಓದುತ್ತಾ ಮತ್ತು ಧ್ಯಾನ ಮತ್ತು ಯೋಗಾಭ್ಯಾಸದಲ್ಲಿ ತಮ್ಮ ಸಮಯ ಕಳೆಯುತ್ತಿದ್ದರು. ಅಂತರ್ಗತ ದೈವವೇ (ಶ್ರೀಕೃಷ್ಣ) ಎಲ್ಲಾ ಅಸ್ತಿತ್ವವಾಗಿ ಮತ್ತು ಎಲ್ಲಾದರೊಳಗೆ ಇರುವುದು ಅದೇ ಎಂಬ ಸಾಕ್ಷಾತ್ಕಾರ ಪಡೆದರು. (ಇದು 'ಅತಿಮಾನಸ ಐಕ್ಯತೆ'ಯ ಅನುಭಾವ ಎಂದು ಶ್ರೀಮಾತೆಯವರು ಹೇಳಿದ್ದಾರೆ.)

**1909 –** ಮೇ 6 ರಂದು ಪ್ರಕರಣದಲ್ಲಿ ಖುಲಾಸೆಗೊಂಡು ಬಿಡುಗಡೆಯಾದರು.

ಮೇ 20 ರಂದು 'ಉತ್ತರಪಾಡದಲ್ಲಿ ಭಾಷಣ' ಮಾಡಿದರು.

ಜೂನ್ 19 ರಂದು "ಕರ್ಮಯೋಗಿನ್" ಪತ್ರಿಕೆಯು ಮೊದಲ ಹಂಚಿಕೆ–ಯಾಯಿತು, 'ವಾರದ ವಿಮರ್ಶೆ' ಶ್ರೀ ಅರವಿಂದರಿಂದ ಮಾರ್ಗದರ್ಶಿಸಲ್ಪಟ್ಟಿತು, ಮತ್ತು ಹೆಚ್ಚು ಕಡಿಮೆ ಎಲ್ಲ ಪುಟಗಳೂ ಅವರಿಂದಲೇ ಬರೆಯಲ್ಪಡುತ್ತಿತ್ತು.

ವಿವಿಧ ಪ್ರದೇಶಗಳಲ್ಲಿ ಆರು ಭಾಷಣಗಳನ್ನು ನೀಡಿದರು.

ಆಗಸ್ಟ್ 23 ರಂದು ಶ್ರೀ ಅರವಿಂದರಿಂದ ಮಾರ್ಗದರ್ಶಿಸಲ್ಪಟ್ಟ ಮತ್ತು ಬಹುಶಃ ಅವರಿಂದಲೇ ಬರೆಯಲ್ಪಟ್ಟ 'ಧರ್ಮ' ಎಂಬ ಬೆಂಗಾಳಿ ವಾರ ಪತ್ರಿಕೆ ಪ್ರಾರಂಭವಾಯಿತು.

ಅಕ್ಟೋಬರ್ 18ರಂದು 'ಧರ್ಮ' ಪತ್ರಿಕೆಯಲ್ಲಿ 'ದುರ್ಗಾ ಸ್ತೋತ್ರ'ದ ಪ್ರಕಟಣೆಯಾಯಿತು.

**1910 –** ಫೆಬ್ರವರಿಯಲ್ಲಿ ಕಲ್ಕತ್ತಾವನ್ನು ತೊರೆದು ಭಾರತದ ಫ್ರೆಂಚ್ ವಸಹಾತುವಾದ ಚಂದ್ರ ನಗರಕ್ಕೆ ತೆರಳಿದರು.

ಮಾರ್ಚ 31ರಂದು ಚಂದ್ರ ನಗರಕ್ಕೆ ಹೋಗುವದಕ್ಕಾಗಿ ಕಲ್ಕತ್ತಾ ತೊರೆದರು.

ಏಪ್ರಿಲ್ 1ರಂದು 'ಎಸ್ ಎಸ್ ಡುಪ್ಲೆಕ್ಸ್' ಮೂಲಕ ಪಾಂಡಿಚೇರಿಗೆ ಪ್ರಯಾಣಿಸಿದರು.

ಏಪ್ರಿಲ್ 4ರಂದು ಪಾಂಡಿಚೇರಿಗೆ ತಲುಪಿ 'ಕಾಮ್ಟಿ ಚೆಟ್ಟಿ ಬೀದಿ'ಯಲ್ಲಿರುವ 'ಶಂಕರ್ ಚೆಟ್ಟಿ'ಯವರ ಮನೆಯಲ್ಲಿ ತಂಗಿದರು.

ಬಹಳಷ್ಟು ಬಾರಿ ನಿವಾಸಗಳನ್ನು ಬದಲಾಯಿಸಿದರೂ ಶ್ರೀ ಅರವಿಂದರು ಪಾಂಡಿಚೇರಿಯನ್ನು ತೊರೆಯಲಿಲ್ಲ.

*

**1910 –** ಅಕ್ಟೋಬರ್‌ನಲ್ಲಿ ಪಾವಿಲಿಯನ್ ರಸ್ತೆಯಲ್ಲಿರುವ ಸುಂದರ್ ಚೆಟ್ಟಿಯವರ ಮನೆಗೆ ಹೋದರು.

**1911 –** ಏಪ್ರಿಲ್‌ನಲ್ಲಿ 'ಸೇಂಟ–ಲುಯಿಸ್'ನ ರಸ್ತೆಯಲ್ಲಿರುವ ಹೊಸ ನಿವಾಸದಲ್ಲಿ ವಾಸಿಸಿದರು.

ಆಗಸ್ಟ್ 15 ರಂದು ಪಾಂಡಿಚೇರಿಯಲ್ಲಿ ಮೊದಲ ಬಾರಿಯ ಶ್ರೀ ಅರವಿಂದರವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

**1912 –** ಪರಬ್ರಹ್ಮನ ಸಾಕ್ಷಾತ್ಕಾರ ಪಡೆದರು.

**1913 –** ಏಪ್ರಿಲ್‌ನಲ್ಲಿ ಮಿಶನ್ ರಸ್ತೆಯಲ್ಲಿರುವ ನಿವಾಸಕ್ಕೆ ಸ್ಥಳಾತರಂಗೊಂಡರು.

ಅಕ್ಟೋಬರ್‌ನಲ್ಲಿ ಫ್ರಾಂಕೋಸಿಸ್ ಮಾರ್ಟಿನ್ 9 ರಸ್ತೆಯಲ್ಲಿರುವ ನಿವಾಸಕ್ಕೆ ಸ್ಥಳಾಂತರಗೊಂಡರು. (Guest house)

**1914 –** ಮಾರ್ಚ 29 ರಂದು ಶ್ರೀಮಾತೆ ಮತ್ತು ಶ್ರೀ ಅರವಿಂದರ ಮೊದಲ ಭೇಟಿಯಾಯಿತು.

ಜೂನ್ 21 ರಂದು 'ಆರ್ಯ' ಪತ್ರಿಕೆ ಪ್ರಕಟಣೆಯನ್ನು ಘೋಷಿಸಲಾಯಿತು.

ಆಗಸ್ಟ್ 15 ರಂದು 'ಆರ್ಯ' ಪತ್ರಿಕೆಯ ಮೊದಲ ಸಂಚಿಕೆ ಪ್ರಕಾಶನವಾಯಿತು. 'ದಿವ್ಯ ಜೀವನ', 'ಯೋಗ ಸಮನ್ವಯ', 'ವೇದಗಳ ರಹಸ್ಯ', 'ಈಶೋಪನಿಷದ್'ಗಳ ಮೊದಲ ಕಂತುಗಳನ್ನು ಪ್ರಕಟಿಸಿದರು.

**1915 –** ಫೆಬ್ರವರಿ 21 ರಂದು ಪಾಂಡಿಚೇರಿಯಲ್ಲಿ ಶ್ರೀಮಾತೆಯವರ ಮೊದಲ ಹುಟ್ಟುಹಬ್ಬ ಆಚರಿಸಲಾಯಿತು.

ಫೆಬ್ರವರಿ 22 ಶ್ರೀಮಾತೆಯವರು ಫ್ರಾನ್ಸ್‌ಗೆ ಪ್ರಯಾಣ ಆರಂಭಿಸಿದರು.

**1916 –** ಶ್ರೀಮಾತೆಯವರು ಫ್ರಾನ್ಸ್‌ನಿಂದ ಜಪಾನ್‌ಗೆ ಹೋದರು.

**1918 –** ಡಿಸೆಂಬರ್ 17 ರಂದು ಕಲ್ಕತ್ತಾದಲ್ಲಿ ಮೃಣಾಲಿನಿ ಘೋಷರವರು ಇಹಲೋಕ ತ್ಯಜಿಸಿದರು.

**1920 –** ಏಪ್ರಿಲ್ 24 ರಂದು ಶ್ರೀಮಾತೆಯವರು ಜಪಾನ್‌ನಿಂದ ಪಾಂಡಿಚೇರಿಗೆ ಮರಳಿಬಂದರು.

ನವೆಂಬರ್ 24 ರಂದು ಶ್ರೀಮಾತೆಯವರು ಶ್ರೀ ಅರವಿಂದರು ನೆಲೆಸಿದ್ದ ರು.ಫ್ರಾಂಕೋಸಿಸ್ ಮಾರ್ಟಿನ್‌ನ ಮನೆಗೆ ಹೋದರು.

**1921 –** ಜನೆವರಿ 15 ರಂದು 'ಆರ್ಯ' ಪತ್ರಿಕೆಯ ಕೊನೆಯ ಪ್ರಕಟಣೆ.

**1922 –** ಜನೆವರಿಯಲ್ಲಿ ಶ್ರೀಮಾತೆಯವರು ಶ್ರೀ ಅರವಿಂದರ ಮನೆಯ ನಿರ್ವಹಣೆಯ ಜವಾಬ್ದಾರಿ ತೆಗೆದುಕೊಂಡರು. ಈ ವರ್ಷದಿಂದಲೇ 'ಸಂಜೆ ಮಾತುಗಳು' (Evening talks) ಮತ್ತು 'ಸಾಮೂಹಿಕ ಧ್ಯಾನ'ಗಳನ್ನು ಆಯೋಜಿಸಲಾಯಿತು.

ಸೆಪ್ಟೆಂಬರ್‌ನಿಂದ ಅಕ್ಟೋಬರ್‌ನಲ್ಲಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು 9, ರು–ಡಿ–ಲ–ಮರ್ೈನ್‌ನಲ್ಲಿರುವ ಮನೆಗೆ ಪ್ರವೇಶಿಸಿದರು.

**1926 –** ನವೆಂಬರ್ 24 ರಂದು "ಶ್ರೀಕೃಷ್ಣ ಭೌತಿಕದಲ್ಲಿ ಅವತರಣ"ವಾದ ಕಾರಣ "ಸಿದ್ಧಿ ದಿನ" ಎಂದು ಆಚರಿಸಲಾಯಿತು.

ಶ್ರೀ ಅರವಿಂದರೊಂದಿಗಿನ ಸಂಜೆಯ ಮಾತುಗಳು ಮತ್ತು ಇತರೆ ಎಲ್ಲಾ ಸಂಪರ್ಕಗಳನ್ನು ಸ್ಥಗಿತಗೊಳಿಸಲಾಯಿತು. ಏಕಾಂತತೆಯಲ್ಲಿ ಸಾಧನೆಯ ಸಲುವಾಗಿ ಅವರು ಎಲ್ಲ ಸಂಪರ್ಕಗಳಿಂದ ಸಂಪೂರ್ಣ ನಿವೃತ್ತಿ ಹೊಂದಿದರು. ಆದರೆ ವರ್ಷದಲ್ಲಿ ಮೂರು ಬಾರಿ ಮಾತ್ರ 'ದರ್ಶನ' ನೀಡುತ್ತಿದ್ದರು.

ಆಶ್ರಮವನ್ನು ರೂಪಿಸುವ, ಸಾಧಕರ ಜೀವನವನ್ನು ಸಂಘಟಿಸುವ ಜವಾಬ್ದಾರಿಯನ್ನು ಶ್ರೀಮಾತೆಯವರಿಗೆ ವಹಿಸಲಾಯಿತು.

**1927 –** ಫಬ್ರವರಿ 8 ರಂದು ಶ್ರೀಮಾತೆಯವರು ಮತ್ತು ಶ್ರೀ ಅರವಿಂದರು ರು.ಫ್ರಾಂಕೋಸಿಸ್ ಮಾರ್ಟಿನ್ ಮನೆಗೆ ಚಲಿಸಿದರು ಮತ್ತು ಜೀವನ ಪರ್ಯಂತ ಅಲ್ಲಿಯೇ ಇದ್ದರು.

**1928 –** "ಶ್ರೀಮಾತಾ"(The Mothers) ಪುಸ್ತಕವು ಪ್ರಕಟಣೆಯಾಯಿತು.

**1930–1938 –** ಶ್ರೀ ಅರವಿಂದರ ಮತ್ತು ಮಿತ ಪ್ರಮಾಣದಲ್ಲಿದ್ದ ಅವರ ಶಿಷ್ಯರ ಪತ್ರ ವ್ಯವಹಾರವು ಈ ಸಮಯದಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ಬೆಳೆಯಿತು. ಈ ಬಹಳಷ್ಟು ಪತ್ರ ವ್ಯವಹಾರಗಳನ್ನು 'ಯೋಗದ ಮೇಲಿನ ಪತ್ರಗಳು', 'ಶ್ರೀಮಾತೆಯವರ ಮೇಲಿನ ಪತ್ರಗಳು', 'ಕಾವ್ಯ' , 'ಸಾಹಿತ್ಯ ಮತ್ತು ಕಲೆಯ ಮೇಲಿನ ಪತ್ರಗಳು' ಹಾಗೂ ಇನ್ನಿತರ ಪುಸ್ತಕಗಳ ರೂಪದಲ್ಲಿ ಪ್ರಕಟಿಸಲಾಗಿದೆ.

ಶ್ರೀ ಅರವಿಂದರು 'ಈ ಇಡೀ ವರ್ಷಗಳಲ್ಲಿ ಪದ್ಯ ರಚನೆಯಲ್ಲಿ ಕೆಲಸ ಮಾಡಿದರು, ಮುಖ್ಯವಾಗಿ "ಸಾವಿತ್ರಿ ಮಹಾಕಾವ್ಯ".

**1938 –** ನವೆಂಬರ್ 24 ರಂದು ಶ್ರೀ ಅರವಿಂದರಿಗೆ ಅಪಘಾತವಾಗಿ ಬಲಗಾಲು ಮುರಿದಿತ್ತು.

ಸಾಧಕರೊಂದಿಗಿನ ನಿರಂತರ ಪತ್ರ ವ್ಯವಹಾರ ನಿಂತಿತು. ಕೆಲವೇ ಸಾಧಕರು, ಅವರ ಸೇವಕರೊಂದಿಗೆ ಸಂಪರ್ಕ ಆರಂಭವಾಯಿತು.

**1939 –** ಏಪ್ರಿಲ್ 24 ರಂದು ಮೊದಲ ಬಾರಿ ಶ್ರೀ ಅರವಿಂದರು ದರ್ಶನ ನೀಡಿದರು; ನಂತರ ಇದು ಮುಂದೆ ನಿರಂತರವಾಗಿ "ದರ್ಶನದ ದಿನ"ವಾಗಿ ಆಚರಣೆಯಲ್ಲಿ ರೂಪಿತವಾಯಿತು.

**1939–1940 –** 'ದಿವ್ಯಜೀವನ'ವನ್ನು ಪುನರಾವಲೋಕಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು.

**1940 –** ಸೆಪ್ಟೆಂಬರ್ 19 ರಂದು ಶ್ರೀ ಅರವಿಂದರು ಮತ್ತು ಶ್ರೀಮಾತೆಯರು 'ಎರಡನೇ ಮಹಾಯುದ್ಧ'ದಲ್ಲಿ ಮಿತ್ರ ರಾಷ್ಟ್ರಗಳಿಗೆ ಬೆಂಬಲಿಸುವ ಜಂಟಿ ಘೋಷಣೆ ಮಾಡಿದರು. ಡನ್‌ಕಿರ್ಕನಿಂದ ವಶಪಡಿಸಿಕೊಂಡ ಸಮಯದಿಂದಲೇ ಶ್ರೀ ಅರವಿಂದರು ಮಿತ್ರ ರಾಷ್ಟ್ರಗಳ ಯುದ್ಧ ಪ್ರಯತ್ನಕ್ಕೆ, ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಒದಗಿಸಿದರು.

**1942 –** ಮಾರ್ಚ 31 ರಂದು ಸರ್, ಸ್ಟಫೋರ್ಡ ಕ್ರಿಪ್ಪರ್ ಪ್ರಸ್ತಾಪವನ್ನು ಶ್ರೀ ಅರವಿಂದರು ಸಮ್ಮತಿಸಿದರು. ಬ್ರಿಟಿಷರ ದೂತರಾಗಿ ಈ ಪ್ರಸ್ತಾಪನೆಯ ಮೂಲಕ ಭಾರತವು ಎರಡನೇ ಮಹಾಯುದ್ಧದಲ್ಲಿ ಸಹಕರಿಸಿದರೆ, ಸ್ವಾತಂತ್ರ್ಯ ನೀಡುವುದಾಗಿ ಭರವಸೆಯನ್ನು ನೀಡಿದ್ದರು.

**1943 –** ಡಿಸೆಂಬರ್ 2 ರಂದು "ಆಶ್ರಮ ಶಾಲೆ" ಆರಂಭವಾಯಿತು.

**1947 –** ಆಗಸ್ಟ್ 15 ರಂದು ಶ್ರೀ ಅರವಿಂದರ "75ನೇ ಹುಟ್ಟುಹಬ್ಬದ ದಿನ"ದಂದು "ಭಾರತ ಸ್ವತಂತ್ರ"ವಾಯಿತು. ಅಖಿಲ ಭಾರತ ಆಕಾಶವಾಣಿಯಲ್ಲಿ "ಶ್ರೀ ಅರವಿಂದರ ಸಂದೇಶ" ಪ್ರಸಾರವಾಯಿತು.

**1949 –** ಫೆಬ್ರವರಿ 21 ರಂದು ಶ್ರೀ ಅರವಿಂದರ 'ಸಂದೇಶ'ದೊಂದಿಗೆ ಮೊದಲಬಾರಿಗೆ ದೈಹಕ ಶಿಕ್ಷಣದ ಲಘು ಪ್ರಕಟಣೆಯ ಪ್ರಕಾಶನವಾಯಿತು. ನಂತರದ ಪ್ರಕಾಶನಗಳಲ್ಲಿ ಶ್ರೀ ಅರವಿಂದರ ಇನ್ನೂ ಏಳು ಲೇಖನಗಳು ಕಾಣಿಸಿಕೊಂಡವು. 'ಮದರ್ ಇಂಡಿಯಾ' ಎಂಬ ಸಾಂಸ್ಕೃತಿಕ ಪುನರಾವಲೋಕನವು ಮೊದಲ ಪ್ರಕಾಶನವಾಗಿತ್ತು.

**1950 –** "ಸಾವಿತ್ರಿಯ ಮೊದಲ ಭಾಗ" ಪುಸ್ತಕ ರೂಪದಲ್ಲಿ ಪ್ರಕಟಣೆಯಾಯಿತು.

ಡಿಸೆಂಬರ್ 5 "ಮಹಾಸಮಾಧಿ": ಶ್ರೀ ಅರವಿಂದರು ತಮ್ಮ ದೇಹ ತ್ಯಾಗ ಮಾಡಿದರು.

ಡಿಸೆಂಬರ್ 9 ರಂದು ಶ್ರೀ ಅರವಿಂದರ ದೇಹವನ್ನು ಆಶ್ರಮದ ಅಂಗಳದಲ್ಲಿ ಸಮಾಧಿ ಕೋಣೆಯಲ್ಲಿಟ್ಟರು.

**1951 –** "ಸಾವಿತ್ರಿಯ ಎರಡನೇ ಮತ್ತು ಮೂರನೇ ಭಾಗ"ಗಳನ್ನು ಪ್ರಕಟಣೆ ಮಾಡಲಾಯಿತು.

ಏಪ್ರಿಲ್ 24 ರಂದು "ಶ್ರೀ ಅರೋಬಿಂದೋ ಕೇಂದ್ರ ವಿಶ್ವವಿದ್ಯಾಲಯ"ದ (ಪ್ರಸ್ತುತ "ಶ್ರೀ ಅರಬಿಂದೋ ಅಂತರಾಷ್ಟ್ರೀಯ ಶಿಕ್ಷಣ ಕೇಂದ್ರ" ಎಂದು ಕರೆಯುಲಾಗುತ್ತದೆ) ಉದ್ಘಾಟನೆಯು ಶ್ರೀಮಾತೆಯವರು ಅಧ್ಯಕ್ಷತೆ ವಹಿಸಿದ ಸಭೆ ನಡೆಯಿತು.

1956 – ಫೆಬ್ರವರಿ 29 ರಂದು 'ಅತಿಮಾನಸ ಪ್ರಕಟವಾಯಿತು' (Supramental Manifeststion)

**1962 –** ಶ್ರೀಮಾತೆಯವರು ಬಹಿರಂಗದ ಕಾರ್ಯಗಳಿಂದ ಮುಕ್ತರಾಗಿ ಮಹಡಿಯ ಕೋಣೆಯಲ್ಲಿರಲಾರಂಭಿಸಿದರು.

**1968 –** ಫೆಬ್ರವರಿ 28 ರಂದು 'ಅರೋವಿಲ್ಲೇ ನಗರ'ದ (AUROVILLE) ಸ್ಥಾಪನೆಯಾಯಿತು.

**1972 –** ಆಗಸ್ಟ್ 15 ರಂದು ಶ್ರೀ ಅರವಿಂದರ ಹುಟ್ಟುಹಬ್ಬದ ಶತಮಾನೋತ್ಸವನ್ನು ಜಗತ್ತಿನಾದ್ಯಂತ ಆಚರಿಸಲಾಯಿತು. ಅವರ ಸಮಗ್ರ ಕಾರ್ಯಗಳನ್ನು (Complete work) ಮೂವತ್ತು ಸಂಪುಟಗಳಲ್ಲಿ ಪ್ರಕಟಿಸಲಾಯಿತು.

**1973 –** ನವೆಂಬರ್ 17 ರಂದು "ಶ್ರೀಮಾತೆಯವರ ಮಹಾಸಮಾಧಿ" ಯಾಯಿತು.

ನವೆಂಬರ್ 20 ರಂದು ಶ್ರೀ ಅರವಿಂದರ ಸಮಾಧಿಯ ಸ್ಥಳದಲ್ಲಿಯೇ ಶ್ರೀಮಾತೆಯವರ ದೇಹವನ್ನು ಪ್ರತ್ಯೇಕ ನೆಲಮಾಳಿಗೆಯಲ್ಲಿಡಲಾಯಿತು.

**ಅವತಾರಿಗಳ ಕಷ್ಟಗಳು ಮತ್ತು ಹೋರಾಟಗಳು ಕೇವಲ ನಾಟಕೀಯವೆಂದು ನಾನು ಹೇಳಿದ್ದೆ, ಅವು ನಾಟಕಗಳೇ ಆಗಿದ್ದರೆ, ಬೇರೆಯವರಿಗೆ ಏನೂ ಪ್ರಯೋಜನವಿಲ್ಲ. ಅಥವಾ ಯಾವುದೇ ನಿಜ ಪ್ರಭಾವವನ್ನು ಬೀರುವುದಿಲ್ಲ. ಇದೆಲ್ಲವೂ ಬೇರೆಯವರಿಗೆ ಉಪಯೋಗವಿಲ್ಲದಿದ್ದರೆ ಅಥವಾ ಯಾವುದೇ ನಿಜವಾದ ಪ್ರಭಾವ ಬೀರದಿದ್ದರೆ, ಅವುಗಳನ್ನು ತರ್ಕರಹಿತ ಅಸತ್ಯ ಮತ್ತು ಅರ್ಥವಿಲ್ಲದವುಗಳು ಎಂದು ಹೇಳಬಹುದು. ದೈವವು ಯಾವುದೇ ಕಷ್ಟ ಅಥವಾ ಹೋರಾಟವನ್ನು ತನಗೋಸ್ಕರ ಮಾಡುವುದಿಲ್ಲ. ಒಂದು ವೇಳೆ ಮಾಡಿದರೆ ಅದು ಜಗದ ಭಾರವನ್ನು ಸಹಿಸಲು, ಜನರ ಮತ್ತು ಜಗದ ಸಹಾಯಕ್ಕಾಗಿ ಮಾಡಲಾಗುತ್ತದೆ. ಆಗ ಕಷ್ಟಗಳು ಮತ್ತು ಹೋರಾಟಗಳು ಯಾವುದೇ ರೀತಿಯಿಂದ ಸಹಾಯ ಮಾಡಿದ್ದರೆ, ಅವನ್ನು ನಾವು ನಿಜವೆನ್ನಬಹುದು. ಯಾವುದೇ ನಾಟಕವಾಗಲಿ ಅಥವಾ ಅಸತ್ಯವಾಗಲಿ ಸಹಾಯ ಮಾಡಲು ಸಾಧ್ಯವಿಲ್ಲ. ಅವೂ ಸಾಮಾನ್ಯ ಮನುಷ್ಯರ ಕಷ್ಟ ಮತ್ತು ಹೋರಾಟಗಳಷ್ಟೇ ಸತ್ಯವಾಗಿರಬೇಕು, ದೈವವು ಅವನ್ನು ಧಾರಣೆ ಮಾಡಿಕೊಂಡು**

**ಹಾಗೂ ಅವುಗಳಿಂದ ಹೇಗೆ ಪಾರಾಗಬೇಕೆಂಬ ದಾರಿ ತೋರಿಸುತ್ತದೆ. ಹೀಗಾಗಿರದಿದ್ದರೆ, ದೈವತ್ವವು ಮನುಷ್ಯನ ಪ್ರಕೃತಿಯನ್ನು ಧಾರಣೆ ಮಾಡಿಕೊಳ್ಳುವುದರಲ್ಲಿ ಯಾವುದೇ ಅರ್ಥ, ಉಪಯೋಗ ಮತ್ತು ಮೌಲ್ಯದಿಂದ ಕೂಡಿರುವುದಿಲ್ಲ. ಇಂತಹ ಸರಳವಾದ ಅತಿ ಮುಖ್ಯವಾದ ವಿಷಯವನ್ನು ನೀನು ಅರ್ಥಮಾಡಿಕೊಳ್ಳಲು ಒಪ್ಪದಿರುವುದು ವಿಚಿತ್ರವೆನಿಸುತ್ತದೆ. ಅವತಾರ ಪುರುಷನಾಗಿ ಬಂದು ಅದಕ್ಕೆ ಅರ್ಥವಿಲ್ಲವೆಂದು ಹೇಳಿದರೆ ಅವತಾರಿಯ ಉಪಯೋಗವಾದರೂ ಏನು?**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/417 – ಶ್ರೀ ಅರವಿಂದರು**

---

1. 1878 – ಪ್ಯಾರಿಸ್‌ನಲ್ಲಿ ಫಬ್ರವರಿ 21 ರಂದು ಶ್ರೀಮಾತೆಯವರ ಜನನ

2. **ಅರವಿಂದ ಅಕ್ರ್ಯಾಯ್ಡ ಘೋಷ (Aurobindo Ackroyd Ghose); ಇದು ಶ್ರೀ ಅರವಿಂದರ ಮೊದಲ ಹೆಸರು.** ಶ್ರೀ ಅರವಿಂದರ ತಂದೆ ಸಂಪೂರ್ಣವಾಗಿ ಪಾಶ್ಚಾತ್ಯ ಮನೋಭಾವವನ್ನೇ ಹೊಂದಿದ್ದರು. ಹೀಗಾಗಿ ಶ್ರೀ ಅರವಿಂದರಿಗೆ ಈ ರೀತಿಯ ಆಂಗ್ಲ ವಿಶೇಷಣದ ಹೆಸರನ್ನು ಕೊಟ್ಟಿದ್ದರು. ಆಂಗ್ಲ ಭಾಷೆಯಲ್ಲಿ ಈ 'ಅಕ್ರಾಯ್ಡ್' ಪದಕ್ಕೆ 'ಪ್ರಕೃತಿಯನ್ನು ಆತ್ಯಂತಿಕವಾಗಿ ಆರಾಧಿಸುವ ಮತ್ತು ಸ್ವಾತಂತ್ರ್ಯದ ತೀವ್ರ ಅಭೀಪ್ಸೆ ಹೊಂದಿ ಅದನ್ನು ಅರಸುವ ಮನೋಭಾವವನ್ನು ರೂಪಿಸುತ್ತದೆ' ಎನ್ನುವ ಅರ್ಥವಿದೆ. ಬಾಹ್ಯ ಚಟುವಟಿಕೆಗಳಿಂದ ಮುಕ್ತರಾಗಿ, ಸ್ವತಂತ್ರ ಮಾರ್ಗದಲ್ಲಿ, ನಿರ್ಣಾಯಕ ಹಾಗೂ ರಹಸ್ಯಮಯ ಸಾಧನೆಯನ್ನು ಮಾಡುವ ಮನೋಭಾವವೆಂತಲೂ ಇದಕ್ಕೆ ಅರ್ಥವ್ಯಾಪ್ತಿ ಇದೆ.

ಶ್ರೀ ಅರವಿಂದರಿಗೆ ನಾಮಕರಣ ಮಾಡುವ ಸಂಧರ್ಭದಲ್ಲಿಯೇ ಇಟ್ಟ ಹೆಸರು ಇದಾಗಿದೆ. ಇಂಗ್ಲಂಡನಲ್ಲಿ ಶಾಲೆಗಳಲ್ಲಿಯೂ ಇದೇ ಹೆಸರಿನಲ್ಲಿ ದಾಖಲಿಸಲಾಗಿದೆ,

ಆದರೆ ಶ್ರೀ ಅರವಿಂದರು ಇಂಗ್ಲಂಡ್‌ನಿಂದ ಬರುವ ಮುನ್ನ ಈ "ಅಕ್ರಾಯ್ಡ" ಎನ್ನುವ ಉಪಾಧಿಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟರು. ಇದಕ್ಕೆ ಕಾರಣವೆಂದರೆ, ಆಂಗ್ಲ ಭಾಷಾ ವ್ಯವಸ್ಥೆಯಲ್ಲಿ ಈ 'ಅಕ್ರಾಯ್ಡ' ಭೌತಿಕ ಜೀವನದ ಪರಮಾತಿಪರಮ ಸುಖೋಪಭೋಗಳನ್ನೆ ಸೂಚಿಸುವ ಅರ್ಥವಿದೆ. ಪಾಂಡಿಚೇರಿಯ ಶ್ರೀ ಅರವಿಂದ ಆಶ್ರಮದವರು 1972 ರಲ್ಲಿ ಪ್ರಕಾಶನಗೊಳಿಸಿರುವ "Sri Aurobindo On Himself" ಎನ್ನುವ ಗ್ರಂಥದಲ್ಲಿ ಇದರ ವಿವರಗಳಿವೆ. (ಪಿಪಿಕೆ)

# ಶ್ರೀ ಅರವಿಂದರ ಕವನಗಳು

**– ಅನುವಾದ: ಪುಟ್ಟು ಕುಲಕರ್ಣಿ**

## ನಿರ್ವಾಣ

ಲಯಗೊಳಲು ಪ್ರಳಯ, ಆದರೂ ಮೌನ ನಿಶ್ಶಬ್ದ ಮಾತ್ರ ಉಳಿದು,
ಚಿತ್ತದಿಂದೀಗ ಮುಕ್ತಿಗೊಳುತ ಮನ, ದುಃಖವನು ಮರೆತ ಹೃದಯ
ನಶ್ವರವು ಈಗ ವಿಶ್ವಾಸದಲ್ಲಿ ಪ್ರಗತಿಗೊಳುವ ಸಮಯ;
ನಾನೆಂಬುದಲ್ಲಿ ಇಲ್ಲ ನನ್ನತನ, ಜ್ಞಾತ–ಅಜ್ಞಾತ ಭಾವವಳಿದು.

ಈ ನಗರವೀಗ, ಬರಿ ನೆರಳ–ಚಿತ್ರ ಧ್ವನಿಯಿರದ ಮೂಕ–ಲೋಕ
ಇಲ್ಲದುದ ಬಯಸಿ, ತೇಲಿ ತಾ; ಉಪಶಮನವಿರದ ರೂಪಗಳಲಿ
ಧಾರೆಯಿದು, ಚಲನಚಿತ್ರದಾ ಶೂನ್ಯ ರೂಪಗಳು; ಪಟದ ಹಾಗೆ
ಉದ್ಘಾಟಗೊಳಲು, ದಂಡೆ ತಾನಿರದ ಕೊಲ್ಲಿಯಲಿ ಸೃಷ್ಟಿ ಲೋಕ.

ಅಪರಿಮಿತ ವ್ಯಾಪ್ತ ಶಾಶ್ವತವು ಮಾತ್ರ ತಾನೀಗ ಸ್ಥಿತವು ಇಲ್ಲಿ,
ವಿಸ್ಮಯದ ಬೃಹತ್ ಶಾಂತಿ, ಆಕಾರಗೊಳದೆ, ನಿಶ್ಚಲದಿ,
ಪರ್ಯಾಯವಿಡುತ ಸರ್ವಕೂ ಈಗ, ನಾನಿದ್ದೆ ಅಹಂ, ಅಲ್ಲಿ
ನಿರ್ಮಾಯ ಮೌನದಾ ನಾಮರಹಿತ ನಿಶ್ಶೂನ್ಯ ಒಳಗಿನಲ್ಲಿ.
ಅಜ್ಞೇಯದೊಳಗೆ ತಲ್ಲೀಯವಾಗಿ ತಲ್ಲೀನಗೊಳಲುಬಹುದು
ಇಲ್ಲದಿರೆ ಕಾಂತಿಯನಂತತೆಯ ಅರ್ಣವದಿ ಪುಳಕಗೊಳ್ಳಬಹುದು.

*

## ಹೃದ್ಭಾವ–ಘನದ ದೃಷ್ಟಾರ

ಹೃದ್ಭಾವಘನದ ದೃಷ್ಟಾರನಿವನು, ಗುಹ್ಯಗಳ ದಿವ್ಯ–ಪ್ರಭುವು,
ದೇವನಾ ಹೃದಯದಿಂದುದಿತ ಪ್ರೇಮದಾ ಗುಪ್ತ ಚಿಲುಮೆ ತಾನು,
ಪದದ ಗುರುತಿರದ ಕಾಲ–ಗತಿಗಳಾ ಪಥಗಳನು ಸ್ಪಂದಗೊಂಡು.
ವಿಜ್ಞಾನಘನದ ಅರ್ಣವದಿ ಹೊಮ್ಮಿ ಪುಟಿಪುಟಿದ ಮಿಂಚು–ಶಬ್ದ
ದಿವ್ಯೋ–ಲೋಕದಾ ತಟಗಳನು ತೊಳೆಯೆ ನಿನ್ನಾತ್ಮ ಭರತ–ತೆರೆಯು.

ಚಿಂತನಗಳೆಲ್ಲ ಕುದಿ–ಪಾಕ, ಮನುಕುಲದ ತಮದಿ ಬರಿದೊ ದಾಟಿ.
ದೇವ–ಬೆಳಗಿನಾ ಗ್ರಂಥದಲಿ ಶುಭ್ರ–ನಕ್ಷತ್ರ–ಲಿಪಿಗಳುದಿಸಿ
ಮೃಣ್ಮಯದ ಮಂದ್ರ–ಮಕ್ಕಳಿಗೆ ನಿತ್ಯ ಪುಟ–ಪುಟದಿ ಲಭ್ಯಗೊಳಿಸಿ.

*

## ಸ್ವರ್ಣ ಜ್ಯೋತಿ

ನನ್ನ ಸಾವಿರದ–ದಳದ–ತಾವಿನೆಡೆ ಅವತರಣ ಸ್ವರ್ಣಜ್ಯೋತಿ
ಧೂಸರದ ಛಾಯೆ ತುಂಬಿದ್ದ ಮನಸುಗಳಿಗೀಗ ಸೂರ್ಯ–ಕಾಂತಿ
ಪ್ರಜ್ಞಾನ ಸಮತೆ ಆವರಣಗೊಳಲು ಮರುಧ್ವನಿಯ ನವ್ಯ ತೇಜ
ಘನಶಾಂತ ಸಾಂತ ಉತ್ಕ್ರಾಂತ ಜ್ವಾಲೆ ಮಿನಿಮನುಗು ನಿತ್ಯ ಓಜ

ವೈಖರಿಯ ಸ್ವರ್ಣಕಾಂತಿಯದು ಈಗ ಕಂಠದಲಿ ಬೆಳಗಿ ಬರಲು
ನನ್ನ ಧ್ವನಿಯೆಲ್ಲ ದಿವ್ಯನಾದದಲಿ ಅಲೆಯಲೆಯ ರೂಪವಿರಲು
ನಿನ್ನ ಹೃನ್ಮನದ ದಿವ್ಯಗಾನವದು ನನಗೊಂದು ಪಾಠವಾಗಿ;
ಅಮೃತದಲಿ ಮಿಂದು ಅಮೃತವನು ಸವಿದ ಧ್ವನಿಯೆಲ್ಲ ನನ್ನದಾಗಿ,

ಆ ಸ್ವರ್ಣಜ್ಯೋತಿ ತಾನಿಳಿದು ಬಂತು ಈ ನನ್ನ ಹೃದಯದಲ್ಲಿ
ಶಾಶ್ವತದ ಜೊತೆಗೆ ನನ್ನ ಉಸಿರುಸಿರ ಮೇಳೈಸಿ ನಿತ್ಯದಲ್ಲಿ;
ಬೆಳೆಬೆಳೆದು ನಿಂದು ದೇವಳದ ತೆರದಿ ಎಲ್ಲೆಡೆಗೆ ನಿನ್ನ ಕಲೆಯು
ಸರ್ವ ಸರ್ವಸ್ವ ಮಿಡಿತ–ಮಿಡಿತಗಳು ನಿನ್ನೆಡೆಗೆ ನಿತ್ಯ ಝರಿಯು

ಆ ಸ್ವರ್ಣಜ್ಯೋತಿ ತಾನಿಳಿದು ಬಂತು ಈ ಪುಟ್ಟ ಪಾದದೆಡೆಗೆ
ನನ್ನ ಮೂಲವಿದು ನಿನ್ನ ಆಟಕ್ಕೆ ಜೊತೆಗೀಗ ಪೀಠವಾಗೆ

**– ಶ್ರೀ ಅರವಿಂದರು**

*

## ಮಹತ್–ಯೋಜನೆ

ಜೀವನದ ಲೋಭದಾಕ್ರಂದಗಳಿಗೆ ನಾನೀಗ ಸಿಲುಕದಿರುವೆ,
ಅವಳ ಸುಖ–ದುಃಖ, ಅವಳ ಆ ಮೋಡಿ, ಆ ಸ್ಮಿತದ ತಂತು–ಮೋದ
ಶಾಂತಗೊಂಡಿಹವು ಮಾಯಕದ ಚಣದಿ ಅಲೆಯೆಲೆಯ ವೇಣು ನಾದ
ಜೊತೆಗಿದೋ ರೂಪ ಮತ್ತಿದೋ ರಂಗು,ಸೂಕ್ಷ್ಮ ಆನಂದ ಪರಮ
ಶ್ರುತಿಗೊಳುವೆ ನಾನು, ನನ್ನಾತ್ಮ ವ್ಯಾಪ್ತ ಏಕಾಂತದೊಳಗೆ ಈಗ
ಮನುಜ ತುಟಿಗಳಿವು ಮೌನವಾಗಿರಲು ಆ ವಾಣಿ ಉದಿತಗೊಂಡು
ನಿರ್ವಿಶೇಷದಾ ಪರಮದಚ್ಚರಿಯ ಸಂಗತವ ಬಯಸಿ ನಾನು.

ಶಾಶ್ವತದ ಘನದ ಶಾಂತಿಯಿಂದೀಗ ಉದಿತಗೊಳುತ ನಾನು.
ಮನುಜನಾತ್ಮದಲಿ ಅಂತರಂಗದಲಿ ಈ ಬಯಕೆ ಬೇಕು ಈಗ
ಮೇಲ್ಮೇಲೆ ಕುಣಿವ ವೈಭವಕೆ ತೃಪ್ತಿ ತಾನಿರದು ಎಂದಿಗೂನು;
ಜೀವನಕೆ ಮತ್ತೆ ಮನಕೀಗ ಅವುಗಳಾ ವೈಭವದ ಜೊತೆಗೆ ವಾದ.
ಸುವಿಶಾಲ ವ್ಯಾಪ್ತ ವಿಷಯ–ವಿನ್ಯಾಸಕೀಗ ಮೊದಲ ಪರಿಚಯವು
ಅಲೌಕಿಕದ ಯೋಜನೆಗೆ ಇರುವ ಸಂದೇಹಪೂರ್ಣ ರೂಪು–ರೇಖೆ
ಆ ಪರಮ ಲಿಖಿತ ಈ ಮಹಾಕಾವ್ಯಕೀಗಿದೋ ಮುನ್ನುಡಿಯ ಹಂತ ತಾನು.

**– ಶ್ರೀ ಅರವಿಂದರು**

# ಶ್ರೀ ಅರವಿಂದರ
# 'ವೇದ ರಹಸ್ಯ'

**– ಅನುವಾದ: ಪುಟ್ಟು ಕುಲಕರ್ಣಿ**

## 1

### ಸಮಸ್ಯೆ ಮತ್ತು ಅದರ ಪರಿಹಾರ

ವೇದದ ರಹಸ್ಯ[1]ವೆನ್ನುವ ವಿಷಯ ನಿಜವಾದುದೇ? ಅಥವಾ ಈಗಲೂ ಇದು ರಹಸ್ಯವಾಗಿಯೇ ಉಳಿದಿದೆಯೇ?

ಆಧುನಿಕ (ಪ್ರಚಲಿತ) ಪರಿಕಲ್ಪನೆಗಳ ಪ್ರಕಾರವಾಗಿ ಗಮನಿಸಿದರೆ, ಈ ಪ್ರಾಚೀನ ಅದ್ಭುತದ ಹೃದ್ಗತವನ್ನೇ ಸಂಪೂರ್ಣವಾಗಿ ಕಿತ್ತು ಹಾಕಲಾಗಿದೆ ಮತ್ತು ಎಲ್ಲರೂ ಇದನ್ನೇ – ಅಂದರೆ ಕಿತ್ತು ಹಾಕಿರುವ ಸ್ಥಿತಿಯನ್ನೇ – ಗುರಿಯಿಟ್ಟು ವೀಕ್ಷಣೆ ಮಾಡುವಂತೆ ರೂಪಿಸಲ್ಪಡಲಾಗುತ್ತಿದೆ. ಇನ್ನೊಂದು ರೀತಿಯಲ್ಲಿ, ವೇದಕ್ಕೆ ಮೊದಲಿನಿಂದಲೂ ರಹಸ್ಯವೆನ್ನುವ ವಿಷಯವೇ ಇರಲಿಲ್ಲ ಎನ್ನುವ ಭಾವವೂ ಇತ್ತೇ ಎನ್ನುವ ವಿಷಯದಲ್ಲಿಯೂ ಜಿಜ್ಞಾಸೆಗಳಿವೆ. ವೇದದ ನಾದಮಯ ಋಕ್‌ಗಳೆಲ್ಲವೂ, ಪ್ರಾಚೀನ ಕಾಲದ ಜನಾಂಗದವರು ತ್ಯಾಗ/ಬಲಿ/ಸಮರ್ಪಣೆಗಾಗಿ ರಚಿಸಿದ ರಚನೆಗಳಾಗಿದ್ದು, ಅದರಲ್ಲೂ ಬರ್ಬರ ಜನಾಂಗದವರು ತಮ್ಮ ತಮ್ಮ 'ಪ್ರಾಯಶ್ಚಿತ್ತಕಾಗಿ ರೂಪಿಸಿಕೊಂಡಿದ್ದ ವಿಧಿ–ವಿಧಾನಗಳ'ನ್ನು ಆಚರಿಸುವ ಸಲುವಾಗಿ, ಅಂತಹ ಸಂದರ್ಭಗಳಲ್ಲಿ ಮತ್ತು ಸಮಾರಂಭಗಳನ್ನು ಆಚರಿಸುವಲ್ಲಿ ಒಂದು ವ್ಯವಸ್ಥೆಯ ಸ್ವರೂಪದಲ್ಲಿ ರಚಿಸಲ್ಪಟ್ಟಿದ್ದವು, ಅದೂ ನೈಸರ್ಗಿಕ ಶಕ್ತಿಗಳಿಗೆ ವ್ಯಕ್ತಿತ್ವವನ್ನು ಅರೋಪಣ ಮಾಡಿ ಪ್ರಾರ್ಥಿಸಿದ ಮತ್ತು ಸಂದಿಗ್ಧ ಸ್ಥಿತಿಯಲ್ಲಿದ್ದ ಅರೆಬರೆಯ ರಚನೆಗಳಾಗಿರುವ ಪುರಾಣಗಳ ಮೂಲಕ ಹಾಗೂ ಇನ್ನೂ ಪರಿಪಕ್ವಗೊಳ್ಳದೇ ಕಚ್ಚಾ ಸ್ಥಿತಿಯಲ್ಲಿಯೇ ರೂಪಣೆಗೊಂಡಿದ್ದ ಖಗೋಲೀಯ ವಿಷಯಗಳ ಕುರಿತ ಬೆಡಗಿನ ಸಂಗತಿಗಳಂತಾಗಿ ಪ್ರಾರ್ಥಿಸಿದ ಹಂತಗಳಾಗಿದ್ದವು, ಎನ್ನುವ ವಿಷಯವನ್ನೇ ಪ್ರಚಾರಗೊಳಿಸುತ್ತ ಬರಲಾಯಿತು.

ಆದರೆ ಇತ್ತೀಚಿನ (ಕೊನೆಕೊನೆಯ) ಋಕ್‌ಗಳಲ್ಲಿ ಕಂಡುಬರುವ – ಹಾಗೆಂದು ಪರಿಭಾವಿಸಲಾಗುತ್ತಿದೆ ಮಾತ್ರ – ಮನಶ್ಶಾಸ್ತ್ರದ ಸೂಕ್ಷ್ಮಾತಿಸೂಕ್ಷ್ಮ ವಿಶ್ಲೇಷಣೆಯ ಮತ್ತು ನೈತಿಕ ವಿಚಾರಗಳ ಕುರಿತಾಗಿ – ಇವುಗಳನ್ನು ಯೋಚಿಸಿರುವಂತೆ,

ಎರವಲು ತಂದವುಗಳಾಗಿವೆ! ಅದೂ ದರೋಡೆಕೋರರು, ವೇದದ ವಿರೋಧಿಗಳು ಎಂದೆಲ್ಲಾ ವರ್ಗೀಕರಿಸಲ್ಪಟ್ಟಿರುವ ದ್ರವಿಡ ಸಮುದಾಯದಿಂದ – ಅದರಲ್ಲೂ ಸರ್ವತ್ರವಾಗಿ ಮುಕ್ತವಾಗಿ ಅವರಿಗೆ ಶಾಪ ಕೊಡುತ್ತಲೇ ಬಂದದ್ದನ್ನೇ ಹೇಳುತ್ತ, ಇಂತಹ ಊಹಾಪೋಹಗಳೇ[2] ಬೆಳೆದುಕೊಂಡು ಬರುವಂತೆ ಪ್ರಪ್ರಥಮ ಬೀಜಾರೋಪಣೆಯನ್ನು ಪೋಷಿಸಿಕೊಂಡೇ ಬರಲಾಯಿತು.

ಇಂತಹ ಆಧುನಿಕ ವಿಚಾರಧಾರೆಯು, ಇತ್ತೀಚಿನ ಶತಮಾನಗಳಲ್ಲಿ ತೀವ್ರಾತಿತೀವ್ರವಾಗಿ ಉತ್ಕ್ರಾಂತಿಗೊಂಡ ಕ್ರೂರ, ಅನಾಗರಿಕ, ಅಸಂಸ್ಕೃತ ಜನ ಸಮುದಾಯದಿಂದ ರೂಪಿಸಿ, ಹೇರಲ್ಪಡಲಾಯಿತು, ಜೊತೆಜೊತೆಗೆ ಇಂತಹದೇ ವಿಮರ್ಶಾತ್ಮಕ ಅಧ್ಯಯನಕ್ಕಾಗಿ ಆಮದು ಮಾಡಿಕೊಳ್ಳಲ್ಪಟ್ಟ ಪರಿಕಲ್ಪನೆಗಳ ಮೂಲಕವೇ ಚಿಂತನೆ ನಡೆಸುತ್ತ, ಅದಕ್ಕೆ ವಿಜ್ಞಾನದ ಅನೇಕ ಪ್ರಕಾರಗಳ ಒತ್ತಾಸೆಯ ಮೂಲಕವೂ ಎತ್ತಿ ಹಿಡಿಯುವ ಕ್ರಿಯೆಯು ಮುಂದುವರೆಯಿತು. ಆದರೆ ದುರ್ದೈವದ ಸಂಗತಿ ಎಂದರೆ, ಈ ರೀತಿಯಲ್ಲಿ ರೂಪಿಸಲ್ಪಟ್ಟಿರುವ ಪರಿಕಲ್ಪನೆಗಳಾಗಲೀ ಅಥವಾ ವಿಜ್ಞಾನವಾಗಲಿ ಇನ್ನೂ ಶೈಶವಾವಸ್ಥೆಯಲ್ಲಿಯೇ ಇವೆ. ಅದಕ್ಕಿಂತ ಹೆಚ್ಚಾಗಿ ಕೇವಲ ಊಹಾತ್ಮಕ ಹಂತದಲ್ಲಿಯೇ ಇದ್ದು ಅದರ ಅನುಷ್ಠಾನ, ಫಲಿತಾಂಶಗಳ ಸಲುವಾಗಿಯೂ ಸಹಿತ ಇದೇ ರೀತಿಯ ಕಾಲ್ಪನಿಕ ಧೋರಣೆಯನ್ನೆ ರೂಪುಗೊಳಿಸುತ್ತ ಬರಲಾಯಿತು. ಈ ರೀತಿಯಾಗಿ ನಡೆದ ಪ್ರಕ್ರಿಯೆಯಲ್ಲಿ ತುಲನಾತ್ಮಕ ಭಾಷಾಶಾಸ್ತ್ರ, ತುಲನಾತ್ಮಕ ಪುರಾಣ ಶಾಸ್ತ್ರ ಮತ್ತು ಮತಗಳ ತುಲನಾತ್ಮಕ ಅಧ್ಯಯನಗಳು ಮೂಲ ಕಾರಣವಾದವು.

ಈ ಲೇಖನದ ಅಧ್ಯಾಯಗಳಲ್ಲಿ, ಈ ಪ್ರಾಚೀನ ಸಮಸ್ಯೆಯೊಂದಕ್ಕೆ ಒಂದು ನವೀನ ದೃಷ್ಟಿಕೋನವನ್ನು[3] ಸೂಚಿಸುವ ಉದ್ದೇಶ ನನ್ನದಾಗಿದೆ. ಅದಕ್ಕಾಗಿ ಈಗಾಗಲೇ ರೂಪಿತಗೊಂಡಿರುವ ಇಂತಹ ವಿಷಯಗಳಿಗೆ ನಕಾರಾತ್ಮಕವಾದ ಮತ್ತು ವಿಘ್ನಕಾರಕವಾದ, ವಿರೋಧವಾದ ಯಾವುದೇ ವಿನ್ಯಾಸವನ್ನೂ ನಾನು ಇಲ್ಲಿ ರೂಪಿಸಲು ಯತ್ನಿಸಿಲ್ಲ; ಆದರೆ, ನನ್ನ ಅಭಿಪ್ರಾಯವನ್ನು ಸರಳಾತಿಸರಳವಾಗಿ, ರಚನಾತ್ಮಕವಾಗಿ ಮತ್ತು ಸ್ವೀಕಾರಾರ್ಹವಾಗಿರುವಂತೆ ಸಲ್ಲಿಸಲು, ಇಂದು ಸುದೀರ್ಘವಾದ ಮತ್ತು ಅದರಲ್ಲಿ ಒಂದು ಹಂತದವರೆಗೆ ಒಂದು ಬಲವಾದ ಅಡಿಗಟ್ಟಿನ ಮೇಲೆ ರೂಪಣೆಗೊಂಡ ಪರ್ಯಾಯ ಊಹನೆಯೊಂದನ್ನೇ ಇಲ್ಲಿ ರೂಪಿಸುತ್ತಿದ್ದೇನೆ. ಅದು ಈ ಐತಿಹಾಸಿಕ ವಿಷಯದ ಒಂದು ಸಮಸ್ಯೆಗೆ ಅಥವಾ ಹೆಚ್ಚಿನ ಪ್ರಮುಖ ಸಮಸ್ಯೆಗಳಿಗೆ – ಅಂದರೆ ಪ್ರಾಚೀನ

ಕಾಲದ ಈ ವೈಚಾರಿಕ ವಿಷಯಗಳಿಗಾಗಿ ಅಪರಿಪೂರ್ಣವಾಗಿಯೇ ಪರಿಹಾರ ರೂಪಿಸಿದ ಸರ್ವೇಸಾಧಾರಣ ತತ್ತ್ವಗಳಿಗೆ, ಸಮಸ್ಯೆಗಳಿಗೆ ಪರಿಹಾರದ ಬೆಳಕು ಸೂಚಿಸುವ ಸಲುವಾಗಿ ಮಂಡಿಸುತ್ತಿದ್ದೇನೆ.

ನಾವು ಈಗಾಗಲೇ ಕಂಡುಕೊಂಡಿರುವಂತೆ ಇರುವ, ಯುರೋಪಿಯನ್ನ ಸಂಶೋಧಕರು, ವಿದ್ವನ್ಮಣಿಗಳು ಅಂದಾಜಿಸಿರುವಂತೆ ನೈಜವಾದ ಹಾಗೂ ಇದೊಂದೇ ಕೇವಲ ಮೂಲವೇದ ಎನ್ನುವ ಕಲ್ಪನೆಯ ಪ್ರಕಾರವಾಗಿಯೇ, ಇದರಲ್ಲಿ ರೂಪಿಸಲ್ಪಟ್ಟ ಕೆಲವೊಂದು ಋಕ್‌ಗಳು ಅತ್ಯಂತ ಪ್ರಾಚೀನ ಭಾಷೆಯಲ್ಲಿಯೇ ರೂಪಿಸಲ್ಪಟ್ಟಿವೆ. ಅವುಗಳು ಇಂದಿಗೂ ತಮ್ಮ ಅರ್ಥವನ್ನು ಬಿಟ್ಟುಕೊಡದಂತಹ ಗಡಚು ವಿಷಯಗಳಾಗಿಯೇ ಉಳಿದಿವೆ. ಈ ಭಾಗಗಳು ಸಂಪೂರ್ಣವಾಗಿ ಪ್ರಾಚೀನ ಸ್ವರೂಪದಲ್ಲಿಯೇ ಇದ್ದು, ಇಲ್ಲಿನ ಶಬ್ದಗಳು ನಂತರದ ಅವಧಿಯಲ್ಲಿ ಯಾವುದೇ ಅಧ್ಯಯನದಲ್ಲಿ ಪ್ರವೇಶ ಪಡೆಯಲೇ ಇಲ್ಲ! ಕೆಲವು ಕಡೆ ಪ್ರಯೋಗಿಸಲ್ಪಟ್ಟಿದ್ದರೂ ಸಹಿತ, ಜಾಣ್ತನದ ಕವಚದೊಳಗೇ ಸಂದೇಹಾಸ್ಪದವಾದ ಅರ್ಥದ ವ್ಯುತ್ಪತ್ತಿಯಲ್ಲಿಯೇ ಸಾದರ ಪಡಿಸಲ್ಪಟ್ಟಿವೆ.

ಅದೂ ಅಲ್ಲದೇ ಈ ರೀತಿಯಲ್ಲಿ ಟಂಕಿಸಲ್ಪಟ್ಟ ಶಬ್ದಾರ್ಥಗಳೂ ಸಹಿತ, ಪರಿಹಾರವೇ ದೊರಕದ ಹಂತದ ಅನುಮಾನಗಳನ್ನೇ ಮುಂದಿಡುತ್ತ ಬಂದವು. ಸಂಸ್ಕೃತವು ಹೊಂದಿರುವ ಪಾರಿಭಾಷಿಕ ನೆಲೆಯ ವಿಶಾಲಾರ್ಥವನ್ನು ಒಳಗೊಂಡ ಶಬ್ದ ಸಮುಚ್ಚಯಗಳು ಸಂಸ್ಕೃತದ ಜಾಯಮಾನಕ್ಕೆ ಸರಳವಾಗಿಯೇ ಕಂಡರೂ, ಆಯಾ ಸಂದರ್ಭಕ್ಕೆ ತಕ್ಕಂತೆ ಅರ್ಥವ್ಯಾಪ್ತಿ ಹೊಂದಿರುವ ಗುಣವಿಶೇಷತೆಯಿಂದಾಗಿ, ಇತ್ತೀಚಿನ ದಿಗಳಲ್ಲಿಯೂ ಅರ್ಥೈಸಲ್ಪಡುತ್ತಿರುವ ಅರ್ಥವ್ಯಾಪ್ತಿಯನ್ನೇ ತೋರುವದಕ್ಕೂ ಸಮರ್ಥವಾಗಿವೆ. ಆಧುನಿಕ ಪರಿಭಾಷೆಯಲ್ಲಿ ಚರ್ಚಿಸಲ್ಪಡುತ್ತಿರುವ ಈ ವೇದದ ವಿಷಯಗಳಿಗೆ, ಈ ಅಪಾರ ಪ್ರಮಾಣದ ಶಬ್ದ ಸಮುಚ್ಚಯಗಳು ಅದರಲ್ಲೂ ಸರ್ವೇಸಾಮಾನ್ಯವಾಗಿ ಬಳಸಲ್ಪಡುತ್ತಿರುವ, ಜೊತೆಗೆ ಬಳಕೆಯಲ್ಲಿ ವಿಶಾಲಾರ್ಥವನ್ನೂ ಹೊಂದಿರುವ ಶಬ್ದಗಳು, ತಮಗೆ ಸಂಬಂಧಿಸದ ಸಂಗತಿಗಳ ಮಹತ್ವವನ್ನೂ ಒಳಗೊಂಡಂತೆ ಇರುವ ಅವಕಾಶಗಳೂ ಸಹಿತ ಹೆಚ್ಚಿನ ಪ್ರಮಾಣದಲ್ಲಿವೆ. ನಮ್ಮ ಆಯ್ಕೆಯ ಸಲುವಾಗಿ ಇರುವ ಪ್ರಾಶಸ್ತ್ಯದೊಂದಿಗೆ ವಿಭಿನ್ನವಾಗಿರುವ ರೂಪ–ಭಾವಗಳನ್ನು ಹೊಂದಿರುವ ಇಡೀ ವಾಕ್ಯ ಸಮುಚ್ಚಯಗಳಿಗೆ, ಛಂದೋಬದ್ಧ ಶ್ಲೋಕಗಳಿಗೆ ಮತ್ತೆ ಜೊತೆಗೆ ಸಂಪೂರ್ಣ ವೇದದಲ್ಲಿ ಪ್ರತಿಪಾದಿತವಾಗಿರುವ ಅರ್ಥಕ್ಕೂ ಸಹಿತವಾಗಿ ಹೆಚ್ಚಿನ ಪ್ರಮಾಣದಲ್ಲಿವೆ.

ಕೆಲವು ಸಾವಿರ ವರ್ಷಗಳ ಅವಧಿಯ ಈ ರೀತಿಯ ಬೆಳವಣಿಗೆಯಲ್ಲಿ, ಇಂದಿಗೂ ಪ್ರಮುಖವಾಗಿ ದಾಖಲಿಸಲ್ಪಡಲಾಗುತ್ತಿರುವ ಅಧ್ಯಯನ ಕ್ರಮಾಂಕಗಳಲ್ಲಿ ಗಮನಾರ್ಹವಾಗಿರುವ ಮೂರು ಪ್ರಯತ್ನಗಳಲ್ಲಿ, ಇವೂ ಸಹಿತ ಪರಸ್ಪರ ಏನೇನೂ ಸಂಬಂಧವಿರದಂತೆಯೇ ರೂಪಿಸಲ್ಪಟ್ಟಿರುವ ಅವುಗಳ ವಿನ್ಯಾಸದಲ್ಲಾಗಲೀ, ಫಲಿತಾಂಶಗಳಲ್ಲಾಗಲೀ ಮತ್ತು ಅವುಗಳ ನೀಡಿದ, ನೀಡುತ್ತಿರುವ ಫಲಿತಾಂಶ–ಗಳಲ್ಲಾಗಲಿ ರೂಪಿತಗೊಂಡಿರುವ ಪ್ರಾಚೀನತಾಂಶವನ್ನು ನಿಗದಿಗೊಳಿಸುವ ಹಂತದಲ್ಲಿ ಈ ಮೂರು ರೀತಿಯ ವಿಶ್ಲೇಷಣೆಯನ್ನು ಕಾಣಬಹುದು;

ಪ್ರಥಮವಾಗಿ, ಇತಿಹಾಸ ಪೂರ್ವದ ಅವಧಿಯಲ್ಲಿ, ಅದರಲ್ಲೂ ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳ ಮೂಲಕವೇ ಅರ್ಥವಿವರಣೆಗಳನ್ನು ರೂಪಣೆಗೊಳಿಸುತ್ತಿದ್ದ ಅವಧಿ;

ಎರಡನೆಯದಾಗಿ, ಇದೀಗ ನಾವು ಆಧಾರವಾಗಿರಿಸಿಕೊಂಡಿರುವಂತೆ – ಅದರಲ್ಲೂ ಸಂಪೂರ್ಣವಾಗಿ ಭಾರತೀಯ ಪ್ರಾಚೀನ ಸಂಪ್ರದಾಯಬದ್ಧ ಪ್ರತಿಪಾದನೆಯನ್ನು ನೀಡಿದ, ಭಾರತೀಯ ಸಂಸ್ಕೃತಿಯ ಪ್ರಕಾಂಡ ಪಂಡಿತ ಸಾಯಣಾಚಾರ್ಯರ ಪ್ರಯತ್ನ;

ಮೂರನೇಯದಾಗಿ, ಪ್ರಸ್ತುತ ನಮ್ಮದೇ ಅವಧಿಯಲ್ಲಿ ಅಪರಿಮಿತ ಶ್ರಮದೊಂದಿಗೆ ತುಲನಾತ್ಮಕವಾಗಿ ಜೊತೆಗೆ ಊಹನಾತ್ಮಕವಾಗಿ ಪ್ರಸ್ತುತ ಪಡಿಸಿದ ಯುರೋಪಿಯನ್ನ ಪಂಡಿತರು ನೀಡಿರುವ ಅರ್ಥವಿವರಣೆಗಳು. ಇವರಲ್ಲಿ ಕೊನೆಯ ಇಬ್ಬರೂ ಸಾಮಾನ್ಯವಾಗಿ ಒಂದೇ ಗುಣರೂಪದ ಪ್ರತಿಪಾದನೆಯನ್ನು ಜೊತೆಗೆ ಅಷ್ಟೇ ಅಸಾಮಾನ್ಯವಾದ ಅಸಂಬದ್ಧತೆಯನ್ನು ಮತ್ತು ಸಂವೇದನಾಶೀಲತ್ವದ ಕೊರತೆಯಲ್ಲಿಯೇ ಅವರು ಅರ್ಥೈಸಿಕೊಂಡದ್ದನ್ನೇ ಪ್ರತಿಪಾದಿಸಿ, ಅವುಗಳನ್ನೇ ವೇದದ ಅರ್ಥಗಳಿಗೆ ಮುದ್ರೆ ಒತ್ತಿದ್ದಾರೆ.

ಇವುಗಳಿಗೆ ಬೇರೆಯದೇ ಆದ ವಾಕ್ಯಾರ್ಥಗಳನ್ನು ರೂಪಿಸಬಹುದಾಗಿದೆ. ಅಂತಹ ರೂಪಣೆಯು ವೈಚಾರಿಕ ಉತ್ಕ್ರಾಂತಿಯ ಸಹಜ ಗುಣವೂ ಆಗಿರಬಹುದು ಅಥವಾ ಅದಕ್ಕೆ ಆರೋಪಿಸಲ್ಪಟ್ಟಿರುವ ಊಹೆಯೂ ಆಗಿರಬಹುದು; ಇಲ್ಲಿನ ಪದವಿನ್ಯಾಸ, ವಾಕ್ಸರಣಿಯ ಫಲಿತಾಂಶಗಳು, ವಿನ್ಯಾಸದಲ್ಲಿ ಅತ್ಯಾಡಂಬರದಿಂದ ಕೂಡಿದ್ದಲ್ಲಿ, ವರ್ಣನಾತ್ಮಕ ಉಪಾಧಿಗಳ ಮತ್ತು ನಿರುಪಯೋಗಿ ವಿಶೇಷಣಗಳ ಮೂಲಕವೇ ರೂಪಿಸಲ್ಪಟ್ಟಿದ್ದಲ್ಲಿ, ಅತ್ಯಂತ ಕ್ಷೀಣವಾದ ಅರ್ಥವಿದ್ದರೂ ಅಸಾಮಾನ್ಯವಾದ ವಿನ್ಯಾಸದಲ್ಲಿ ವಿಸ್ತರಿಸಿ, ಜೊತೆಗೆ ಆಡಂಬರದ ಅಂಕಿ–ಅಂಶಗಳ,

ಅಭಿವ್ಯಕ್ತಿಯಲ್ಲಿ ರೂಪಣೆಗೊಳಿಸಿ, ಅವುಗಳನ್ನೇ ಜಾಣ್ತನದ ವಾಕ್ಯಗಳೆಂದು ಸಿದ್ಧಾಂತರೂಪಿ ಹೇಳಿಕೆಗಳೆಂದು ಪರಿಗಣಿಸಲಾಗಿದೆ; ಆದರೆ ನಾವು ಯಾವಾಗ ಈ ಛಂದೋಬದ್ಧ ಋಕ್‌ಗಳನ್ನು ಓದಲು ಪ್ರಾರಂಭಿಸುತ್ತೇವೆಯೋ, ಅದಕ್ಕಿರುವ ಅತ್ಯಂತ ಸಹಜಗುಣದ ಸಮಗ್ರತೆಯಲ್ಲಿ ಅಧ್ಯಯನ ಮಾಡುವ ಸಮಯದಲ್ಲಿ, ಸಹಜವಾಗಿಯೇ ಎದುರಾಗುವ ಒಂದು ಸಂಗತಿಯನ್ನು ನಾವು ಗಮನಿಸಲೇಬೇಕಿದೆ. ಭಾರತೀಯ ಸಾಂಸ್ಕೃತಿಕ ಆಯಾಮದ ಪರಂಪರೆಯ ಅಂಶದಿಂದ ಬೇರೆಯದೇ ಆದ ಜನಾಂಗದ ಲೇಖಕರು, ಈ ವಾಙ್ಮಯವು ಹೊಂದಿದ್ದ (ಹೊಂದಿರುವ) ಸುಸಂಗತ ಹಾಗೂ ನಿಸರ್ಗ ಸಹಜ ಅಭಿವ್ಯಕ್ತಿಯ ಅಂಶದಿಂದ ಅವರು ದೂರವೇ ಉಳಿದುಬಿಡುತ್ತಾರೆ. ಅಥವಾ ಆ ವಾಙ್ಮಯವು ಪ್ರತಿಪಾದಿಸುತ್ತಿರುವ ಚಿಂತನದಿಂದ ದೂರವೇ ನಿಂತುಬಿಡುತ್ತಾರೆ.

ಕೆಲವೊಂದು ಚಿಕ್ಕ ಹಾಗೂ ಸಂಕ್ಷೇಪದಲ್ಲಿಯೇ ಅಭಿವ್ಯಕ್ತಿಸಲ್ಪಟ್ಟಿರುವ ಸರಳ ಋಕ್‌ಗಳನ್ನು ಹೊರತುಪಡಿಸಿ, ಉಳಿದಂತೆ ಎಲ್ಲೆಡೆಗೂ ಬಳಸಲ್ಪಡುವ ಭಾಷೆಯನ್ನು ಅರ್ಥೈಸುವಲ್ಲಿ ಒಂದೋ ಮರೆ ಮಾಡಲಾಗಿದೆ ಇಲ್ಲವೇ ಕೃತಕ ಅರ್ಥವನ್ನು ರೂಪಿಸಲಾಗಿದೆ. ಪ್ರತಿಪಾದಿಸಲಾಗಿರುವ ವಿಚಾರಗಳು ಒಂದಕ್ಕೊಂದು ಸುಸಂಬದ್ಧ ಜೋಡಣೆಯಲ್ಲಿ ಇರದಿರುವ ಸ್ಥಿತಿ ಅಥವಾ ಅವುಗಳಲ್ಲಿ ಆ ಅರ್ಥವನ್ನೇ ಒತ್ತಾಯದಲ್ಲಿ ತುಂಬಿ, ಅದನ್ನೇ ಬಲವಾಗಿ ಪ್ರತಿಪಾದಿಸುತ್ತ, ಅದೂ ಅಪ್ಪಳಿಸುವ ರೀತಿಯಲ್ಲಿಯೇ ಅದನ್ನೇ ಸಮಗ್ರತೆ ಎಂದು ಅನುಷ್ಠಾನಗೊಳಿಸುವ ಉದ್ದೇಶದಿಂದಲೇ ಪ್ರತಿಪಾದಿಸಲಾಯಿತು. ಈ ವಿಷಯದಲ್ಲಿ ವಿದ್ವನ್ಮಣಿಗಳೂ ಸಹಿತ ತಮ್ಮ ತಮ್ಮ ಪಠ್ಯದೊಂದಿಗೆ ಪ್ರತಿಪಾದನೆ ಮಾಡುವಾಗ, ಈ ಕೃತ್ರಿಮ ಸೃಷ್ಟಿಯನ್ನೇ ಹೆಚ್ಚಾಗಿ ಅನ್ವಯಿಸುವ ಪ್ರಕ್ರಿಯೆಯನ್ನು, ಮೂಲ ಪ್ರತಿಪಾದನೆಗೆ ಪರ್ಯಾಯವಾಗಿ ಹಾಗೂ ಋಣಸಂದಾಯದಂತೆ ರೂಪಿಸಿದರು. ಇಲ್ಲಿ ನಮಗೆ ಅನುಭವಕ್ಕೆ ಬರುತ್ತಿರುವ ಸಂಗತಿ ಏನೆಂದರೆ, ಅವರು ಈ ರೀತಿಯ ಅಭಿವ್ಯಕ್ತಿಗಳನ್ನು ಅಥವಾ ಪ್ರಕಟನೆಯನ್ನು ಸಾಧ್ಯವಿದ್ದಷ್ಟೂ ರಭಸವಾಗಿಯೇ ಅಪ್ಪಳಿಸುವಂತೆಯೇ ವಿಘಟನಾತ್ಮಕವಾಗಿರುವ ಸಾಮಗ್ರಿಗಳನ್ನೇ ತಮ್ಮ ಚಿಂತನಗಳಲ್ಲಿ ಸೃಷ್ಟಿಗೊಳಿಸುತ್ತಾ, ಅದರಲ್ಲೂ ಅದು ಕೆಲವೊಂದು ನಿರ್ದಿಷ್ಟ ಆಕಾರಗಳಲ್ಲಿಯೇ ಸ್ವರೂಪಸಿದ್ಧವಾಗಿರುವಂತೆ ಮತ್ತು ಅದೇ ಸ್ಥಿತಿಯನ್ನು ಹೊಂದಿರುವಂತೆ ಮತ್ತು ಸ್ಥಿರತೆಯನ್ನು ಹೊಂದಿರುವಂತೆ ರೂಪಿಸಿದ್ದರು ಎಂದು ಭಾವಿಸುವಂತಿಲ್ಲ.

(ಸಶೇಷ)

**ಟಿಪ್ಪಣಿಗಳು:**

1. **ವೇದಗಳು ಪ್ರಕೃತಿ ಸಹಜವಾದ ಜ್ಞಾನ ಸೂತ್ರ**ಗಳಾಗಿ ಮಾನವ ಕುಲಕ್ಕೆ ಭವಿಷ್ಯವನ್ನು ಸೂಕ್ತಗೊಳಿಸುವಲ್ಲಿ ಶಿಕ್ಷಣದ ಸ್ವರೂಪದಲ್ಲಿ ಕಲಿಸಲ್ಪಡುತ್ತಿದ್ದವು. ವಿಶಾಲಾರ್ಥದಲ್ಲಿ ವೇದವೆಂದರೆ ಜ್ಞಾನವೇ ಆಗಿದೆ. ಆದರೆ ವೇದವಿದ್ಯೆಗೆ ಮೊದಲಿನಿಂದಲೂ ವಿರೋಧ ಇದ್ದೇ ಇದೆ. ಹೀಗಾಗಿ ಅದನ್ನು ರಕ್ಷಿಸಿಕೊಳ್ಳುವ ಸಲುವಾಗಿ ನಡೆದ ಘಟನೆಗಳ ಫಲಿತಾಂಶವಾಗಿ, ವೇದವು ನಿಗೂಢವಾಗುತ್ತ ಬಂದಿತೇ ಎನ್ನುವದೂ ಒಂದು ಜಿಜ್ಞಾಸೆಯ ವಿಷಯವಾಗಿದೆ. ಎರಡನೇಯದಾಗಿ, ವೇದದ ಕರ್ಮಕಾಂಡದ ಪ್ರಾಧಾನ್ಯತೆಯಲ್ಲಿ, ಅದು ಆಯಾ ಕಾಲದ ಸಾಮಾಜಿಕ ಒತ್ತಡವಾಗಿತ್ತೋ ಅಥವಾ ಆಡಳಿತದವರನ್ನು ಸಂತುಷ್ಟಗೊಳಿಸುವ ಸಲುವಾಗಿ – ಈಗಲೂ ಅದೇ ರೀತಿಯ ಪರಂಪರೆಯನ್ನು ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ – ರೂಪಿಸಲ್ಪಟ್ಟು ವಿಜೃಂಭಿಸದ ಅವಧಿಯಾಗಿತ್ತೋ ಎನ್ನುವದು ಅಧ್ಯಯನಕ್ಕೆ ಒಳಪಡಬೇಕಿದೆ. ಲಭ್ಯವಿರುವ ದಾಖಲಾತಿ ಮತ್ತು ವಿಶ್ವಾಸಪೂರ್ಣ ಪರಂಪರೆಯ ಪ್ರಕಾರ, ವೇದವ್ಯಾಸ ಈ ಎಲ್ಲ ವೇದಗಳನ್ನು ಸಂಕಲಿಸಿ, ನಾಲ್ಕು ವಿಧದಲ್ಲಿ ವಿಂಗಡಿಸಿ, ಆಯಾ ಆಯಾ ವೇದದ ಪರಂಪರೆಯನ್ನು ಜ್ಞಾನಾಧಾರಿತವಾಗಿಯೇ ಮುಂದುವರೆಸಿಕೊಂಡು ಹೋಗಲು ಪಥವನ್ನು ನಿರ್ಮಿಸಿದ್ದ.

ಇದೀಗ ಲಭ್ಯವಿರುವ ಲಿಖಿತ ದಾಖಲಾತಿಗಳ ಪ್ರಕಾರ, ಆದಿಶಂಕರಾಚಾರ್ಯರು ಈ ವೇದದ ಕರ್ಮಕಾಂಡದ ಪರಂಪರೆಗೆ ಕತುಕರೇಣುವಿನ ರೀತಿಯಲ್ಲಿ ಭಾಷ್ಯವನ್ನು ಬರೆದು, ಅಲ್ಲಿಯವರೆಗೂ ಮರೆಯಾಗಿ ಇದ್ದ, ವೇದದ ಜ್ಞಾನಕಾಂಡದ ಕುರಿತು ಮತ್ತೆ ನವೀನ ಮಾರ್ಗವೊಂದನ್ನು ನಿರ್ಮಿಸಿದರು. ಆದರೆ ಅದು ಮುಂದೆ ಮತ್ತೆ ಅಲ್ಲೋಲ–ಕಲ್ಲೋಲಗೊಂಡ ಸಾಮಾಜಿಕ ಸ್ಥಿತ್ಯಂತರಗಳಿಂದಾಗಿ, ಭಕ್ತಿಪಂಥವು ಅತ್ಯವಾಶ್ಯವಾಗಿಯೇ ರೂಪುಗೊಳ್ಳಬೇಕಾಗಿದ್ದ ಸಂದರ್ಭದಲ್ಲಿ – ಸರಿಸುಮಾರು 15ನೇ ಶತಮಾನದ ಸಮಯದಲ್ಲಿ – ಕರ್ಮಕಾಂಡವೇ ಮತ್ತೆ ವಿಜೃಂಭಣೆಗೆ ಬಂದದ್ದನ್ನು ಕಾಣುತ್ತೇವೆ. ಇನ್ನೊಂದೆಡೆಗೆ ಪರಕೀಯ ದಾಳಿಗಳ ಪರಾಕಾಷ್ಠೆ ಶತಮಾನಗಳು, ಈ ವೇದದ ಕರ್ಮಕಾಂಡವೂ ಸಹಿತ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೆಣಗಬೇಕಾಯಿತು. ಇಂತಹ ಸಂದರ್ಭದಲ್ಲಿ ವೇದದ ಜ್ಞಾನಕಾಂಡದ ವಿಷಯಗಳು ಮತ್ತೆ ಕತ್ತಲಿನ ಹೊದಿಕೆಯಲ್ಲಿಯೇ ಉಳಿಯುವಂತಾಯಿತು.

ಇಂತಹ ಸಂದರ್ಭದಲ್ಲಿ ಶ್ರೀ ಅರವಿಂದರು, ವೇದ ರಹಸ್ಯವೆನ್ನುವದು ಒಂದು ಕಲ್ಪನೆ ಮಾತ್ರ.. ಅದು ನಿಜವಾಗಿಯೂ ಸ್ಪಂದಗೊಳ್ಳುತ್ತಿದ್ದ ಹಂತದಿಂದ

ನಾವೇ ದೂರವಾಗಿದ್ದೇವೆ, ಅದನ್ನು ಮತ್ತೆ ನಮ್ಮ ಬದುಕಿಗೆ, ವಿಕಾಸಕ್ಕೆ ಹಾಗೂ ಸುಸಂಗತ ಭವಿಷ್ಯಕ್ಕೆ ಬುನಾದಿಯನ್ನಾಗಿ ಮಾಡಿಕೊಳ್ಳಬೇಕೆಂಬ ಅಭೀಪ್ಸೆಯನ್ನು ಹೊಂದಿ 'ವೇದ ರಹಸ್ಯ'ವೆನ್ನುವ ನವೀನ ಭಾಷ್ಯವೊಂದನ್ನು ರೂಪಿಸಿದ್ದಾರೆ.

2. **ಊಹಾಪೋಹಗಳು:** ವೇದ ವಿರೋಧದ ಆಯಾಮಗಳೂ ಸಹಿತ ಅಷ್ಟೇ ರಹಸ್ಯಮಯವಾಗಿವೇ ರೂಪುಗೊಂಡಿವೆ. ಭಾರತದಲ್ಲಿಯೇ ಗಮನಿಸಿದರೆ ಪಂಥಗಳು, ವಾದಗಳ ಮಧ್ಯೆ ನಡೆಯುತ್ತಿದ್ದ ವಾಗ್ವಾದಗಳು, ಅವುಗಳ ಫಲಿತಗಳು, ಮತ್ತೆ ಪರಕೀಯ ದಾಳಿಯಲ್ಲಿ ಇಲ್ಲಿನ ಮೂಲ ಸಂಸ್ಕೃತಿ ಮತ್ತು ಜ್ಞಾನ ಮೂಲವನ್ನೇ ಕತ್ತರಿಸುವ ಸಲುವಾಗಿ ದೈಹಿಕ, ಮಾನಸಿಕ ಒತ್ತಡಗಳ ಜೊತೆಗೆ ಸಾಂಸ್ಕೃತಿಕ ಬೇರುಗಳನ್ನು ಕತ್ತರಿಸಿಬಿಟ್ಟರೆ, ತಮಗೆ ಬೇಕಾದ ಹಾಗೆ ಆಡಳಿತ ಹಿಡಿದುಕೊಳ್ಳಬಹುದು ಎನ್ನುವ ಹುನ್ನಾರಿನಲ್ಲಿ, ವೇದಗಳನ್ನು ಅವಹೇಳನಕಾರಿ–ಯಾಗಿಯೇ ಚಿತ್ರಿಸತೊಡಗಿದರು. ಇದು ಊಹಾಪೋಹಗಳಿಂದ ಕೂಡಿದೆ ಎಂದು ಗೊತ್ತಿದ್ದರೂ, ಅವುಗಳನ್ನೇ ಮುಂದುವರೆಸುವಂತೆ ಒತ್ತಾಯದ ಪದ್ಧತಿಯಿಂದಾಗಿ, ವೇದದ ಮೂಲ ಸ್ಪಂದವಾದ 'ಜ್ಞಾನತಂತುಗಳು ಶಿಶಿರ ನಿದ್ರೆಗೆ' ಜಾರುವಂತಾಯಿತು. ಈ ಊಹಾಪೋಹಗಳನ್ನು ಬಿಟ್ಟುಬಿಟ್ಟರೆ, ವೇದವು ಸ್ಫಟಿಕಶುದ್ಧತೆಯಲ್ಲಿಯೇ ತನ್ನ ಎಲ್ಲ ಆಂತರ್ಯಗಳನ್ನೂ ಪ್ರಕಟಪಡಿಸುತ್ತಲೇ ಇದೆ ಎನ್ನುವದು ಗೊತ್ತಾಗುತ್ತದೆ.

3. **ನವೀನ ದೃಷ್ಟಿಕೋನ:** ಆದಿಶಂಕರರ ನಂತರದಲ್ಲಿ ನಮಗೆ ಭಾಷ್ಯ ಸಿಕ್ಕಿದ್ದು ಸಾಯಣಾಚಾರ್ಯರಿಂದ ಅದೂ 15ನೇ ಶತಮಾನದ ಅವಧಿಯಲ್ಲಿ. ಸಾಯಣಾಚಾರ್ಯರು ವೇದದ ಕರ್ಮಕಾಂಡಕ್ಕೆ ಪ್ರಾಧಾನ್ಯತೆ ಇತ್ತಿದ್ದು, ಆ ಅವಧಿಯ ಸಾಮಾಜಿಕ ಒತ್ತಡದಲ್ಲಿ ಅನಿವಾರ್ಯವಾಗಿ ನಿರ್ಮಾಣಗೊಂಡ ಸಂಗತಿ. ಆದರೆ. ಆದಿಶಂಕರರ (ಅವರ ಅವಧಿ ಕ್ರಿ.ಶ. 8ನೇ ಶತಮಾನವೋ ಅಥವಾ ಕ್ರಿ.ಶ. 3ನೇ ಶತಮಾನವೋ ಎನ್ನುವದು ಇನ್ನೂ ಜಿಜ್ಞಾಸೆಯಲ್ಲಿದೆ) ಜ್ಞಾನಕಾಂಡದ ನಂತರದಲ್ಲಿ ಸುದೀರ್ಘವಾಗಿರುವ – ಸರಿ ಸುಮಾರು 1300 ವರ್ಷಗಳ – ಅವಧಿಯ ನಂತರ ಮತ್ತೆ ಆ ಜ್ಞಾನಕಾಂಡಕ್ಕೆ, ಪ್ರಸ್ತುತ ಸಮಾಜದ ಅನಿವಾರ್ಯವಾಗಿರುವ ಭಾಷಾವ್ಯವಸ್ಥೆಯಲ್ಲಿ ರೂಪಿಸಿದ್ದು ಒಂದು ನವೀನ ದೃಷ್ಟಿಕೋನವೇ ಆಗಿದೆ. ಭರತ ವರ್ಷೇ ಭರತ ಖಂಡೇ ಇದ್ದದ್ದು,ಇಡೀ ಭೂಮಂಡಳವೇ ಇಂದು 'ಒಂದೇ ವ್ಯವಸ್ಥೆ'ಯ – ತಂತ್ರಜ್ಞಾನದ ಸಂವಹನದಲ್ಲಿ – ಸ್ಥಿತಿಯಲ್ಲಿ ಇರುವಾಗ, ಈ ವೇದದ ಆತ್ಮವೂ ಅದನ್ನೇ ಉಲ್ಲೇಖಿಸುತ್ತಿದೆ ಎನ್ನುವದನ್ನು ಶ್ರೀ ಅರವಿಂದರು ತಮ್ಮ 'ವೇದ ರಹಸ್ಯ'ದಲ್ಲಿ ಕಂಡಿರಿಸಿದ್ದಾರೆ.

## ಶ್ರೀ ಅರವಿಂದರ

## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

### 2

### ಅಧ್ಯಾಯ – 1

### ಗೀತೆಯಿಂದ ನಾವು ಆಶಿಸುವುದೇನು?

ಗೀತೆಯು ಕೆಲವೊಂದು ತತ್ತ್ವಗಳನ್ನು, ತಾತ್ತ್ವಿಕ ಶಬ್ದಗಳನ್ನು, ಪದಗಳನ್ನು ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸುತ್ತದೆ. ಅದು ಆ ಕಾಲದ ಪ್ರಭಾವವಾಗಿರಬಹುದು ಅಥವಾ ಬೇರಿನ್ನಾವ ಕಾರಣವೇ ಆಗಿರಬಹುದು. ಗೀತೆ ಪ್ರತಿಪಾದಿಸುವ ತತ್ತ್ವ ಅಥವಾ ಅರ್ಥಕ್ಕಿಂತ ಮೂಲದ ಅರ್ಥ ಭಿನ್ನವಾಗಿದ್ದರೂ ನಾವದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಗೀತೆಯು ಹೇಳಿದ ಅರ್ಥದಲ್ಲಿ, ಅದು ವ್ಯಾಖ್ಯಾನಿಸಿದ ರೀತಿಯಲ್ಲಿಯೇ ನಾವದನ್ನು ತೆಗೆದುಕೊಳ್ಳುತ್ತೇವೆ. ಬೇರೆ, ತುಲನಾತ್ಮಕ ಚರ್ಚೆಗೆ ತೊಡಗುವುದಿಲ್ಲ. ಉದಾಹರಣೆಗೆ– ಗೀತೆಯ ಸಾಂಖ್ಯವು ಸಾಂಪ್ರದಾಯಕ ಸಾಂಖ್ಯದರ್ಶನಕ್ಕಿಂತ ಭಿನ್ನವಾಗಿದೆ. ಸಾಂಖ್ಯದರ್ಶನವು ವೇದ ವಿರೋಧಿಯೆಂದು, ನಾಸ್ತಿಕವಾದ ಎಂದೂ ಸಂಪ್ರದಾಯ ಅದನ್ನು ನಿರಾಕರಿಸುತ್ತದೆ; ಇಲ್ಲಿ ಪ್ರಕೃತಿ ಒಂದು, ಆದರೆ ಪುರುಷರು ಅನೇಕ! ಗೀತೆಯ ಸಾಂಖ್ಯದಲ್ಲಿ ಪುರುಷ ಒಬ್ಬನೇ ಪ್ರಕೃತಿ ಅನೇಕ. ಈ ವೈರುಧ್ಯವನ್ನು ನಾವು ಚರ್ಚಿಸಲು ಹೋಗುವುದಿಲ್ಲ; ಗೀತೆ ಹೇಳಿರುವುದನ್ನೇ ಒಪ್ಪಿ ಮುಂದೆ ಸಾಗುತ್ತೇವೆ. ಯೋಗದ ವಿಷಯ ಕೂಡ ಅಷ್ಟೇ. ಪತಂಜಲಿಯ ಯೋಗವು ತುಂಬ ಕಟ್ಟುನಿಟ್ಟಿನದು, ವೈಜ್ಞಾನಿಕ ಸತ್ಯದಿಂದ ಕೂಡಿರುವಂಥದು, ಶಮದಮ ಇತ್ಯಾದಿ ಹಂತಗಳನ್ನು ಹೊಂದಿರುವಂಥ ಬಿಗಿಯಾದ ಉಪಕ್ರಮ. ಆದರೆ ಗೀತೆಯ ಯೋಗ ಹಾಗಲ್ಲ. ಗೀತೆಯ ಯೋಗ ಬಹುಮುಖಿ, ಸೂಕ್ಷ್ಮ, ಈಶ್ವರ ಸಿದ್ಧಾಂತಕ್ಕೆ ಒಗ್ಗಿಸಿಕೊಳ್ಳುವಂಥ ನಮನಶೀಲ ಪದ್ಧತಿ. ಅದು ಗೀತೆಯ ಪ್ರಕಾರ ಸಾಂಖ್ಯ ಮತ್ತು ಯೋಗಗಳು ಒಂದೇ ವೇದಾಂತ ಸತ್ಯದ ಎರಡು ವಿಭಿನ್ನ ಮಾರ್ಗಗಳು: ಒಂದು ತಾತ್ತ್ವಿಕಕ, ಬೌದ್ಧಿಕ, ವಿಶ್ಲೇಷಣಾತ್ಮಕ ಚಿಂತನೆಯದು; ಇನ್ನೊಂದು ಅಂತಃಸ್ಫೂರ್ತಿ, ಭಕ್ತಿ, ಪ್ರೇರಿತ, ವ್ಯಾವಹಾರಿಕ ನೈತಿಕವಾಗಿದ್ದು ಅನುಭವದ ಮೂಲಕ ಜ್ಞಾನವನ್ನು ಮುಟ್ಟುವಂಥದು.

ಗೀತೆಯನ್ನು ನಾವು ಇಂಥದೇ ನಿರ್ದಿಷ್ಟ ಧರ್ಮದ, ಮತ ಅಥವಾ ಪಂಥದ ಪ್ರವರ್ತಕ ಎಂದು ಹೇಳಲು ಸಾಧ್ಯವಿಲ್ಲ. ಅದರ ಬೋಧನೆ ವಿಶ್ವಾತ್ಮಕವಾಗಿದೆ. ಅದರ ಸಮನ್ವಯ ಸಿದ್ಧಾಂತ ಕೂಡ ಸರ್ವವ್ಯಾಪಕವಾಗಿದೆ. ಗೀತೆಯ ತಾತ್ತ್ವಿಕ ಸಿದ್ಧಾಂತ, ಅದು ಸತ್ಯವನ್ನು ಪ್ರತಿಪಾದಿಸುವುದು. ಅದರ ಬೋಧನೆಯ ಭಾಗವಲ್ಲ. ಅದರ ಬೋಧನೆ ತುಂಬ ಆಳ. ಗಹನ ಗಂಭೀರ ಮತ್ತು ಶಾಶ್ವತ. ಆದರೆ ಅದನ್ನು ಪ್ರಸ್ತುತಪಡಿಸುವ ವ್ಯವಸ್ಥೆ ಮತ್ತು ಮುಖ್ಯ ಚಿಂತನೆಗಳು ಬಹು ಸಂಕೀರ್ಣವಾದ ರೀತಿಯಲ್ಲಿ ಸಮರಸಗೊಂಡಿವೆ; ಅವು ಬೌದ್ಧಿಕ ಚಿಂತನೆಗಳಲ್ಲ, ಅವು ಆಧ್ಯಾತ್ಮಿಕ ಅನುಭವದ ಸತ್ಯಗಳು. ಅವುಗಳನ್ನು ಕೇವಲ ಓದುವುದರಿಂದ ಅರ್ಥ ಮಾಡಿಕೊಳ್ಳಲಾಗದು, ಉನ್ನತ ಮಾನಸಿಕ ಬೆಳವಣಿಗೆಯ ಮೂಲಕ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ. ಅದರ ವ್ಯವಸ್ಥೆ ಹೇಗೆಯೇ ಇರಲಿ, ಆದರೆ ಯಾವ ಭಾಷ್ಯಕಾರರು ಹೇಳುವಂತೆ ಅದು ಯಾವ ಮತಕ್ಕೂ ಒತ್ತು ಕೊಡುವುದಿಲ್ಲ; ಯಾವ ಯೋಗವನ್ನು, ಯಾವ ಸಿದ್ಧಾಂತವನ್ನು, ಯಾವ ಮತವನ್ನು, ಧರ್ಮವನ್ನು ಅದು ಎತ್ತಿಹಿಡಿದು ಇನ್ನೊಂದನ್ನು ಕೆಳಗೆ ತಳ್ಳುವುದಿಲ್ಲ. ಗೀತೆಯ ಭಾಷೆ, ವೈಚಾರಿಕ ಸಂರಚನೆ, ಬೇರೆಬೇರೆ ಆಲೋಚನೆಗಳನ್ನು ಸಮತೂಗಿಸುವ ರೀತಿ. ಇವು ಯಾವುದೇ ನಿರ್ದಿಷ್ಟ ಪಂಥದ ಪ್ರತಿಪಾದಕನಿಗೆ ಸಂಬಂಧಪಟ್ಟವುಗಳಲ್ಲ; ಯಾವ ತೀಕ್ಷ್ಣ ವೈಯ್ಯಾಕರಣಿಕ, ವಿದ್ವಾಂಸ, ಪಂಡಿತರ ವಿಶ್ಲೇಷಣೆಯ ವಿಧಾನಕ್ಕೆ ಸಂಬಂಧಪಟ್ಟಿರುವುದಿಲ್ಲ; ಒಂದನ್ನು ಪುರಸ್ಕರಿಸಿ ಇನ್ನೊಂದನ್ನು ತಳ್ಳಿಹಾಕುವ ನಿರ್ದಯ, ನಿರ್ಮಮ ವಿಧಾನ ಅದರದಲ್ಲ. ವಿಶಾಲವಾದ, ಸರ್ವಗ್ರಾಹಿಯಾದ, ಸರ್ವಸಮನ್ವಯಕಾರಿಯಾದ ಶ್ರೀಮಂತ ಅನುಭವದ ಮೇಲೆ ಅದರ ವಿಷಯ ಮಂಡನೆ ಅವಲಂಬಿಸಿದೆ. ಭಾರತದ ಆಧ್ಯಾತ್ಮಿಕ ಅತ್ಯಂತ ಸಮೃದ್ಧವಾಗಿದೆ, ಶ್ರೀಮಂತವಾಗಿದೆ. ಅಂತೆಯೇ ಅದು ವಾದದ ಬಗೆಯ ಸಿದ್ಧಾಂತಗಳನ್ನು, ವಿಚಾರಗಳನ್ನು , ಜ್ಞಾನದ ಪ್ರಕಾರಗಳನ್ನು, ಧಾರ್ಮಿಕ–ಆಧ್ಯಾತ್ಮಿಕ ಚಳುವಳಿಗಳನ್ನು ಸಮನಾಗಿ ಸ್ವೀಕರಿಸಿದೆ. ಎಲ್ಲ ದಾರಿಗಳೂ ಕೊನೆಗೆ ಒಂದೇ ಗುರಿಯನ್ನು ಮುಟ್ಟುತ್ತವೆ ಎಂದೇ ಅದು ಹೇಳುತ್ತದೆ. ಅದೇ ರೀತಿ ಗೀತೆಯು ಯಾವುದನ್ನು ತಿರಸ್ಕರಿಸದೇ ಎಲ್ಲವನ್ನೂ ಅಮನಾಗಿ ಸ್ವೀಕರಿಸತ್ತದೆ, ಸಮನ್ವಯದ ಸೂತ್ರದಲ್ಲಿ ಪೋಣಿಸುತ್ತದೆ.

ಗೀತೆಯು ಅದ್ವಿತೀಯ ಶುದ್ಧ, ಶಾಶ್ವತ ಆತ್ಮವೇ ಸಮಸ್ತ ಬ್ರಹ್ಮಾಂಡದ ಆಧಾರ ಎಂದು ಹೇಳಿದರೂ ಅದನ್ನು ಶುದ್ಧ ಅದ್ವೈತ ಎಂದು ಹೇಳಲಾಗದು. ತ್ರಿಗುಣಾತ್ಮಕ

ಪ್ರಕೃತಿಯ ಮಾಯೆಯೇ ಸಮಸ್ತ ವಿಶ್ವದ ಅಸ್ತಿತ್ವಕ್ಕೆ ಕಾರಣ ಎಂದು ಹೇಳಿದರೂ ಅದನ್ನು ಮಾಯವಾದ ಎಂದು ಹೇಳಲಾಗದು.

ಗೀತೆಯನ್ನು ಸಗುಣ ಅದ್ವೈತವೆಂದು ಹೇಳಲಾಗುವುದಿಲ್ಲ; ಏಕೈಕ ಪರಮಾತ್ಮನ ಕಲ್ಪನೆಯ ಬದಲಾಗಿ ಶಾಶ್ವತವಾದ ಪರಾಪ್ರಕೃತಿಯೇ ಜೀವವಾಗಿ ಪ್ರಕಟವಾಗಿದೆ. ಪರಮೋಚ್ಛ ಆಧ್ಯಾತ್ಮಿಕ ಪ್ರಜ್ಞೆ ಅಂದರೆ ಮೋಕ್ಷ ಹೊಂದಿ ವಿಶ್ವ ಪ್ರಕಟನೆಯಿಂದ ಹೊರ ಹೋಗುವ ಬದಲಾಗಿ ಪರಮಾತ್ಮನಲ್ಲಿ ಜೀವಿಸುವುದೇ ಆಗಿದೆ ಎಂದು ಹೇಳಿದರೂ ವಿಶ್ವವು ಪುರುಷ ಮತ್ತು ಪ್ರಕೃತಿ ಎಂಬ ಎರಡು ತತ್ವಗಳಿಂದ ಸೃಷ್ಟಿಯಾಗಿದೆ ಎಂದೂ ಹೇಳಿದರೂ ಅದು ಸಾಂಖ್ಯವಲ್ಲ. ಕೃಷ್ಣನೇ ಪರಮ ಪುರುಷ, ಅವನು ಅವತಾರ ಸ್ವರೂಪ ಪುರಾಣಗಳಲ್ಲಿ ಹೇಳುವ ವಿಷ್ಣು ಅಂದರೆ ಅವನೇ; ಅನಿರ್ವಾಚ್ಯನಾದ ಕೇವಲ ಬ್ರಹ್ಮನು ಈ ಸೃಷ್ಟಿಯ ಸಖನೂ ಪ್ರಭುವೂ ಆಗಿರುವ ಕೃಷ್ಣನಿಗಿಂತ ಹೆಚ್ಚು ಎಂದು ಹೇಳುವಂತಿಲ್ಲ. ಕೆಲ ಮೊದಲಿನ ಉಪನಿಷತ್ತುಗಳು ಆಧ್ಯಾತ್ಮಿಕ ಸಮನ್ವಯ ಮಾಡಲು ಪ್ರಯತ್ನ ಮಾಡಿದ್ದುಂಟು. ಆದರೆ ಗೀತೆಯು ಅವುಗಳಂತೆ ಬೌದ್ಧಿಕ ಚರ್ಚೆ ಮಾಡಲು ಹೊರಡುವುದಿಲ್ಲ. ಮತ್ತು ಬೇರೆ ಬೇರೆ ಸಿದ್ಧಾಂತಗಳಿಗೆ ಕ್ಷತಿಯನ್ನುಂಟು ಮಾಡಲಿಚ್ಛಿಸುವುದಿಲ್ಲ. ಕೆಲವೊಂದು ವಿತಂಡ ಹಠಮಾರಿ ಭಾಷ್ಯಕಾರರು ವೇದಾಂತದ ಬಹುಮುಖ್ಯ ಸಿದ್ಧಾಂತಗಳಾದ ದ್ವೈತ–ಅದ್ವೈತ–ವಿಶಿಷ್ಟಾದ್ವೈತಗಳ ಪೈಕಿ ಯಾವುದಾದರೊಂದನ್ನು ಹೇಳುತ್ತದೆ ಎಂದು ವಾದಿಸುತ್ತ, ವಾಗ್ಯುದ್ಧವನ್ನೇ ಮಾಡಿದ್ದಿದೆ. ಆದರೆ ಗೀತೆಯು ವಾಗ್ಯುದ್ಧದ ಅಸ್ತ್ರವಲ್ಲ. ಅದು ಆಧ್ಯಾತ್ಮಿಕ ಸತ್ಯ ಮತ್ತು ಅನುಭವಕ್ಕೆ ಇಡೀ ವಿಶ್ವಕ್ಕೆ ದಾರಿ ಮಾಡಿಕೊಡುತ್ತದೆ. ಎಲ್ಲರಿಗೂ ಬಾಗಿಲು ತೆರೆದಿರಿಸುತ್ತದೆ. ಅದರ ದೃಷ್ಟಿಕೋನವು ಎಲ್ಲ ಆಧ್ಯಾತ್ಮಿಕ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುತ್ತದೆ. ನಮ್ಮ ದೃಷ್ಟಿಯನ್ನು ಅದು ವಿಶಾಲಗೊಳಿಸುತ್ತದೆಯೇ ಹೊರತು ಮಿತಿಗೊಳಿಸುವುದಿಲ್ಲ. ಸಂಕುಚಿತಗೊಳಿಸುವುದಿಲ್ಲ.

ಭಾರತದ ಸುದೀರ್ಘ ವೈಚಾರಿಕ ಇತಿಹಾಸದಲ್ಲಿ ಇಂಥ ಸಮನ್ವಯ ಪ್ರಯತ್ನಗಳು ಈ ಮೊದಲು ಆಗಿವೆ. ಮೊದಲು ಸಾವಿನಂಥ ಸಮನ್ವಯದ ಪ್ರಯತ್ನವನ್ನು ವೇದಗಳಲ್ಲಿ ನೋಡುತ್ತೇವೆ. ಮನೋಮಯ ಪುರುಷನಾದ ಮಾನವನು ತನ್ನ ಅತ್ಯುನ್ನತ ಸಿದ್ಧಿಯಲ್ಲಿ ದೈವೀ ಜ್ಞಾನ, ಶಕ್ತಿ, ಆನಂದ, ಜೀವನ ಮತ್ತು ವೈಭವಗಳಲ್ಲಿ ದೇವತೆಗಳ ಸಮಾನಾಗಿ ಬೆಳೆಯುತ್ತದೆ ಎಂದು ವೇದ

ಹೇಳುತ್ತದೆ. ಈ ಸಮನ್ವಯದ ಕಿರೀಟಪ್ರಾಯವಾಗಿ ಋಷಿಗಳ ಅನುಭವವು ದೈವೀ, ವಿಶ್ವಾತೀತ ಹಾಗೂ ಸರ್ವಾನಂದಮಯ ಸ್ಥಿತಿಯು ಮಾನವನಿಗೆ ಸಾಧ್ಯವೆಂಬುದನ್ನು ಶ್ರುತಪಡಿಸಿದೆ: ಮಾನವನ ಆತ್ಮವು ಪರಮಾತ್ಮನ ಜೊತೆ ಸೇರಿ ಒಂದಾಗಬಹುದೆಂದು ತೋರಿಸಿದೆ; ಇದು ನಿಜವಾದ ಸಮನ್ವಯ ನಿದರ್ಶನವಾಗಿದೆ. ಉಪನಿಷತ್ತುಗಳು ಕೂಡ ಈ ಪರಮೋಚ್ಚ ಅನುಭವನನ್ನೇ ಮುಂದುಮಾಡಿಕೊಂಡು ತನ್ನ ಆಧ್ಯಾತ್ಮಿಕ ಅನುಭವಗಳಲ್ಲಿ ಕಂಡಿರುವುದೆಲ್ಲವನ್ನು ವಿಶ್ವದ ಜೊತೆ ಸಮನ್ವಯ ಮಾಡುವ ಪ್ರಯತ್ನ ಮಾಡಿದರು. ಗೀತೆಯು ವೇದಾಂತಿಕ ಸಮನ್ವಯದ ದಾರಿಯಲ್ಲೇ ಸಾಗಿ ಪ್ರೇಮ (ಭಕ್ತಿ), ಜ್ಞಾನ ಮತ್ತು ಕರ್ಮಗಳೆಂದು ಮೂರು ಮಹಾನ್ ತತ್ವಗಳನ್ನು, ಸಾಧನಗಳನ್ನು ರೂಪಿಸಿರುವ ದಾರಿಯಲ್ಲಿ ಸಾಗಿ ಮಾನವನ ಆತ್ಮವು ಪರಮಾತ್ಮನ ಜೊತೆ ಶಾಶ್ವತವಾಗಿ ಒಂದಾಗಬಹುದೆಂದು ಹೇಳುತ್ತದೆ.

ಇನ್ನು ತಂತ್ರ ಶಾಸ್ತ್ರದ ಬಗ್ಗೆ ಹೇಳಬೇಕೆಂದರೆ ಅದು ತುಸು ಒರಟು; ಅದರಲ್ಲಿ ಆಧ್ಯಾತ್ಮಿಕ ಗಹನಂತೆ ಕೂಡ ಸ್ವಲ್ಪ ಕಡಿಮೆಯೋ, ಆದರೆ ಸಮನ್ವಯದ ವಿಷಯ ಬಂದರೆ ಅದು ಹೆಚ್ಚು ಧೈರ್ಯಶಾಲಿ ಮತ್ತು ಬಲವತ್ತರವಾದುದು. ಭಾರತದ ಬಹುಶಃ ಎಲ್ಲ ಪುರಾಣಗಳೂ ಈ ತಂತ್ರ ಶಾಸ್ತ್ರದ ಮೂಲಕವೇ ಸಮೃದ್ಧಿವಾಗಿ, ಶ್ರೀಮಂತವಾಗಿ ಬೆಳೆದಿವೆ ಎಂದು ಹೇಳಬಹುದು. ತಂತ್ರ ಶಾಸ್ತ್ರವು ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿಯಾಗಿರುವ ವಿರೋಧವಾಗಿರುವ ಅಂಶಗಳನ್ನು ತೆಗೆದುಕೊಂಡು, ಹೆಚ್ಚಿನ ಶ್ರೀಮಂತ ಆಧ್ಯಾತ್ಮಿಕ ಸಿದ್ಧಿಗೆ ಸಾಧನೆಗಳನ್ನಾಗಿ ಮಾಡಿಕೊಳ್ಳುವ ವಿಧಾನವನ್ನು ಅನುಸರಿಸುತ್ತದೆ. ಹೀಗಾಗಿ ವಿಶ್ವಲೀಲೆಯಲ್ಲಿ ಎಲ್ಲವೂ ಪರಮಾತ್ಮನ ಆಟವೆಂದು ಗ್ರಹಿಸುವ ಮನಃಸ್ಥಿತಿ ನೀಡುತ್ತದೆ. ಅದು ದೈವೀ ಕರ್ಮ ಮತ್ತು ದೈವೀ ಪ್ರೇಮದಿಂದ ಕೂಡಿದ ಭಕ್ತಿ ಇವುಗಳ ಮೂಲಕ ರಾಜಯೋಗದ, ಹಠಯೋಗದ ರಹಸ್ಯಗಳನ್ನು ಅಳವಡಿಸಿಕೊಂಡು ಶಾರೀರಕ ಮತ್ತು ಮಾನಸಿಕ ತಪಸ್ಸಿನ ಮೂಲಕ ಎಲ್ಲ ಸ್ತರಗಳಲ್ಲಿ ದೈವೀ ಜೀವನವನ್ನು ಸ್ಥಾಪಿಸುವ ಯತ್ನ ಮಾಡುತ್ತದೆ ಹೊರತು ಆಳಕ್ಕಿಳಿಯುವುದಿಲ್ಲ. ವೇದಿಕ ಋಷಿಗಳು ಮಾನವನಿಗೆ ದೈವೀ ಪರಿಪೂರ್ಣತೆಯ ಸಾಧ್ಯತೆಯ ವಿಚಾರವನ್ನು ಹೇಳಿದರೂ ಸಹ ಮುಂದೆ ಬಂದ ಯುಗದಲ್ಲಿ ಆ ಸಾಧ್ಯತೆಯ ಪರಿಕಲ್ಪನೆಯೇ ಲುಪ್ತವಾಗಿ ಹೋಯಿತು. ಮಾನವನ ವೈಚಾರಿಕ ಸಮನ್ವಯವು ಈ ಬಹು ದೊಡ್ಡ ಕಂದಕವನ್ನು ಭವಿಷ್ಯದಲ್ಲಿ ತುಂಬವೇ ಬೇಕಾಗುವುದು. ಮಾನವನ ವಿಚಾರ, ಅನುಭವ ಮತ್ತು ಅಭೀಪ್ಸೆ ಈ

ಅಂತರವನ್ನು ತುಂಬಿಸುವಂತೆ ಮಾನವನನ್ನು ಪ್ರೇರಿಪಿಸುವುದು. ಹೀಗೆ ಸಮನ್ವಯ ಅನಿವಾರ್ಯವಾಗುವುದು. ಇದು ಮಹತ್ವದ ಸ್ಥಾನವನ್ನು ಹೊಂದಿದೆ.

ಆದ್ದರಿಂದ ನಾವು ಗೀತೆಯನ್ನು ಶೈಕ್ಷಣಿಕವಾದ ರೀತಿಯಲ್ಲೋ, ಧಾರ್ಮಿಕವಾದ ರೀತಿಯಲ್ಲೋ, ಅಧ್ಯಯನ ಮಾಡುವುದಿಲ್ಲ; ಪಾಂಡಿತ್ಯ ವಿದ್ವತ್ತುಗಳಿಗಾಗಿ, ಭಾರತೀಯ – ವೈಶ್ವಿಕ ತತ್ವ ಶಾಸ್ತ್ರದ ಇತಿಹಾಸದಲ್ಲಿ ಅದರ ಸ್ಥಾನವನ್ನು ಪರಿಶೀಲಿಸುವುದರ ಸಲುವಾಗಿ, ತತ್ವ ಚಿಂತನೆಯ ಚರ್ಚೆಗಾಗಿ ನಾವದನ್ನು ಅಭ್ಯಾಸ ಮಾಡುವುದಿಲ್ಲ. ನಾವದನ್ನು ಬೌದ್ಧಿಕ, ವೈಯ್ಯಾಕರಣಿ, ದಾರ್ಶನಿಕ ವಿಶ್ಲೇಷಣೆಗಾಗಿ ಕೂಡ ಅಧ್ಯಯನ ಮಾಡುವುದಿಲ್ಲ. ನಾವು ಗೀತೆಯನ್ನು ಬೆಳಕಿಗಾಗಿ, ಮಾರ್ಗದರ್ಶನಕ್ಕಾಗಿ ಸಮೀಪಿಸುತ್ತೇವೆ. ನಮ್ಮ ಮುಖ್ಯ ಉದ್ದೇಶವೇನೆಂದರೆ, ಅದರ ಅದ್ವೀತಿಯ ಜೀವಂತ ಸಂದೇಶದ ಮೇಲೆ ಮಾನವತೆಯು ಪರಿಪೂರ್ಣತೆ ಹಾಗೂ ಅತ್ಯುನ್ನತ ಆಧ್ಯಾತ್ಮಿಕ ಸಾರ್ಥಕತೆ ಮತ್ತು ಕಲ್ಯಾಣವನ್ನು ಸಿದ್ಧಿಸಿಕೊಳ್ಳಬೇಕೆನ್ನುವುದೇ ಆಗಿದೆ.

(ಸಶೇಷ)

---

**ಟಿಪ್ಪಣಿ:**

ಭಗವದ್ಗೀತೆಯ ಆಧಾರದಲ್ಲಿ ಈಗಾಗಲೀ ಭಕ್ತಿಯೋಗ, ರಾಜಯೋಗ, ಕರ್ಮಯೋಗದ ಅಧ್ಯಯನ ಕ್ರಮಾಂಕದಲ್ಲಿ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಹೀಗೆ ಹತ್ತು ಹಲವು ವಿಧದ ಆಯಾಮಗಳು ಜನಜನಿತವಾಗಿವೆ. ಇವೆಲ್ಲ ಆಯಾಮಗಳನ್ನು ಆತ್ಮಗತ ಮಾಡಿಕೊಂಡಿರುವ 'ಗೀತೆಯ ಪೂರ್ಣ ಸ್ವರೂಪ'ವನ್ನು ಶ್ರೀ ಅರವಿಂದರು ತಮ್ಮ 'ಪೂರ್ಣ ಯೋಗ'ದ ಆಧಾರವಾಗಿ ನಿರೂಪಿಸಿದ್ದಾರೆ. 'ನಾಲ್ಕನ್ನು ಬಿಚ್ಚಿ ಐದನ್ನು ತೋರಿಸು' ಎನ್ನುವದು ಒಂದು ಸೂತ್ರವಿದೆ. ಈ ಹಿನ್ನೆಲೆಯಲ್ಲಿ ಶ್ರೀ ಅರವಿಂದರ 'ಗೀತಾ ಪ್ರಬಂಧ'ವನ್ನು ತಿಳಿಗನ್ನಡದಲ್ಲಿ, ತಿಳಿಸಲು ಶ್ರೀ ಜಾನ್ವಿ ಸ್ಪಂದಿಸಿದ್ದಾರೆ. ಓದುಗರ ಅಭಿಪ್ರಾಯಕ್ಕೆ ಮುಕ್ತ ಅವಕಾಶವಿದೆ. [ಸಂ]

(ಮುಂದುವರೆಯುತ್ತದೆ)

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

8

ಅದು ಸರಕಾರಕ್ಕೇ ಅನುಕೂಲಕರವಾಗಿದ್ದ ವೇಳೆಯಾಗಿತ್ತು. ವೀರಪಕ್ಷವನ್ನು ಮುರಿಯಲಿಕ್ಕೆ ಮತ್ತೊಂದು ನೆವವೂ ಸಿಕ್ಕಂತಾಯಿತು. ಶಾಂತತೆಯ ಮಾರ್ಗದಿಂದಲೇ ತಮ್ಮ ಇಚ್ಛಿತವನ್ನು ಸಾರ್ಥಯ ಮಾಡಿಕೊಳ್ಳುವದೆಂದು ಮಂದ ಪಕ್ಷದವರಂತೆ ವೀರ ಪಕ್ಷದ ಮತವಿದೆ. ಇಂದಿನವರೆಗೂ ಆ ಮಾರ್ಗದಿಂದಲೇ ಅವರು ನಡೆಯುತ್ತ ಬಂದರು. ಆದರೂ ಸರಕಾರದವರು ಇಲ್ಲದ ಆರೋಪಗಳನ್ನು ಹೊರಿಸುತ್ತ ಜನರನ್ನು ಶಿಕ್ಷಿಸುವದನ್ನು ಕಂಡು ಕೆಲವು ತರುಣರ ತಲೆ ತಿರುಗಿತು. ಅವರಿಗೆ ವೀರ ಪಕ್ಷದ ಶಾಂತತೆಯ ಮಾರ್ಗವು ರುಚಿಸಲಿಲ್ಲ. ಶಸ್ತ್ರಧಾರಣದ ವಿನಾ ಕಾರ್ಯ ಸಿದ್ಧಿಯಿಲ್ಲವೆಂದು ಗ್ರಹಿಸಿ, ಈ ಜನರು ತಮ್ಮ ಉದ್ಯೋಗಕ್ಕೆ ಹತ್ತಿದರು. ಕದ್ದು–ಮುಚ್ಚಿ ಕೆಲಸ ನಡೆಯಿತು. ಜೀವದ ಹಂಗು ಇಲ್ಲದ ಕೆಲವು ತಲೆತಿರುಕ ತರುಣರು ಬಾಂಬಿನ ಪ್ರಯೋಗದಿಂದ ಯುರೋಪಿಯನ್ನರ ಕೊಲೆಗಳನ್ನು ಮಾಡಹತ್ತಿದರು. ಇವರ ಈ ನಿಂದ್ಯ ಕರ್ಮದ ಫಲಗಳನ್ನು, ಪಾಪ, ರಾಷ್ಟ್ರೀಯ ಪಕ್ಷದ ವೀರರಿಗೆ ಅನುಭವಿಸಬೇಕಾಯಿತು!

ಶ್ರೀ ಅರವಿಂದರು ಕಾಂಗ್ರೆಸ್ ಸಭೆಯನ್ನು ಮುಗಿಸಿಕೊಂಡು, ಪ್ರವಾಸ ಮಾಡಿ ವ್ಯಾಖ್ಯಾನಗಳನ್ನು ಕೊಡುತ್ತ, ಕಲಕತ್ತೆ ಬಂದು ಸ್ವಲ್ಪ ವಿಶ್ರಾಂತಿಯನ್ನು ತಕ್ಕೊಳ್ಳಹತ್ತಿದರು. ಅಷ್ಟರಲ್ಲಿ ಭಾವೀ ಗಂಡಾಂತರದ ಸುದ್ದಿಗಳು ಅವರ ಕಿವಿಯ ಮೇಲೆ ಬೀಳಹತ್ತಿದವು. ಸಹಕಾರಿ ಭಗಿನಿಯಾದ ಸಿಸ್ಟರ್ ನಿವೇದಿತೆ[1]ಯು ಶ್ರೀ ಅರವಿಂದರಿಗೆ ಎಲ್ಲಿಗಾದರೂ ಹೋಗಲಿಕ್ಕೆ ಆಗ್ರಹ ಮಾಡಿದಳು. ಆದರೆ ತಾನು ನಿರ್ದೋಷಿ ಇರುವ ಕಾರಣ ಎಳ್ಳಷ್ಟೂ ಭಯಪಡುವದಿಲ್ಲ; ಬಂದದ್ದು ಬರಲಿ ಎಂದು ಸಂಕಟವನ್ನು ಎದುರುಗೊಳ್ಳಲಿಕ್ಕೆ ಸಿದ್ಧರಾದರು!

1908ನೇ ಇಸವಿ, ಅದು ದೇಶೀ ಚಳವಳಿಯು ಅತ್ಯುತ್ಕರ್ಷವನ್ನು ತಲುಪಿದ ಅವಧಿ. ಅದರಂತೆ ಸರಕಾರದ ರೌಸಿನ[2] ಕಾಲವೂ ಆಗಿತ್ತು. ಇಂದು ಯಾರ ಮೇಲೆ ಪೋಲೀಸರ ಕೃಪಾದೃಷ್ಟಿ ಬಿದ್ದು ಬಾಡಿಗೆ ಇಲ್ಲದ ಮನೆಯ ವಾಸವು ಲಭಿಸುವದೆಂಬ ನಿಯಮವಿದ್ದಿಲ್ಲ. ಮೈ–ಕೈಯಿಂದ ಪುಷ್ಟವಾಗಿರುವದೂ ಈ ಕಾಲಕ್ಕೆ ಅಪರಾಧವಾಗಿತ್ತು. ಎಲ್ಲಿ ನೋಡಿದಲ್ಲಿ ಗುಪ್ತ ಪೋಲೀಸರು ಬೆರೆತುಕೊಂಡಿದ್ದರು.

ಅವರಿಂದ ನಿರಪರಾಧಿಗಳು ಗೋಳಾಡಿಸಲ್ಪಟ್ಟರು. 1908ನೇ ಇಸವಿ ಮೇ ತಿಂಗಳ ಎರಡು ದಿನಗಳು ಗತಿಸಿದ್ದವು. ಮೂರನೇಯ ದಿನದ ಆರಂಭವನ್ನು ಸೂಚಿಸಲಿಕ್ಕೆ ಭಗವಾನ್ ಸೂರ್ಯನಾರಾಯಣನು ಇನ್ನೂ ಕ್ಷಿತಿಜದ ಮೇಲೆ ಕೂಡ ಬಂದಿದ್ದಿಲ್ಲ. ಶ್ರೀ ಅರವಿಂದ ಬಾಬುಗಳು ಇನ್ನೂ ಹಾಸಿಗೆಯಲ್ಲಿದ್ದರು. ಅಷ್ಟರಲ್ಲಿ ರಾಜದೂತರು ಸಶಸ್ತ್ರರಾಗಿ ಶ್ರೀ ಘೋಷರವರ ಮನೆಯನ್ನು ಮುತ್ತಿದರು. ಮುಖ್ಯಾಧಿಕಾರಿಗಳು ಮನೆಯನ್ನು ಹೊಕ್ಕರು. ಒಬ್ಬ ಸಿಪಾಯಿಯು ಅಲ್ಲಿ ನಿಂತಿದ್ದ ಶ್ರೀ ಅರವಿಂದರ ತಂಗಿ ಸರೋಜಿನಿಯ ಎದೆಗೆ ಪಿಸ್ತೂಲು ಆನಿಸಿದನು! ಪೊಲೀಸರು ಶಯನ ಗೃಹವನ್ನು ಹೊಕ್ಕರು. ಶ್ರೀ ಅರವಿಂದರನ್ನು ಹೆಡಮುಡಿಗಟ್ಟಿ ತಕ್ಕೊಂಡು ಹೋದರು!

ಮಝುಪುರದಲ್ಲಿ ಕೆಲವು ತಲೆತಿರುಕರು ಬಾಂಬಿನಿಂದ ಇಬ್ಬರು ಯುರೋಪಿಯನ್ ಸ್ತ್ರೀಯರನ್ನು ಕೊಂದಿದ್ದರು. ಈ ಕೃತ್ಯದಲ್ಲಿ ಶ್ರೀ ಅರವಿಂದ ಘೋಷರ ಅಂಗವಿತ್ತೆಂದೂ, ದರೋಡೆಗಳಿಗೆ ಸಹಾಯ ಮಾಡುವರೆಂದೂ ಪೊಲೀಸರು ಸಂಬಂಧವನ್ನು ಜೋಡಿಸಿದರು. ಈ ಖೂನೀ ಪ್ರಕರಣದಲ್ಲಿ ಸುಮಾರು 39 ಜನ ಆರೋಪಿತರಿದ್ದರು. ಅವರಲ್ಲಿ ಕೆಲವರಿಗೆ ಮೊಗಮೀಸೆಗಳೂ ಸಹ ಒಡೆದಿದ್ದಿಲ್ಲ. ಸಣ್ಣವರೇನು, ದೊಡ್ಡವರೇನು, ಪೊಲೀಸರಿಗೆ ಯಾರ ಬಗೆಗೆ ಸಂಶಯ ಬಂತೊ, ಯಾರು ಚಳವಳಿಯಲ್ಲಿ ಹೆಚ್ಚಾಗಿ ಭಾಗ ತಕ್ಕೊಳ್ಳುವದು ಎಂದು ಕಂಡು ಬರುತ್ತಿತ್ತೋ ಅಂಥ ಎಲ್ಲರ ಸಂಬಂಧವನ್ನು ಒಂದಿಲ್ಲೊಂದು ತರದಿಂದ ಜೋಡಿಸಿ, ಅಪರಾಧಿಗಳ–ನಿರಪರಾಧಿಗಳ ಹಿಂಡನ್ನು ಕೋರ್ಟಿನ ಮುಂದೆ ನಿಲ್ಲಿಸಿದರು. ಮೇ ತಿಂಗಳ 18ನೇ ತಾರೀಖಿಗೆ ನ್ಯಾಯ ವಿಚಾರಣೆಯು ಆರಂಭವಾಯಿತು. ಶ್ರೀ ಅರವಿಂದರನ್ನು ಅಲೀಪುರದ ಜೇಲಿಗೆ ಒಯ್ದರು. ಅಲ್ಲಿ ಏಕಾಂತವಾಸದ ಶಿಕ್ಷೆಯನ್ನೂ ನ್ಯಾಯ ನಿರ್ಣಯವಾಗುವ ಮುಂಚಿತವಾಗಿಯೇ ಕೆಲವು ದಿನ ಅನುಭವಿಸಬೇಕಾಯಿತು!

ನ್ಯಾಯ ವಿಚಾರಣೆಯು ಆರಂಭದಲ್ಲಿ ಅಲಿಪುರದ ಮ್ಯಾಜಿಸ್ಟ್ರೇಟರಾದ ಮಿ.ಬಿರ್ಲೇ ಎಂಬುವವರ ಮುಂದೆ ನಡೆಯಿತು. ಕನ್ನಯ್ಯಲಾಲ ದತ್ತ ಮತ್ತು ಸತ್ಯೇಂದ್ರನಾಥ ಬೋಸ್ ಎಂಬೀರ್ವ ಆರೋಪಿಗಳು ಮಾಫೀ ಸಾಕ್ಷಿದಾರನ ಕೊಲೆಯನ್ನು ಮಾಡಿದರು. ಅರ್ಥಾತ್ ಇವರಿಗೆ ದೇಹಾಂತ ಶಿಕ್ಷೆಯು ವಿಧಿಸಲ್ಪಟ್ಟಿತು. ಆದರೆ ಸತ್ಯೇಂದ್ರನು ಹೈಕೋರ್ಟಿಗೆ ಅಪೀಲು ಮಾಡಿದ್ದರಿಂದ, ಮೊದಲಿಗೆ ಕನ್ನಯ್ಯಲಾಲನ ದೇಹಾಂತ ಶಿಕ್ಷೆಯು ಅಮಲಿನಲ್ಲಿ ಬಂತು.

ಕನ್ನಯ್ಯಲಾಲನ ಮೃತದೇಹಕ್ಕೆ ಅಗ್ನಿ ಸಂಸ್ಕಾರವನ್ನು ಮಾಡುವದಕ್ಕಾಗಿ ಪರವಾನಿಗೆಯು ಸಿಕ್ಕಿತು. ಅವರು ಆತನ ದೇಹವನ್ನು ಬಹು ಆದರದಿಂದ ದಹನ ಮಾಡಿದರು, ಸಾವಿರಾರು ಜನರು ಸೂತಕದ ವೇಷದಿಂದ ದಹನ ಭೂಮಿಗೆ ಹೋಗಿದ್ದರು. ಸುಗಂಧ ದ್ರವ್ಯಗಳ ಮಧ್ಯದಲ್ಲಿ ಆತನ ದೇಹವನ್ನು ಇಟ್ಟು ಪೂಮಾಲೆಗಳಿಂದ ಸತ್ಕರಿಸಿ ಚಿತೆಯನ್ನು ಹೊತ್ತಿಸಿದರು. ಸತ್ಯೇಂದ್ರನ ಅಪೀಲು ರದ್ದು ಆಗಿ, ಮೊದಲು ವಿಧಿಸಿದ್ದ ಶಿಕ್ಷೆಯೇ ನಿಶ್ಚಿತವಾಯಿತು. ಈತನ ಮೃತ ಶರೀರಕ್ಕೆ ಅಗ್ನಿ ಸಂಸ್ಕಾರ ಮಾಡಲಿಕ್ಕೆ ಆಪ್ತರಿಗೆ ಪರವಾನಿಗೆ ಸಿಗಲಿಲ್ಲ! ಮಿ.ಬಿರ್ಲೆಯವರು ವಿಚಾರಣೆ ಮಾಡಿ ಒಬ್ಬ ಆರೋಪಿಯನ್ನು ದೋಷಮುಕ್ತವಾಗಿ ಮಾಡಿ, ಖಟ್ಲೆಯನ್ನು ಸೆಶನ್ ಕಮೀಟಿ ಮಾಡಿದರು.

ಶ್ರೀ ಅರವಿಂದ ಘೋಷರು ಲಕ್ಷ್ಮಿಯ ತ್ಯಾಗ ಮಾಡಿ ದಾರಿದ್ರ್ಯಲಕ್ಷ್ಮಿಯ ಪಾಣಿಗ್ರಹಣ ಮಾಡಿದ್ದರಿಂದ ಈ ಖಟ್ಲೆಯ ಕಾಲಕ್ಕೆ ಆರ್ಥಿಕ ಕೊರತೆ–ಯುಂಟಾಯಿತು. ಬಾಬುಗಳು ಸೆರೆಮನೆಯಲ್ಲಿ ಇದ್ದುದರಿಂದ ಇತ್ತ ಹೊರಗಡೆಗೆ ಖಟ್ಲೆಯ ವ್ಯವಸ್ಥೆಯನ್ನು ಮಾಡಲಿಕ್ಕೆ ಯಾರೂ ಇರಲಿಲ್ಲ! ಬ್ಯಾರಿಷ್ಟರುಗಳಿಗೆ ಕೊಡಲಿಕ್ಕೆ ದುಡ್ಡು ಇಲ್ಲದ್ದರಿಂದ, ಅವರ ತಂಗಿಯಾದ ಸರೋಜಿನಿದೇವಿಯು ಚಿಂತೆಯಲ್ಲಿ ಬಿದ್ದಳು. ಆಗ ಸಾಮಾಜಿಕರಿಗೆ ಉದ್ದೇಶಿಸಿ ಅವಳೊಂದು ವಿನಂತಿ ಪತ್ರವನ್ನು ಪ್ರಕಟಿಸಿದ್ದಳು. ನಿಸ್ವಾರ್ಥಿಗಳೂ, ದೇಶಸೇವಕರೂ ಆದ ಅರವಿಂದ ಬಾಬುಗಳ ಕಾರ್ಯಕ್ಕೆ ಇಂಥ ಸಮಯದಲ್ಲಿ ಸಹಾಯ ಮಾಡಲಿಕ್ಕೆ ಒಲ್ಲದ ಪಾಪಿಯಾದರೂ ಯಾರು? ಮಗುವು ಸೃಷ್ಟಿಯನ್ನು ಆತ್ಮಭಾವವನ್ನು ಬಿಟ್ಟು ಆನಂದಿತವಿರುವವರೆಗೆ ಅದರ ಚಿಂತೆಯನ್ನು ಯಾರು ವಹಿಸುವರು? ಸ್ವಾರ್ಥಪರಭಾವನೆಯು ಹೆಚ್ಚಾಗುತ್ತ ನಡೆದಂತೆ ಪರರ ಜವಾಬುದಾರಿಯು ಕಡಿಮೆಯಾಗುತ್ತ ಹೋಗುವದು. ಇರಲಿ, ಸಾಕಷ್ಟು ದುಡ್ಡೂ ಕೂಡಿತು. ಶ್ರೀಯುತ ಸಿ.ಆರ್. ದಾಸ(ಚಿತ್ತರಂಜನ ದಾಸ)ರಂಥ ಅಗಾಧ ಕಾಯಿದೆ ಪಂಡಿತನು ಸ್ವಯಂಪ್ರೇರಣೆಯಿಂದ ದೇಶಸೇವಕ ಶ್ರೀ ಅರವಿಂದರನ್ನು ಉಳಿಸಿಕೊಳ್ಳುವದಕ್ಕೆ ಒಂದು ಕಾಸೂ ತೆಗೆದುಕೊಳ್ಳದೇ ಮುಂದೆ ಬಂದನು!

ಅಲೀಪುರದ ಸೆಶನ್ ಕೋರ್ಟಿನಲ್ಲಿ ಬೀಚ್‌ಕ್ರಾಫ್ಟ್ ಎನ್ನುವ ನ್ಯಾಯಾಧೀಶನ ಮುಂದೆ ಈ ಖಟ್ಲೆಯು ನಡೆಯಿತು. ನ್ಯಾಯವಿಚಾರಣೆಯು ಅಕ್ಟೋಬರ 23 ಕ್ಕೆ ಆರಂಭವಾಗಿ, ಸರಕಾರದ ವತಿಯಿಂದ ಪ್ರಸಿದ್ಧ ಬ್ಯಾರಿಷ್ಟರ್ ಆಗಿದ್ದ ನಾರ್ಟನ್ ಎನ್ನುವವರಿದ್ದು, ಅವರಿಗೆ ಆಶುತೋಷ ವಿಶ್ವಾಸ ಎನ್ನುವವರು ಸಹಾಯ

ಮಾಡುತ್ತಿದ್ದರು. ಇಲ್ಲಿ ಸ್ವಯಂಸ್ಫೂರ್ತಿಯಿಂದ ಮುಂದೆ ಬಂದ ಶ್ರೀಯುತ ಚಿತ್ತರಂಜನದಾಸರು ಶ್ರೀ ಅರವಿಂದರ ಪಕ್ಷವನ್ನು ವಹಿಸಿದ್ದರು. ಸರಕಾರೀ ವಕೀಲರಾದ ಆಶುತೋಷ ವಿಶ್ವಾಸ ಎಂಬುವವರಿಗೆ ಕೆಲವು ಗುಪ್ತ ಪತ್ರಗಳೂ ಬಂದವು. ಅವುಗಳಲ್ಲಿ, ಈ ಖಟ್ಲೆಗೆ ಆರೋಪಿಗಳ ವಿರುದ್ಧ ಸರಕಾರಕ್ಕೆ ಸಹಾಯ ಮಾಡಬಾರದೆಂದೂ, ಒಂದು ವೇಳೆ ಹಾಗೆ ಮಾಡಿದ್ದೇ ಆದಲ್ಲಿ ಜೀವಕ್ಕೆ ಎರವಾಗಬೇಕಾದೀತು ಎಂದೂ ಬರೆಯಲಾಗಿತ್ತು. ಈ ಪತ್ರಗಳು ಬಂದ ನಂತರ ಕೆಲವು ದಿನಗಳು ಗತಿಸಿದವು. ಮುಂದೆ 1908ನೆ ಇಸವಿಯ ಫೆಬುವರಿ 18ನೇ ತಾರೀಖಿನಂದು ಆಶುತೋಷರ ಕೊಲೆಯೂ ಆಯಿತು.

ಈ ಮಝುಪುರದ ಖೂನಿ ಖಟ್ಲೆಯು ಮುಂದೆ ಅನೇಕ ದಿನಗಳವರೆಗೆ ಸಾಗಿದರೂ, ಶ್ರೀ ಅರವಿಂದರ ಆರೋಪದ ನಿರ್ಣಯವು ಇದೇ ಕೋರ್ಟಿನಲ್ಲಿಯೇ ಆಯಿತು. 16 ದಿವಸಗಳವರೆಗೆ ಸರಕಾರದ ಪಕ್ಷವನ್ನು ನಾರ್ಟನ್ನರು ಮಂಡಿಸಿದರು. ಆದರೆ ಸಿ.ಆರ್.ದಾಸರು 8 ದಿನಗಳ ಕಾಲ ಶ್ರೀ ಅರವಿಂದರ ಪಕ್ಷವನ್ನು ಮಂಡಿಸಿ ಸರಕಾರದ ಪಕ್ಷವನ್ನು ಸಪ್ರಮಾಣವಾಗಿಯೇ ಖಂಡಿಸಿದರು. ಶ್ರೀಯುತ ದಾಸರವರು ಈ ಕಾಲಕ್ಕೆ ಮಾಡಿದ ವಕ್ತೃತ್ವಪೂರ್ಣ ಭಾಷಣಗಳು ಭಾಷೆಯ ದೃಷ್ಟಿಯಿಂದಲೂ ವಾಙ್ಮಯದಲ್ಲಿ ಅಜರಾಮರವಾಗಿ ಉಳಿದಿವೆ. ಈ ಖಟ್ಲೆಯ ಅಸ್ಸೆಸರರೂ ಎರಡೂ ಪಕ್ಷಗಳ ವಾದಗಳನ್ನು ಕೇಳಿಕೊಂಡು, ವಿಚಾರ ಮಾಡಿ, ಶ್ರೀ ಅರವಿಂದ ಬಾಬುಗಳು ನಿರಪರಾಧಿ ಎಂದು ದಿನಾಂಕ 13ನೆ ಏಪ್ರಿಲ್ 1909 ರಂದು ತಮ್ಮ ಅಭಿಪ್ರಾಯವಿತ್ತರು. ನ್ಯಾಯಾಧೀಶರು ಮುಂದೆ ಒಂದು ತಿಂಗಳವರೆಗೂ ಮೌನಧಾರಣೆ ಮಾಡಿ, ಕೊನೆಗೆ ಮೇ ತಿಂಗಳಲ್ಲಿ ಶ್ರೀ ಅರವಿಂದರು ಪೂರ್ಣ ನಿರ್ದೋಷಿಗಳೆಂದು ತೀರ್ಪು ಕೊಟ್ಟರು! ಈ ಖಟ್ಲೆಯ ಉಳಿದ ಕೆಲವು ಆರೋಪಿಗಳು ಹೈಕೋರ್ಟಿಗೆ ಕಳಿಸಲ್ಪಟ್ಟರು. ಅಲ್ಲಿ ಅವರೆಲ್ಲರ ನ್ಯಾಯವಿಚಾರಣೆಯಾಗಿ ಹದಿನಾಲ್ಕು ಮಂದಿ ಮಾತ್ರ ದೋಷಿಯೆಂದು ನಿರ್ಣಯವಾಯಿತು! ಬಂಧಿಸಿದ್ದು 39 ಜನರನ್ನು ಆದರೆ ಈಗ ನಿರ್ಣಯವಾದದ್ದು ಕೇವಲ 14 ಜನರು ಮಾತ್ರ! ಯಾರ ಪಾಪವನ್ನು ಯಾರು ಅನುಭವಿಸಬೇಕಾಯಿತು?

ಶ್ರೀ ಅರವಿಂದ ಬಾಬುಗಳಂತಹ ಧಾರ್ಮಿಕ ವೃತ್ತಿಯ ಸಜ್ಜನರು ಕೊಲೆಗಳಂಥ ಹೇಡಿ ಕೃತ್ಯಗಳಿಗೆ ಎಂದಾದರೂ ಅನುಕೂಲವಿರುವದುಂಟೇ? ಸುಳ್ಳು ಆರೋಪದ ಸಲುವಾಗಿ ಒಂದು ವರುಷದವರೆಗೆ ಕಾರಾಗೃಹವನ್ನು

ಸುಮ್ಮಸುಮ್ಮನೇ ಅನುಭವಿಸಬೇಕಾಯಿತು. ಸೆರೆಮನೆಯಿಂದ ಬಂದ ಬಳಿಕ ಅವರ ಆಪ್ತರಾದ ಕೃಷ್ಣಕುಮಾರ ಘೋಷರಲ್ಲಿ ವಿಶ್ರಾಂತಿಯನ್ನು ತಕ್ಕೊಂಡರು. ಶ್ರೀ ಅರವಿಂದ ಘೋಷರ ಆಗಮನದಿಂದ ರಾಷ್ಟ್ರೀಯ ಪಕ್ಷದ ಜನರಿಗೆ ಹೇಳಲಾರದಷ್ಟು ಆನಂದವಾಯಿತು. ಯಾಕೆಂದರೆ ಲೋಕಮಾನ್ಯ ತಿಲಕರೇ ಮೊದಲಾದ ವೀರಪಕ್ಷದ ಅಧ್ವರ್ಯುಗಳು ಸರಕಾರದ ಆತಿಥ್ಯವನ್ನು ಸ್ವೀಕರಿಸಲಿಕ್ಕೆ ಕಾರಾಗೃಹಕ್ಕೆ ಹೋಗಿದ್ದರು. ವೀರಪಕ್ಷದ ಅನುಯಾಯಿಗಳಿಗೆ ಮಾರ್ಗದರ್ಶಕರಾರೂ ಹೊರಗಡೆಗೆ ಉಳಿದಿದ್ದಲ್ಲ. ದಳವಾಯಿಯನ್ನು ಕಳೆದುಕೊಂಡ ಸೈನ್ಯದಂತೆ ಸ್ಥಿತಿಯಾಗಿತ್ತು. ಯಾರ ಧ್ವಜದ ಕೆಳಗೆ ಏಕತ್ರರಾಗಬೇಕು, ಯಾರ ಆಜ್ಞೆಗಳನ್ನು ಮನ್ನಿಸಿ ಕಾರ್ಯ ಮಾಡಬೇಕೆಂದು ತಿಳಿಯದ ಕಾರಣ ಅವರು ಗೊಂದಲದಲ್ಲಿ ಬಿದ್ದಿದ್ದರು. ಇಂಥ ಸಮಯದಲ್ಲಿ ಶ್ರೀ ಅರವಿಂದರು ಬಂದುದರಿಂದ ದೇಶಕ್ಕೆ ಹೇಗೆ ತಾನೆ ಆನಂದವಾಗದೇ ಇದ್ದೀತು? ಶ್ರೀ ಅರವಿಂದರು ದೋಷಮುಕ್ತರಾದ ಸುದ್ದಿಯು ತಂತಿಯಿಂದ ದೇಶದಲ್ಲೆಲ್ಲ ಪಸರಿಸಿತು. ಹಲವು ಕಡೆಗೆ ದೊಡ್ಡ ದೊಡ್ಡ ಸಭೆಗಳಾಗಿ, ಜನರು ತಮ್ಮ ಆನಂದವನ್ನು ವ್ಯಕ್ತಪಡಿಸಹತ್ತಿದರು. ಸರಕಾರಕ್ಕೆ ಬೇಡವಾದ ಮನುಷ್ಯನ ವಿಷಯದಲ್ಲಿ ಆದರವನ್ನು ವ್ಯಕ್ತಪಡಿಸುವದು ಕೂಡ ಆ ಕಾಲಕ್ಕೆ ಬಲು ಬಿಗಿಯಾಗಿತ್ತು. ಆದರೆ ಜನರ ಅಂತಃಕರಣವು ಉಕ್ಕೇರಿದವು. ಹುಣ್ಣಿಮೆಯ ದಿನ ಮೋಡಗಳು ಸಮುದ್ರಕ್ಕೆ ಉಕ್ಕು ಬರಬಾರದೆಂದು ಅಡ್ಡ ಬರುವ ಕ್ಷುಲ್ಲಕ ಪ್ರಯತ್ನಗಳನ್ನು ಮಾಡಿದರೂ ಅದರ ಉಪಯೋಗವೇನಾಗಬೇಕಿದೇ?

* * *

## ಯೋಗ ಸಾಧನ

**ಕರ್ಮಿಭ್ಯಶ್ಚಾಧಿಯೋಗೀ ತಸ್ಮಾದ್ಯೋಗೀ ಭವಾರ್ಜುನ ।**

**– ಭಗವದ್ಗೀತೆ**

ಪಿತಾಮಹ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ನಿಶ್ಚಿತವಾದ ಸ್ವರಾಜ್ಯದ ಧ್ಯೇಯವನ್ನು ಪೂರ್ಣ ಮಾಡಲಿಕ್ಕೆ ವೀರಪಕ್ಷವು ಆತ್ಮ ಯಜ್ಞವನ್ನು ಮಾಡಿತು. ಆದರೆ ವೀರಪಕ್ಷದ ಅನುಕರಣವನ್ನು ಇತರರು ಮಾಡಲಿಲ್ಲ. ಶ್ರೀ ಭಗವತೀ ಸ್ವಾತಂತ್ರ್ಯದೇವಿಯ ಉಪಾಸನೆಯು ಸಹಜವಾದ ಮಾತಲ್ಲ. ಭಕ್ತರಿಗೆ ಪ್ರಸನ್ನಳಾಗುವ ಮುಂಚೆ ಅವಳು ಅವರ ಪರೀಕ್ಷೆ ಮಾಡುವಳು. ಸ್ವರಾಜ್ಯಾಮೃತವನ್ನು ಸಂಪಾದಿಸಲಿಕ್ಕೆ ರಾಜಕಾರಣೋಧದಿಯ

ಮಂಥನವು ಭರದಿಂದ ನಡೆಯಿತು. ಅಮೃತಸಿದ್ಧಿಯಾಗುವ ಮೊದಲು ಹಾಲಾಹಲವು ಸತ್ವಪರೀಕ್ಷಣೆಗಾಗಿ ಹೊರಬೀಳುತ್ತಿರುತ್ತದೆ. ವಿಶ್ವಾಮಿತ್ರನ ತಪಶ್ಚರ್ಯಕ್ಕೆ ಮಧ್ಯದಲ್ಲಿ ಅನೇಕ ವಿಘ್ನಗಳು ಬಂದವು. ಅರ್ಜುನನಿಗೆ ಪಾಶುಪತಾಸ್ತ್ರವನ್ನು ದೊರಕಿಸುವ ಸಮಯದಲ್ಲಿ, ಶಬರ ವೇಷಧಾರಿಯಾದ ಶಂಕರನಿಂದ ಮೈಮುರಿಯೇ ಥಳಿಸಿಕೊಳ್ಳಬೇಕಾಯಿತು. ಅಂತೂ ಯಾವುದೊಂದು ಮಹಾಕಾರ್ಯದ ಸಿದ್ಧಿಯಾಗುವ ಮುಂಚೆ ಮಧ್ಯದಲ್ಲಿ ಸಂಕಟಗಳು ಬರುವದು ನಿಶ್ಚಿತವಾದದ್ದು. ಈ ಸಂಕಟಗಳಿಗೆ ಭಯಪಟ್ಟು ಮಾರ್ಗವನ್ನು ಬಿಟ್ಟುಬಿಟ್ಟರೆ ಸಿದ್ಧಿಯು ದೊರೆಯಲಾರದು. ಸತ್ವಗೆಡದೇ ಬಂದುದನ್ನು ಸಹಿಸಿ ತನ್ನ ಧ್ಯೇಯದ ಕಡೆಗೆ ಲಕ್ಷ್ಯವಿಟ್ಟು ಕಾರ್ಯ ಮಾಡಿದರೆ ಯಾವುದು ತಾನೇ ಅಸಾಧ್ಯವು?

ಸ್ವರಾಜ್ಯದ ಆಕಾಂಕ್ಷಿಗಳಾಗಿದ್ದ ಭಾರತೀಯರ ಸತ್ವಪರೀಕ್ಷೆ ಕಾಲವು ಬಂತು. ಅವರು ಸಂಪೂರ್ಣವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ. ಜಗತ್ತಿನಲ್ಲಿ ಬಿತ್ತಿದ್ದನ್ನು ಬೆಳಕೊಳ್ಳಬೇಕೆಂಬ ನ್ಯಾಯವಿದೆ. ಪೇಟೆಯಲ್ಲಿ ಒಂದು ಆಣೆ[3]ಯನ್ನು ಕೊಟ್ಟು ನಾಲ್ಕು ಆಣೆಯ ಜೀನಸ[4]ವನ್ನು ಬೇಡಿದರೆ ಹೇಗೆ ಸಿಕ್ಕೀತು? ಸ್ವಾತಂತ್ರ್ಯದೇವಿಯ ಪರೀಕ್ಷೆಯಲ್ಲಿ ಪೂರ್ಣವಾಗಿ ಪಾಸಾಗದ್ದರಿಂದ ಅವರ ಗುಣಕ್ಕೆ ತಕ್ಕಂತೆ ಅಷ್ಟೇ ಫಲವು ದೊರೆಯಿತು. ಮೋರ್ಲೆ ಮಿಂಟೋ ಸುಧಾರಣೆಗಳಂತಹ ದೀಡದಮಡಿಯ[5] ಬೆಲೆಯ ಸುಧಾರಣೆಗಳು ಅಮಲಿನಲ್ಲಿ ಬಂದವು. ಆಶೆಬುರುಕ ಮಂದಪಕ್ಷದವರು ಇಂಥ ಗೀಳು ಸುಧಾರಣೆಗಳನ್ನೇ ಅಮಚಿ[6]ಕೊಂಡರು. ವೀರಪಕ್ಷದವರು ಇವುಗಳನ್ನು ತಿರಸ್ಕರಿಸಿ ಇಷ್ಟ ಧ್ಯೇಯದ ಕಡೆಗೆ ಸಾಗಿದರು. ಆದರೆ ಸರಕಾರದವರು ಮಾತ್ರ ಇವರ ಬೆನ್ನು ಬಿಡಲೇ ಇಲ್ಲ.

ದೇಶದಲ್ಲಿ ವೀರಪಕ್ಷದ ಮುಖಂಡರನ್ನು ಉಳಿಯಗೊಡುವಂತಿಲ್ಲವೆಂಬ ಹಟ ತೊಟ್ಟಂತೆ ಸರಕಾರದ ಕೃತಿಗಳು ನಡೆದವು. ಲೋಕಮಾನ್ಯರಿಗೆ 6 ವರ್ಷಗಳ ಶಿಕ್ಷೆ ಕೊಟ್ಟು ಮಂಡಾಲೆ ಸೆರೆಮನೆಗೆ ಕಳಿಸಿತು. ಲಜಪತರಾಯರು ಗಡಿದಾಟಿಸಲ್ಪಟ್ಟರು. ಬಿಪಿನಪಾಲರು ಶಿಕ್ಷೆಯನ್ನು ಅನುಭವಿಸಿ ಬಂದ ನಂತರ, ಇಲ್ಲಿ ಇರುವದರಿಂದ ಕಾರ್ಯಕ್ಕೆ ಅನುಕೂಲವಾಗುವದಿಲ್ಲವೆಂದು ಇಂಗ್ಲಂಡಿಗೆ ಪಯಣ ಬೆಳೆಸಿದರು. ತಲೆತಿರುಕ ತರುಣರ ಮೂರ್ಖತನದ ಕೃತಿಗಳಿಂದ ವೀರಪಕ್ಷದ ಮುಖಂಡರನ್ನು ಹಿಡಿಯಲಿಕ್ಕೆ ಸರಕಾರಕ್ಕೆ ಅನುಕೂಲವಾಯಿತು. ಮುಂದಾಳುಗಳ ಅವಸ್ಥೆಯು ಹೀಗಾದ ಬಳಿಕ ಅನುಯಾಯಿ ವರ್ಗದ ಬೊಗಳಿ[7] ಎಷ್ಟೆಂದು ಹೇಳಬೇಕು? ಶ್ರೀ ಅರವಿಂದ ಘೋಷರು ಕಾರಾಗ್ರಹದಿಂದ

ಬರುವಷ್ಟರಲ್ಲಿ ಇಷ್ಟೆಲ್ಲ ಸ್ಥಿತಿಯಾಗಿತ್ತು. ದೇಶದಲ್ಲಿ ಎಲ್ಲ ಕಡೆಗೂ ಘೋರ ಶಾಂತತೆಯು ಪಸರಿಸಿತ್ತು. ವಂದೇ ಮಾತರಂದ ಪ್ರಣವೋಚ್ಚಾರವನ್ನು ಮಾಡಲಿಕ್ಕೆ ಜನರು ಹೆದರಹತ್ತಿದರು. 1909ರಲ್ಲಿ ಕಾರಾಗ್ರಹದಿಂದ ಬಂದ ಬಳಿಕ ಶ್ರೀ ಅರವಿಂದರ ಕಡೆಗೆ ಇಡೀ ಹಿಂದೂಸ್ತಾನದ ವೀರಪಕ್ಷದ ಮುಖಂಡತನವು ಬಂತು; ಈ ಜವಾಬುದಾರಿಯ ಸ್ಥಾನಕ್ಕೆ ತಕ್ಕಂತೆ ಉತ್ಸಾಹದಿಂದ ಕಾರ್ಯಕ್ಕೆ ಆರಂಭಿಸಿದರು. 'ಕರ್ಮಯೋಗಿನ್' ಎನ್ನುವ ವಾರಪತ್ರಿಕೆಯಲ್ಲಿ ಲೇಖನಗಳನ್ನು ಬರೆಯಹತ್ತಿದರು. ದೇಶದಲ್ಲಿ ತಿರುಗಾಡಿ ರಾಷ್ಟ್ರಧರ್ಮದ ಗೀತೋಪದೇಶ ಮಾಡಹತ್ತಿದರು. ಶ್ರೀ ಅರವಿಂದರು ಹೋದ ಸಭೆಗಳಿಗೆ ಹಾಜರಾಗಲಿಕ್ಕೆ ಮಂದಪಕ್ಷದ ಜನರು ಅಂಜುತ್ತಿದ್ದರು. ಕೆಲವು ಪ್ರೆಸ್ಸಿನವರು ಇವರ ವ್ಯಾಖ್ಯಾನಗಳನ್ನು ಮುದ್ರಿಸಲಿಕ್ಕೆ ಬೆದರಹತ್ತಿದರು! ಸೋಡಚೀಟಿ,[8] ಅಮಲುದಾರರ ಮುಕ್ಕಾಮುಗಳನ್ನು ಮುದ್ರಿಸಲಿಕ್ಕೆ ಸವಿಗಲಿತಂಥ, ಹೊಟ್ಟೆಗಾಗಿ ಪ್ರೆಸ್ಸು–ಪತ್ರಿಕೆಗಳನ್ನು ವನಡೆಸುವಂಥ ಜನರು ಶ್ರೀ ಅರವಿಂದ ಘೋಷರ ತೇಜಸ್ವಿಗಳಾದ ವಿಚಾರಗಳನ್ನು ಮುದ್ರಿಸಲಿಕ್ಕೆ ಹೇಗೆ ಧೈರ್ಯ ತಾಳಬಲ್ಲರು? ಆನರು ತಮ್ಮ ಕರ್ತವ್ಯವನ್ನು ಮರೆತರೂ, ಶ್ರೀ ಅರವಿಂದರು ಎದೆಗುಂದದೇ ಅವ್ಯಾಹತವಾಗಿ ಕಾರ್ಯವನ್ನು ನಡೆಸಿದರು. ಸರಕಾರದಿಂದ ಪ್ರೇರಿತರಾದ ಚಾಡಿಬುರುಕ ಚಾರರು ನೆರಳಿನಂತೆ ಶ್ರಿ ಅರವಿಂದರ ಬೆನ್ನು ಬಿಡಲೇ ಇಲ್ಲ. ಆದರೆ ಇದಾವುದಕ್ಕೂ ಸೊಪ್ಪು ಹಾಕದೇ ಶ್ರೀ ಅರವಿಂದರು ಕಾರ್ಯತತ್ಪರರಾಗಿದ್ದರು.

(ಸಶೇಷ)

---

**ಟಿಪ್ಪಣಿಗಳು:**

1. ಸಿಸ್ಟರ್ ನಿವೇದಿತಾ – ಸ್ವಾಮಿ ವಿವೇಕಾನಂದರ ಶಿಷ್ಯೆ
2. ರೌಸಿನ – ರಭಸದ
3. ಆಣೆ – ಈಗಿನ ಆರು ಪೈಸೆಗೆ ಸಮನಾದ ನಾಣ್ಯ
4. ಜೀನಸು – ವಸ್ತುಗಳು/ಸಾಮಾನು
5. ದೀಡದಮಡಿ – ನಗಣ್ಯ
6. ಅಮಚಿಕೊಳ್ಳು – ಅಪ್ಪು ಹಾಕಿಕೊ
7. ಬೊಗಳಿ – ಆಕ್ರಂದ
8. ಸೋಡಚೀಟಿ – ವಿವಾಹ ವಿಚ್ಛೇದನ ನೋಟೀಸು.




ಮಾನವನ ರೂಪಧಾರಣೆಯಲಿಂತು ಪರಿತಾಪ ಸತತದಲ್ಲಿ
ನಿತ್ಯತ್ವವಿದುವು ಘಾತ–ಆಘಾತ ಸರಣಿಗಳ ಸಹಿಸುತಿಲ್ಲಿ,
ಮುಕ್ತತ್ವದೊಡನೆ ರಕ್ತ–ಋಜುವಿತ್ತು ಒಡಂಬಡಿಕೆಯನು ನೇದು
ಅವನದೇ ಅಮರ–ಶಾಂತಿಯಾ ದ್ವಾರಗಳನವನು ಪೂರ್ಣ ತೆರೆದು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 10 ಪುಟ 240)**

Photo: Imaging Savitri

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ತಲ್ಲೀಯ–ಭಾವ–ಘನ–ಸಮಾಧಿಯಲಿ ಏಕಾಂತವಾಗಿ ಇರುವ
ವನವಾಸಿ ಋಷಿಗಳೊಡನೀಗ ನಾ ಉಪನಯನಗೊಳುವ ಜೀವ;
ಪರಿಪೂರ್ಣ–ಕಾಂತಿ ಆಯಾಮಗಳಲಿ ಹೊಳೆಹೊಳೆವ ಶುಭ್ರ–ತೇಜ
ವಜ್ರಶೋಭೆಯಲಿ ಧಾರೆಗೊಳ್ಳುತಿಹ ಜಾಗ್ರತಿಯ ಸಲಿಲ–ಓಜ
ಸರ್ವಾತ್ಮದಲ್ಲಿ ಅಸ್ತಿತ್ವವಿರುವ ಅದೋ ಏಕೈಕವನ್ನು
ನಾ ದೃಷ್ಟಗೊಂಡೆ ಕ್ಷಣಮಿಂಚಿನಲ್ಲು ಈ ವಿಶ್ವಸತ್ಯವನು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 5 ರೇಣು 3 ಪುಟ 405)**

Photo: Imaging Savitri

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.